ಸಂಪುಟ: 06 ಸಂಚಿಕೆ: 63 ಪುಟಗಳು: 08 ಭಾನುವಾರ 17 ಮೇ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**

ಗುರು ಎಂದರೆ ವ್ಯಕ್ತಿಯಲ್ಲ, ಒಂದು ಶಕ್ತಿ. ಅಜ್ಞಾನದ ಕತ್ತಲೆಯ ಕಳೆದು ಸುಜ್ಞಾನದೆಡೆಗೆ ಕರೆದುಕೊಂಡು ಹೋಗುವ ಶಬ್ದವೇ ಗುರು.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಎಚ್‌ಡಿಕೆಗೆ ಅಸೂಯೆ, ಹೊಟ್ಟೆಯುರಿ! ಬೇರೆಯವರನ್ನು ಟೀಕಿಸುವುದು ಬಿಟ್ಟು ಬೇರೆ ಕೆಲಸ ಇಲ್ಲ

**● ಪಿಆರ್ ಆರ್ ರಸ್ತೆ ಭಾಗದಲ್ಲಿ ಹೆದರಿಸಿ ಆಸ್ತಿ ಬರೆಸಿಕೊಂಡಿರುವವರು ಕುಮಾರಸ್ವಾಮಿ ಅವರ ಅಣ್ಣ**

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರಿಗೆ ಅಸೂಯೆ ಹಾಗೂ ಹೊಟ್ಟೆ ಉರಿ ಇದೆ. ಬೇರೆಯವರ ಬಗ್ಗೆ ಟೀಕೆ ಮಾಡುವುದೇ ಅವರ ಕೆಲಸವಾಗಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ವಾಗ್ದಾಳಿ ನಡೆಸಿದ್ದಾರೆ. ಹೊರಮಾವಿನ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಶನಿವಾರ ಪ್ರತಿಕ್ರಿಯೆ ನೀಡಿದರು. ರಿಯಲ್ ಎಸ್ಟೇಟ್ ಮೂಲಕ ಆಸ್ತಿ ಮಾಡಿಕೊಂಡಿರುವುದು ಕುಮಾರಸ್ವಾಮಿ ಅವರ ಕುಟುಂಬದವರು. ಪಿಆರ್ ಆರ್ ರಸ್ತೆ ಭಾಗದಲ್ಲಿ ಹೆದರಿಸಿ ಆಸ್ತಿಗಳನ್ನು ಬರೆಸಿಕೊಳ್ಳುವ ಕೆಲಸವನ್ನು ಅವರ ಅಣ್ಣ ಮಾಡಿದ್ದಾರೆ ಎಂದು ತಿರುಗೇಟು ನೀಡಿದರು.

ಶುಲ್ಕ ಪಾವತಿಸಿ ಖಾತಾ ಬದಲಾವಣೆಗೆ ಮಾಡಿಕೊಳ್ಳಬೇಡಿ, ನಾವೇ ಅಧಿಕಾರಕ್ಕೆ ಬರುತ್ತೇವೆ ಎಂಬ ಎಚ್‌ಡಿಕೆ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ''ಕುಮಾರಸ್ವಾಮಿ ಅವರು ಬರೀ ಹಗಲುಗನಸು ಕಾಣುತ್ತಿರುತ್ತಾರೆ. ಬಿಡದಿ ಟೌನ್ ಶಿಪ್ ಮಾಡುವುದು ಬೇಡ ಎಂದು ನಿನ್ನೆ ಹೇಳಿದ್ದಾರಲ್ಲಾ? ಅದನ್ನು ಆರಂಭಿಸಿದ್ದು ಯಾರು? ಅವರೇ ಅಧಿಸೂಚನೆ ಹೊರಡಿಸಿದ್ದಾರೆ. ರಿಯಲ್ ಎಸ್ಟೇಟ್ ದಂಧೆ



ಮಾಡುತ್ತಿರುವವರು ಯಾರು? ಅವರ ಅಣ್ಣ ಪಿಆರ್ ಆರ್ ರಸ್ತೆ ನೆಪದಲ್ಲಿ ರಿಯಲ್ ಎಸ್ಟೇಟ್ ದಂಧೆ ಮಾಡಿದ್ದಾರೆ'' ಎಂದು ಕಿಡಿಕಾರಿದರು. ದೊಡ್ಡ ಗುಬ್ಬಿ, ಚಿಕ್ಕ ಗುಬ್ಬಿ ಭಾಗದಲ್ಲಿ ಕೇಳಿ ನೋಡಿ. ಅವರು ಹೇಗೆ

### ಆಡಳಿತ ಸುಧಾರಣೆಗೆ ಐದು ಪಾಲಿಕೆ ಮಾಡಿದ್ದೇವೆ

ಜನರಿಗೆ ಕುಡಿಯುವ ನೀರು ಕೊಡಿಸಲು ಆಗಿರಲಿಲ್ಲ. ನಾನು ಆ ಕೆಲಸ ಮಾಡಿದ್ದೇನೆ. ಜನರ ಆಸ್ತಿ ದಾಖಲೆ ಸರಿ ಮಾಡಲಾಗುತ್ತಿದೆ. ಬೆಂಗಳೂರು ನಗರದಲ್ಲಿ ಆಡಳಿತ ಸುಧಾರಣೆಗೆ ಐದು ಪಾಲಿಕೆ ಮಾಡಿದ್ದೇವೆ. ನನ್ನ ಕೆಲಸ ಉತ್ತಮವಾಗಿದೆ ಎಂದು ಬಿಜೆಪಿಗರೇ ಖುಷಿ ಪಡುತ್ತಿದ್ದಾರೆ. ಈ ವಿಚಾರದಲ್ಲಿ ಬಿಜೆಪಿಯವರ ಸಲಹೆಯನ್ನು ಪಡೆದು ಕೆಲಸ ಮಾಡುತ್ತಿದ್ದೇನೆ. ನನ್ನ ಕಾಲದಲ್ಲಿ ಇಂತಹ ಕೆಲಸ ಮಾಡುವ ಅವಕಾಶ ಸಿಗಲಿಲ್ಲವಲ್ಲ ಎಂದು ಅಸೂಯೆಯಲ್ಲಿ ಕೈ ಹಿಸುಕಿಕೊಂಡು ಟೀಕೆ ಮಾಡುತ್ತಿದ್ದಾರೆ. ಅವರಿಗೆ ಹೊಟ್ಟೆಯುರಿ ಬಿಟ್ಟು ಬೇರೆ ಏನು ಇಲ್ಲ ಎಂದು ಕಿಡಿಕಾರಿದರು. ಜನ್ಮದಿನಕ್ಕೆ ಅಧಿಕಾರ ಹಸ್ತಾಂತರವಾಗಲಿದೆ ಎಂದು ಕನಸುಕಾಣುತ್ತಿದ್ದರು ಎಂಬ ದೇವೇಗೌಡರ ಟೀಕೆ ಬಗ್ಗೆ ಕೇಳಿದಾಗ, ''ಅವರ ಮಗ ಅಧಿಕಾರ ಹಸ್ತಾಂತರ ವಿಚಾರದಲ್ಲಿ ಮಾಡಿದ್ದನ್ನು ಅವರು ಸ್ಮರಿಸಲಿ. ಆಮೇಲೆ ಬೇರೆ ವಿಚಾರದ ಬಗ್ಗೆ ಮಾತನಾಡಲಿ'' ಎಂದು ತಿರುಗೇಟು ನೀಡಿದರು.

ಜನರನ್ನು ಹೆದರಿಸಿ ಎಲ್ಲಾ ಆಸ್ತಿಗಳನ್ನು 7, 8, 10 ಲಕ್ಷಕ್ಕೆ ಆಸ್ತಿಗಳನ್ನು ನೋಂದಣಿ ಮಾಡಿಸಿಕೊಂಡಿದ್ದಾರೆ ಎಂಬುದನ್ನು ಹೇಳುತ್ತಾರೆ. ಈಗ ಆ ಆಸ್ತಿಗಳೆಲ್ಲ 25, 30, 50 ಕೋಟಿ ರೂ. ಆಸ್ತಿಯಾಗಿದೆ. ಅವರು ಬೇರೆಯವರ ಬಗ್ಗೆ ಮಾತನಾಡುವುದು ಬೇಡ ಎಂದರು.

''ಖಾತಾ ಪರಿವರ್ತನೆಗೆ 2% ಶುಲ್ಕ ಕಟ್ಟುವುದು ಬೇಡ ಎನ್ನುತ್ತಿದ್ದಾರಲ್ಲಾ ಎಂದು ಕೇಳಿದಾಗ, ಅವರದ್ದು ಹಗಲುಗನಸು.

ಅವರ ಸರ್ಕಾರ ಅಧಿಕಾರಕ್ಕೆ ಬರುವುದಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ, ಜನಪರ ಕೆಲಸ ಮಾಡುತ್ತಿದೆ. ಜನ ಇದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ'' ಎಂದು ಹೇಳಿದರು. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಏರಿಕೆಯಾಗಿದೆ,

ಚಿನ್ನ ಖರೀದಿ ಮಾಡಬೇಡಿ ಎಂದಿದ್ದಾರಲ್ಲಾ ಅದರ ಬಗ್ಗೆ ಮಾತನಾಡಲಿ. ಅದರ ಬಗ್ಗೆ ಯಾಕೆ ಮಾತನಾಡುತ್ತಿಲ್ಲ. ಬೇರೆಯವರ ವಿರುದ್ಧ ಟೀಕೆ ಮಾಡಿ, ಹೇಳಿಕೆ ನೀಡುವುದು ಬಿಟ್ಟರೆ ಅವರಿಗೆ ಬೇರೆ ಕೆಲಸವೇ ಇಲ್ಲ. ಅವರ ಕಾಲದಲ್ಲಿ ಬಡವರಿಗಾಗಿ ಒಂದು ಕೆಲಸ ಮಾಡಿದ್ದಾರಾ? ಎಂದು ಪ್ರಶ್ನಿಸಿದರು.

## ಮೇ ಅಂತ್ಯದೊಳಗೆ ಸಂಪುಟ ವಿಸ್ತರಣೆ ಸಾಧ್ಯತೆ: ರಾಯರಡ್ಡಿ

• ಉದಯವಾಹಿನಿ, ಕೊಪ್ಪಳ

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶೀಘ್ರದಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಲಿದ್ದು ರಾಜ್ಯದಲ್ಲಿ ಸಂಪುಟ ಪುನರ್ ರಚನೆ ಅಥವಾ ವಿಸ್ತರಣೆಯನ್ನು ಮೇ 30ರ ಒಳಗೆ ಮಾಡಬಹುದು' ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು. 'ಈಗಿನ ಅವಧಿ ಪೂರ್ಣಗೊಳ್ಳುವ ತನಕ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ ಎನ್ನುವ ನಂಬಿಕೆ ನನ್ನದು. ಪದೇ ಪದೇ ಮುಖ್ಯಮಂತ್ರಿ ಬದಲಾವಣೆ ಮಾಡುವುದು ಸರಿಯಲ್ಲ. ಸಂಪುಟ ಪುನರ್ ರಚನೆಯಾದರೆ ಉಳಿದ ಎರಡು ವರ್ಷಗಳ ಅವಧಿಯಲ್ಲಿ ಪರಿಣಾಮಕಾರಿಯಾದ ಆಡಳಿತ ಜನರಿಗೆ ನೀಡಬಹುದು. ನಮ್ಮಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು 2028ರಲ್ಲಿಯೂ ಅಧಿಕಾರಕ್ಕೆ ಬರಬಹುದು' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

## ಜಿ.ಟಿ. ದೇವೇಗೌಡರ ತಂತ್ರ ನಮಗೆ ಅರ್ಥವಾಗುತ್ತವೆ

• ಉದಯವಾಹಿನಿ, ಮೈಸೂರು

ಪಕ್ಷದಿಂದ ನಡೆಸಿದ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದ ಸಮಾರೋಪವನ್ನು ಮೇ 17 ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರಣದಿಂದಾಗಿಯೇ ಶಾಸಕ ಜಿ.ಟಿ. ದೇವೇಗೌಡರು ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡರನ್ನು ಭೇಟಿಯಾಗಿ, ಹುಟ್ಟುಹಬ್ಬದ ಶುಭಾಶಯಗಳನ್ನು ಬಹಳ ಮಂಚಿತವಾಗಿಯೇ ತಿಳಿಸಿದ್ದಾರೆ. ಈ ಎಲ್ಲಾ ತಂತ್ರಗಳೂ ನಮಗೆ ಅರ್ಥವಾಗುತ್ತವೆ' ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಟೀಕಿಸಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಜಿಟಿಡಿ ಅವರು ಮಾಡಿದ ತಪ್ಪನ್ನು ತಿದ್ದಿಕೊಂಡು ಪಕ್ಷದಲ್ಲೇ ಉಳಿಯುವುದಾದರೆ ನಮ್ಮ ಅಭ್ಯಂತರವೇನೂ ಇಲ್ಲ. ಪಕ್ಷದ ವರಿಷ್ಠರಿಗೆ ಅವರ ಮೇಲೆ ನಂಬಿಕೆ ಬಂದು ಅವರನ್ನು ಉಳಿಸಿಕೊಳ್ಳುವುದಾದರೆ ಅದಕ್ಕೂ ನಮ್ಮ ಅಭ್ಯಂತರವಿಲ್ಲ' ಎಂದರು.

## ತೈಲ ಬೆಲೆ ಏರಿಕೆ: ಮಧ್ಯಮ ವರ್ಗದ ಜನರ ಕುತ್ತಿಗೆಗೆ ಆರ್ಥಿಕ ಉರುಳು

• ಉದಯವಾಹಿನಿ, ಬೀದರ್

ಪೆಟ್ರೋಲ್ ಹಾಗೂ ಡೀಸೆಲ್ ದರವನ್ನು ಪ್ರತಿ ಲೀಟರ್‌ಗೆ ತಲಾ ರೂ.3 ಹೆಚ್ಚಿಸಿರುವ ಕೇಂದ್ರ ಸರ್ಕಾರದ ಜನವಿರೋಧಿ ನಿರ್ಧಾರ ಅತ್ಯಂತ ಖಂಡನೀಯ. ಈ ನಿರ್ಧಾರವು ಬಡ, ಮಧ್ಯಮ ವರ್ಗದ ಜನರ ಕುತ್ತಿಗೆಗೆ ಆರ್ಥಿಕ ಉರುಳು ಎಂದು ಬೀದರ್ ಲೋಕಸಭಾ ಕ್ಷೇತ್ರದ ಸಂಸದ ಸಾಗರ್ ಖಂಡ್ರೆ ತಿಳಿಸಿದ್ದಾರೆ. ಕೇಂದ್ರ ಸರ್ಕಾರದ ಈ ನಿರ್ಧಾರದಿಂದಾಗಿ ದೇಶದ ಹಾಗೂ ಜಿಲ್ಲೆಯ ಜನಸಾಮಾನ್ಯರು ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ದೇಶದಲ್ಲಿ ಈಗಾಗಲೇ ದಿನಬಳಕೆಯ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಇಂಥ ಪರಿಸ್ಥಿತಿಯಲ್ಲಿ ಇಂಧನ ದರವನ್ನು ಮತ್ತೆ ಏರಿಕೆ ಮಾಡಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಈಗಾಗಲೇ ಬೆಲೆ ಏರಿಕೆಯ ಸುಳಿಗೆ ಸಿಲುಕಿ ತತ್ತರಿಸುತ್ತಿರುವ ಬಡ ಹಾಗೂ ಮಧ್ಯಮ ವರ್ಗದ ಜನರ ಮೇಲೆ ಈ ದರ ಏರಿಕೆ ಮತ್ತಷ್ಟು ಆರ್ಥಿಕ ಹೊರೆಯನ್ನು ಹೊರಿಸಿದೆ ಎಂದು ಶನಿವಾರ ಈ ಕುರಿತು ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದ್ದಾರೆ. ನಿರಂತರವಾಗಿ ಏರಿಕೆಯಾಗುತ್ತಿರುವ ಇಂಧನ, ಅಡುಗೆ ಗ್ಯಾಸ್ ಹಾಗೂ ಅಗತ್ಯ ವಸ್ತುಗಳ ಬೆಲೆಯಿಂದಾಗಿ ಸಾಮಾನ್ಯ ಜನರ ಬದುಕು ದುಸ್ತರವಾಗಿದೆ. ಸಾರಿಗೆ ವೆಚ್ಚ ದುಬಾರಿಯಾಗುವುದರಿಂದ ತರಕಾರಿ, ಧಾನ್ಯ ಸೇರಿದಂತೆ ಪ್ರತಿಯೊಂದು ವಸ್ತುವಿನ ಬೆಲೆಯೂ ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಾಗಲಿದೆ. ಜನಸಾಮಾನ್ಯರಿಗೆ ಆರ್ಥಿಕ ನೆರವು ಹಾಗೂ ಪರಿಹಾರ ನೀಡಬೇಕಾದ ಕೇಂದ್ರ ಸರ್ಕಾರ, ಅದಕ್ಕೆ ತದ್ವಿರುದ್ಧವಾಗಿ ನಿರಂತರವಾಗಿ ಬೆಲೆ ಏರಿಕೆ ಮಾಡುತ್ತಿರುವುದು ಪ್ರಜಾಪ್ರಭುತ್ವದ ದುರಂತ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

**ಕೇರಳದಲ್ಲಿ ಸರ್ಕಾರ ರಚನೆ ಮತ್ತು ಹೊಸ ಮುಖ್ಯಮಂತ್ರಿ ಆಯ್ಕೆ ಯುದ್ಧವನ್ನು ಗೆದ್ದಿರುವ ಕಾಂಗ್ರೆಸ್ ಹೈಕಮಾಂಡ್, ನೆರೆಯ ಕರ್ನಾಟಕದಲ್ಲಿನ ನಾಯಕತ್ವ ಸವಾಲು ಸ್ವೀಕರಿಸುವ ನಿರ್ಧಾರ ಮಾಡಿದಂತಿದೆ. ಕರ್ನಾಟಕದಲ್ಲಿ ಸುದೀರ್ಘ ಅವಧಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ನಡುವೆ ನಾಯಕತ್ವ ಸ್ಪರ್ಧೆ ಏರ್ಪಟ್ಟಿದ್ದು, ಇದಕ್ಕೆ ಅಂತ್ಯಹಾಡಲು ಕಾಂಗ್ರೆಸ್ ಹೈಕಮಾಂಡ್ ಮುಂದಾಗಿದೆ.**

# ಕರ್ನಾಟಕ ನಾಯಕತ್ವ ವಿವಾದಕ್ಕೆ ಇತಿಶ್ರೀ?



**ಕರ್ನಾಟಕ ನಾಯಕತ್ವ ವಿವಾದಕ್ಕೆ ಅಂತ್ಯಹಾಡಲು ಹೈಕಮಾಂಡ್ ನಿರ್ಧಾರ**

• ಉದಯವಾಹಿನಿ, ಬೆಂಗಳೂರು





ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ, ಕರ್ನಾಟಕದ ನಾಯಕತ್ವ ಗೊಂದಲ ಬಗೆಹರಿಸಲು ಕಾಂಗ್ರೆಸ್ ಸಮಯಾವಕಾಶ ಕೇಳಿತ್ತು. ಈಗ ಚುನಾವಣೆಗಳು ಮುಗಿದು ಫಲಿತಾಂಶವೂ ಹೊರಬಿದ್ದಿದ್ದು, ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟದ ಸರ್ಕಾರ ರಚನೆಯಾಗಿದೆ. ಹೀಗಾಗಿ ಕಾಂಗ್ರೆಸ್ ಹೈಕಮಾಂಡ್, ಕರ್ನಾಟಕದತ್ತ ತಿರುಗಿ ನೋಡುವ ಸಾಧ್ಯತೆ ದಟ್ಟವಾಗಿದೆ.

ನವೆಂಬರ್‌ನಲ್ಲಿ ಸಂಭಾವ್ಯ ನಾಯಕತ್ವ ಪರಿವರ್ತನೆಯ ಬಗ್ಗೆ ತೀವ್ರವಾದ ಊಹಾಪೋಹಗಳು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ)ಯೊಳಗೆ ಕೇಳಿಬಂದಿದ್ದವು.

**ಕೇರಳದಲ್ಲಿ ನಾಯಕತ್ವ ಗೊಂದಲ ಬಗೆಹರಿಸಿದ ಕಾಂಗ್ರೆಸ್ ಹೈಕಮಾಂಡ್**

ಇದು ರಾಜಕೀಯ ಅನಿಶ್ಚಿತತೆಗೂ ಕಾರಣವಾಗಿತ್ತು. ಆ ಸಮಯದಲ್ಲಿ ಕಾಂಗ್ರೆಸ್ ಹೈಕಮಾಂಡ್ ನಿರ್ಣಾಯಕ ಪರಿಹಾರವನ್ನೂ ತಲುಪದೆಯೂ, ಬಿಕ್ಕಟ್ಟನ್ನು ತಡೆಯುವಲ್ಲಿ ಯಶಸ್ವಿಯಾಗಿತ್ತು. ಆದರೆ ಈಗ ಡಿಸಿಎಂ ಡಿಕೆ ಶಿವಕುಮಾರ್ ಬಣ ನಾಯತ್ವಕ್ಕಾಗಿ ಪಟ್ಟು ಹಿಡಿದಿದ್ದು, ಈ ಬಗ್ಗೆ ಪಟ್ಟದ ಆಕಾಂಕ್ಷಿಗಳಾಗಿದ್ದ ಕೆಸಿ ವೇಣುಗೋಪಾಲ್ ಮತ್ತು ರಮೇಶ್ ಚೆನ್ನಿತ್ತಿಲ ಅಸಮಾಧಾನಗೊಳ್ಳದಂತೆ ಮಾಡುವಲ್ಲಿ ಕಾಂಗ್ರೆಸ್ ಹೈಕಮಾಂಡ್ ಯಶಸ್ವಿಯಾಗಿದೆ.

ಇದು ಕರ್ನಾಟಕ ನಾಯಕತ್ವ ವಿವಾದವನ್ನೂ ಬಗೆಹರಿಸುವ ಉತ್ಸಾಹವನ್ನು ಹೈಕಮಾಂಡ್ ನಾಯಕರಲ್ಲಿ ತುಂಬಿದೆ.

ಮೈಸೂರಿನಲ್ಲಿ ಡಿಕೆ ಶಿವಕುಮಾರ್ ಅವರ ಬೆಂಬಲಿಗರು ಅವರನ್ನು ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸುವ ಹುಟ್ಟುಹಬ್ಬದ ಕೇಕ್ ಕತ್ತರಿಸಿ ಗಮನ ಸೆಳೆದಿದ್ದಾರೆ. ಇದ ಸಿದ್ದರಾಮಯ್ಯ ಬಣದ

**ನಾಯಕತ್ವ ಕಿತ್ತಾಟ ಮತ್ತೊಮ್ಮೆ ತೀವ್ರಗೊಳ್ಳುವ ನಿರೀಕ್ಷೆ**

**ಸಿದ್ದರಾಮಯ್ಯ ಡಿಕೆಶಿ ಬೇಡಿಕೆಗಳ ಬಗ್ಗೆ ಪ್ರತ್ಯೇಕ ಚರ್ಚೆ**

**ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ನಡುವಿನ ನಾಯಕತ್ವ ಕಿತ್ತಾಟ ಮತ್ತೊಮ್ಮೆ ತೀವ್ರಗೊಳ್ಳುವ ನಿರೀಕ್ಷೆಯಿದೆ. ಸಿದ್ದರಾಮಯ್ಯ ಸಂಪುಟ ಪುನರ್‌ರಚನೆ ಮತ್ತು ಖಾಲಿ ಇರುವ ಸಚಿವ ಸ್ಥಾನಗಳ ಭರ್ತಿಗೆ ಒತ್ತಾಯಿಸುತ್ತಿದ್ದರೆ, ಡಿಕೆ ಶಿವಕುಮಾರ್ ಅವರು ಪ್ರಸ್ತುತ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮಹತ್ವಾಕಾಂಕ್ಷೆಯನ್ನು ತೋರ್ಪಡಿಸಿದ್ದಾರೆ. ಈ ಬೆಳವಣಿಗೆಗಳು ಇಬ್ಬರನ್ನೂ ಕರೆದು ಮಾತನಾಡಿಸಲು ಸಕಾಲ ಎಂಬ ಸಂದೇಶವನ್ನು ಹೈಕಮಾಂಡ್‌ಗೆ ರವಾನಿಸಿದೆ. ಈ ಹಂತದಲ್ಲಿ ಸಂಪುಟ ಪುನರ್‌ರಚನೆಯು ಡಿಕೆ ಶಿವಕುಮಾರ್ ಅವರ ನಾಯಕತ್ವ ಪರಿವರ್ತನೆಯ ಆಶಯವನ್ನು ದುರ್ಬಲಗೊಳಿಸಬಹುದು ಎಂಬ ಮಾತುಗಳು ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿವೆ. ಸಿದ್ದರಾಮಯ್ಯ ಆಡಳಿತ ಮತ್ತು ಶಾಸಕಾಂಗ ಪಕ್ಷದ ಮೇಲೆ ತಮ್ಮ ಹಿಡಿತವನ್ನು ಬಲಪಡಿಸುವಲ್ಲಿ ಯಶಸ್ವಿಯಾದರೆ, ಅದು ಡಿಕೆಶಿ ಬಣಕ್ಕೆ ಭಾರೀ ಹಿನ್ನಡೆಯಾದಂತೆಯೇ ಸರಿ ಎಂಬುದು ಹಲವರ ಅನಿಸಿಕೆ. ಇದೇ ಕಾರಣಕ್ಕೆ ಈ ಬಣ ಸರ್ಕಾರ ರಚನೆಯ ಸಂದರ್ಭದಲ್ಲಿ ಮಾಡಿಕೊಳ್ಳಲಾಗಿದೆ ಎನ್ನಲಾದ ಅಧಿಕಾರ ಹಂಚಿಕೆ ತಿಳುವಳಿಕೆ ಬಗ್ಗೆ ಪದೇ ಪದೇ ನೆನಪಿಸುತ್ತಿದೆ.**

**ಕಾಯುವ ಆಟ**

**ಸಿದ್ದರಾಮಯ್ಯ ಪಾಳೆಯ ಸಂಪುಟ ಪುನರ್‌ರಚನೆಯನ್ನು ಬಯಸುತ್ತಿದೆ. ಈ ಮೂಲಕ ನಾಯಕತ್ವ ಬದಲಾವಣೆಯನ್ನು ಮುಂದೂಡುವುದು ಅದರ ತಂತ್ರಗಾರಿಕೆ. ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆ ಸಂದರ್ಭದಲ್ಲಿ, ಸಚಿವ ಸ್ಥಾನಗಳನ್ನು ಬಯಸುವ ಹಲವಾರು ಕಾಂಗ್ರೆಸ್ ಶಾಸಕರು ಲಾಬಿ ನಡೆಸುತ್ತಿರುವುದು ಪಕ್ಷದ ನಾಯಕತ್ವದ ಮೇಲೆ ಮತ್ತಷ್ಟು ಒತ್ತಡವನ್ನು ಹೆಚ್ಚಿಸುತ್ತಿದೆ. ಇದು ಕಾದು ನೋಡುವ ಸಿದ್ದರಾಮಯ್ಯ ಬಣದ ಆಲೋಚನೆಗೆ ಬಲ ತುಂಬಿದೆ.**

**ಸೂಕ್ಷ್ಮವಾಗಿ ಗಮನಿಸುವ ನಿರೀಕ್ಷೆ**

**ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕದ ರಾಜಕೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುವ ನಿರೀಕ್ಷೆಯಿದೆ. ಕೆಪಿಸಿಸಿ ಕಚೇರಿಯ ಹೊರಗೆ ಮತ್ತು ರಾಜ್ಯದ ಹಲವಾರು ಭಾಗಗಳಲ್ಲಿ ಡಿಕೆ ಶಿವಕುಮಾರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರುವ ಪೋಸ್ಟರ್‌ಗಳು ಕಾಣಿಸಿಕೊಂಡಿದ್ದು, ಕೆಲವು ಪೋಸ್ಟರ್‌ಗಳು ಅವರನ್ನು ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಎಂದು ಉಲ್ಲೇಖಿಸಿವೆ. ಇದನ್ನು ಹೈಕಮಾಂಡ್ ಗಮನಿಸಿದೆ.**

ಗಂಭೀರವಾಗಿ ಚಿಂತಿಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

**ಕೇರಳ ತಂತ್ರ ಯಶಸ್ವಿ:** ಕೇರಳ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗಿ 10 ದಿನಗಳು ಕಳೆದರೂ ಮುಖ್ಯಮಂತ್ರಿ ಆಯ್ಕೆ ಮಾಡದಿದ್ದ ಕಾಂಗ್ರೆಸ್, ತೀವ್ರ ಹಗ್ಗಜಗ್ಗಾಟದ ಬಳಿಕ ಅಂತಿಮವಾಗಿ ವಿಡಿ ಸತೀಶನ್ ಅವರನ್ನು ಕೇರಳ ಸಿಎಂ ಆಗಿ ಘೋಷಿಸಿದೆ. ಆದರೆ ಸಿಎಂ ಚಿಂತೆ ಹೆಚ್ಚಿಸಿದ್ದು, ಸಂಪುಟ ಪುನರ್‌ರಚನೆಗೆ ಹೈಕಮಾಂಡ್ ಮೇಲೆ ಒತ್ತಡ ಹೇರುವಂತೆ ಒತ್ತಾಯಿಸಿದೆ.

ಆದರೆ ಈ ಬಾರಿ ನಾಯಕತ್ವ ಬದಲಾವಣೆ ವಿವಾದವನ್ನೇ ಬಗೆಹರಿಸಲು ಹೈಕಮಾಂಡ್ ಮನಸ್ಸು ಮಾಡಿದಂತಿದ್ದು, ಯಾರ ಕೈ ಮೇಲಾಗುತ್ತದೆ ಎಂಬುದನ್ನು ಕಾದುನೋಡಬೇಕಿದೆ.

### ಸಿದ್ದರಾಮಯ್ಯ ಬೇಡಿಕೆ

- ಸಂಪುಟ ಪುನರ್‌ರಚನೆ.
- ಸಂಪುಟದಲ್ಲಿ ಹೊಸ ಶಾಸಕರಿಗೆ ಅವಕಾಶ.
- ಖಾಲಿ ಸಚಿವ ಸ್ಥಾನಗಳ ಭರ್ತಿ.
- ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಸ್ಥಾನ ಖಚಿತಪಡಿಸಲು ಒತ್ತಾಯ.
- ನಾಯಕತ್ವದ ನಿರ್ಧಾರ ಶೀಘ್ರ ಇತ್ಯರ್ಥಕ್ಕೆ ಒತ್ತಾಯ.
- ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಯವರೆಗೆ, ನಾಯಕತ್ವ ವಿಚಾರ ಮುಂದೂಡಿಕೆ.

### ಡಿಕೆ ಶಿವಕುಮಾರ್ ಬೇಡಿಕೆ

- ಕೆಪಿಸಿಸಿ ಮುಖ್ಯಸ್ಥರಾಗಿ ಡಿಕೆಶಿ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷದ ದಾಖಲೆಯ ವಿಧಾನಸಭಾ ಗೆಲುವಿಗೆ ಮಾನ್ಯತೆ ಮತ್ತು ಪ್ರತಿಫಲ.
- ಈ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಡಿಕೆಶಿ ನಾಯಕತ್ವದ ಅರ್ಹತೆಗಳನ್ನು ಸ್ಥಾಪಿಸಲು ಸಮಯಾವಕಾಶ.
- ಡಿಕೆ ಶಿವಕುಮಾರ್ ನಾಯಕತ್ವದಲ್ಲಿ ಹೊಸ ಸಚಿವ ಸಂಪುಟ ರಚನೆ.
- ಕೆಪಿಸಿಸಿ ಅಧ್ಯಕ್ಷ ಹುದ್ದೆಯನ್ನು ಮುಖ್ಯಮಂತ್ರಿಯಾಗಿ ಬಡ್ತಿ ಪಡೆದರೆ ಬಿಟ್ಟುಕೊಡುವ ಇಚ್ಛೆ.
- ಅಧಿಕಾರ ಹಂಚಿಕೆಯ ಕುರಿತು ಹೇಳಲಾದ ಭರವಸೆಯನ್ನು ಗೌರವಿಸಲು ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ.

## ಸಿಎಂ ಸಿದ್ದರಾಮಯ್ಯ ನನ್ನ ಸ್ನೇಹಿತರು, ಸಹದ್ಯೋಗಿ: ದೇವೇಗೌಡ್ರ ಅಚ್ಚರಿಯ ಹೇಳಿಕೆ

**■ ರೈತರಿಂದ ಹೊಡೆಸಿಕೊಂಡು ಬರಲಿ, ಆಮೇಲೆ ನಾನು ಹೋಗಿ ಮಾತನಾಡುತ್ತೇನೆ ಎಂದು ಡಿಕೆಶಿಗೆ ಚಾಟಿ**

• ಉದಯವಾಹಿನಿ, ಬೆಂಗಳೂರು

ಬಿಡದಿ ಟೌನ್'ಶಿಪ್ ವಿಚಾರದಲ್ಲಿ ರೈತರಿಂದ ಎರಡು ಏಟು ತಿನ್ನಲೂ ಸಿದ್ಧ ಎಂದು ಕೆಲವರು ಹೇಳಿದ್ದಾರೆ. ಅವರು ಮೊದಲು ಏಟು ತಿಂದು ಬರಲಿ ಆಮೇಲೆ ನಾನು ಅಲ್ಲಿಗೆ ಹೋಗುತ್ತೇನೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದ್ದಾರೆ. ಆಮೂಲಕ, ಹೆಸರು ಉಲ್ಲೇಖಿಸದೇ, ಡಿಸಿಎಂ ಡಿಕೆ ಶಿವಕುಮಾರ್ ಅವರನ್ನು ಗೌಡ್ರು ಟಾರ್ಗೆಟ್ ಮಾಡಿದ್ದಾರೆ.

ರೈತರ ಜಮೀನನ್ನು ಬಲವಂತದಿಂದ ಕಿತ್ತುಕೊಂಡು, ದಂಧೆ ಮಾಡಲು ಕೆಲವರು ಹೊರಟಿದ್ದಾರೆ. ದಾಖಲೆ ಸಮೇತ ಏನೇನು ಆಗುತ್ತಿದೆ ಎನ್ನುವುದನ್ನು ವಿವರಿಸಬಲ್ಲೆ. ಬೆಂಗಳೂರು ನಗರದ ಒತ್ತಡವನ್ನು ಕಮ್ಮಿ ಮಾಡಲು ಕುಮಾರಸ್ವಾಮಿ, ಅಂದು ಐದು ಟೌನ್'ಶಿಪ್ ಮಾಡಲು ಹೊರಟಿದ್ದು. ಸಿದ್ದರಾಮಯ್ಯನವರು ನನ್ನ ಸ್ನೇಹಿತರು ಎನ್ನುವುದನ್ನು ಅರಿಯಲಿ ಎಂದು ದೇವೇಗೌಡ್ರು ಹೇಳಿದ್ದಾರೆ.

**ಸಿದ್ದರಾಮಯ್ಯ ನನ್ನ ಹಳೆಯ ಸ್ನೇಹಿತರು ದೇವೇಗೌಡ:** ನಗರದ ಜೆಪಿ ಭವನದಲ್ಲಿ ಮಾತನಾಡುತ್ತಿದ್ದ ದೇವೇಗೌಡ್ರು, ನಾನು ಹಿಂದೆ ಅಳುತ್ತಿದ್ದನ್ನು ಕೆಲವರು ಈಗ ಲೇವಡಿ ಮಾಡುತ್ತಿದ್ದಾರೆ. ಆದರೆ, ಸರ್ಕಾರದ ವ್ಯವಸ್ಥೆಯನ್ನು ನೋಡಿ ನನಗೆ ಈಗ ನಗು ಬರುತ್ತಿದೆ. ಹಾಲೀ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನನ್ನ ಸ್ನೇಹಿತರು ಮತ್ತು ಹಳೆಯ ಸಹದ್ಯೋಗಿ.



ನಾವಿಬ್ಬರೂ ಜೊತೆಯಾಗಿ ಕೆಲಸವನ್ನು ಮಾಡಿದ್ದೇವೆ. ಆದರೆ, ಇಲ್ಲಿ ನಡೆಯುತ್ತಿರುವುದನ್ನು ನೋಡಿ ನನಗೆ ಬಹಳ ದುಃಖವಾಗುತ್ತಿದೆ. ಅದೇನೋ ಸಿಎಂ ಆಗಬೇಕು ಎಂದು ಒಡಂಬಡಿಕೆ ಆಗಿದೆಯಂತೆ, ನಿಮ್ಮ ಮುಂದೆ ಮನೋರಂಜನೆ ಮಾಡುತ್ತಿದ್ದಾರೆ.

ಬಿಡದಿ ರೈತರ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ ಎಂದು ಮಾಜಿ ಪ್ರಧಾನಿ ಬೇಸರ ವ್ಯಕ್ತ ಪಡಿಸಿದ್ದಾರೆ.

**ಟೌನ್ ಶಿಪ್ ಹೆಸರಿನಲ್ಲಿ ಭೂ ದಂಧೆ**

### ಸಿದ್ದರಾಮಯ್ಯನವರಿಗೆ ಪತ್ರ ಬರೆದ ದೇವೇಗೌಡ

ಮುಖ್ಯಮಂತ್ರಿ ಸಿದ್ದರಾಮಯ್ಯನವರಲ್ಲಿ ಮನವಿಯನ್ನು ದೇವೇಗೌಡರು ಮಾಡಿ, ಅವರಿಗೆ ಪತ್ರ ಬರೆದಿದ್ದಾರೆ. ನೀವು ನನ್ನ ಜೊತೆ ಕೆಲಸವನ್ನು ಮಾಡಿದ್ದೀರಿ. ನಿಮ್ಮ ಸಾಮಾಜಿಕ ನ್ಯಾಯದ ಮಾತಿನ ಬಗ್ಗೆ ನನಗೂ ಅರಿವಿದೆ. ಬೆಂಗಳೂರಿನ ಸುತ್ತಮುತ್ತ ಸುಮಾರು ಇಪ್ಪತ್ತು ಸಾವಿರ ಎಕರೆ ಭೂಮಿ ಯಾರ ಹೆಸರಿನಲ್ಲಿದೆ ಎನ್ನುವ ಅಂಶವನ್ನು ಮುಂದಿಟ್ಟುಕೊಂಡು ತನಿಖೆ ಮಾಡಿ. ಬೆಂಗಳೂರು ಉಸ್ತುವಾರಿ ಹೊತ್ತಿರುವವರ ಒತ್ತಡಕ್ಕೆ ನೀವು ಮಣಿಯಬೇಡಿ. ಬಿಡದಿ ರೈತರ ಸಮಸ್ಯೆಯನ್ನು ಯಾರಿಂದಾದರೂ ಕೇಳಿ ತಿಳಿದುಕೊಳ್ಳಿ ಎಂದು ದೇವೇಗೌಡ್ರು, ಸಿಎಂ ಸಿದ್ದರಾಮಯ್ಯನವರಲ್ಲಿ ಮನವಿಯನ್ನು ಮಾಡಿದ್ದಾರೆ.

**ಜನರ ವಿರೋಧಕ್ಕಾಗಿ ಟೌನ್'ಶಿಪ್ ಕೈಬಿಡಲಾಯಿತು:** ಕುಮಾರಸ್ವಾಮಿ ಕೇಂದ್ರದಲ್ಲಿ ಸಚಿವರಾಗಿದ್ದಕ್ಕೆ ಕೆಲವರು (ಡಿಕೆ ಶಿವಕುಮಾರ್) ಏನೋ ವ್ಯಂಗ್ಯವಾಡಿದ್ದಾರೆ. ಕುಮಾರಸ್ವಾಮಿಗೆ ಮಾಡಲಿಕ್ಕೆ ಏನೂ ಕೆಲಸವಿಲ್ಲ ಎಂದು ಹೇಳಿದ್ದಾರೆ. ಅಂದು ಕುಮಾರಸ್ವಾಮಿಯವರು ಬೆಂಗಳೂರಿನ ಒತ್ತಡ ಕಮ್ಮಿ ಮಾಡಲು ಯೋಜನೆ ರೂಪಿಸಿದ್ದರು. ಆದರೆ, ಈ ವ್ಯಕ್ತಿ ಅದನ್ನು ದಂಧೆಯನ್ನಾಗಿ ಮಾಡಿ, ರೈತರ ಹೊಟ್ಟೆಗೆ ಹೊಡೆಯುತ್ತಿದ್ದಾರೆ. ಅಂದು, ಜನರು ಈ ಟೌನ್'ಶಿಪ್' ಗೆ ವಿರೋಧ ವ್ಯಕ್ತ ಪಡಿಸಿದ್ದಕ್ಕೆ, ಕುಮಾರಸ್ವಾಮಿ ಯೋಜನೆಯನ್ನು ಕೈಬಿಟ್ಟರು ಎಂದು ಎಚ್.ಡಿ.ದೇವೇಗೌಡ ಹೇಳಿದ್ದಾರೆ.

**ಬಿಡದಿ ಟೌನ್'ಶಿಪ್' ಕೈಬಿಡಲು ದೇವೇಗೌಡರ ಒತ್ತಾಯ**

ಕುಮಾರಸ್ವಾಮಿಯವರು ಜಮೀನು ಹೊಡೆದಿದ್ದಾರೆ ಎಂದು ಕಾಂಗ್ರೆಸ್ ನಾಯಕರು ಊರೆಲ್ಲಾ ಸುದ್ದಿ ಮಾಡಿಕೊಂಡು ಬಂದರು. ಇದರ ಸತ್ಯಾಸತ್ಯತೆಯನ್ನು ಅರಿಯಲು ಸತ್ಯಶೋಧನ ಸಮಿತಿಯನ್ನು ರಚಿಸಲಾಯಿತು.

ಈ ಸಮಿತಿ ಏನು ವರದಿಯನ್ನು ನೀಡಿದೆ ಎನ್ನುವುದು ದೇವರೊಬ್ಬರಿಗೆ ಮಾತ್ರ ಗೊತ್ತು. ಬಿಡದಿ ಟೌನ್'ಶಿಪ್'ಗೆ ಜನರ ವಿರೋಧವಿದೆ, ಅಲ್ಲಿನ ಜನರಿಗೆ ಇದು ಬೇಕಿಲ್ಲ. ಹೀಗಾಗಿ, ಯೋಜನೆಯನ್ನು ಕೈಬಿಡಬೇಕು ಎಂದು ದೇವೇಗೌಡರು, ಒತ್ತಾಯಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 106.21 ₹/L | ಡೀಸೆಲ್ : 94.10 ₹/L | ಬಂಗಾರ: ₹15,693/Gram24ct ₹14,385/Gram22ct | ಬೆಳ್ಳಿ: ₹280.00/Gram

# ಡೊಡ್ಡವೀರಯ್ಯ ಹುಟ್ಟುಹಬ್ಬದ ಅಂಗವಾಗಿ ಮೇ 20ರಂದು ಬೃಹತ್ ಆರೋಗ್ಯ ತಪಾಸಣೆ ಶಿಬಿರ

• ಉದಯವಾಹಿನಿ, ಬೆಂಗಳೂರು

ಡಾ.ರಾಜ್ ಕುಮಾರ್ ವಾರ್ಡ್ ಸಮಾಜ ಸೇವಕರು, ಬಿಜೆಪಿ ಮುಖಂಡರಾದ ಡೊಡ್ಡವೀರಯ್ಯರವರ ಹುಟ್ಟುಹಬ್ಬದ ಶುಭ ಸಂದರ್ಭದಲ್ಲಿ ರಾಜಾಜಿನಗರ 75ನೇ ಇ ಅಡ್ಡರಸ್ತೆ ನಿವಾಸದಲ್ಲಿ ಮೇ 20ರಂದು ಅಭಿಮಾನಿಗಳು, ಸ್ನೇಹಿತರಿಂದ ಬೃಹತ್ ಆರೋಗ್ಯ ತಪಾಸಣೆ ಶಿಬಿರ ಆಯೋಜನೆ ಮಾಡಲಾಗಿದೆ. ಸಮಾಜ ಸೇವಕರು, ಗಣ್ಯ ಮಹನೀಯರುಗಳಿಂದ



ಆರೋಗ್ಯ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ಡೊಡ್ಡವೀರಯ್ಯರವರು ಮಾತನಾಡಿ ಬಡವರ ಸೇವೆಯಲ್ಲಿ ದೇವರ ಕಾಣು ಎಂಬಂತೆ .ನನ್ನ ಹುಟ್ಟುಹಬ್ಬವನ್ನು ಅಭಿಮಾನಿಗಳು, ಸ್ನೇಹಿತರು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ.

ಹೃದಯ ಪರೀಕ್ಷೆ, ರಕ್ತದಾನ ಶಿಬಿರ, ಕಣ್ಣಿನ ಪರೀಕ್ಷೆ , ದೃಷ್ಟಿ ದೋಷ ಇರುವವರಿಗೆ ಉಚಿತವಾಗಿ ಕನ್ನಡ ವಿತರಿಸಲಾಗುತ್ತಿದೆ. ನಾವು ಎಷ್ಟು ಶ್ರೀಮಂತರು ಅನ್ನುವುದಕ್ಕಿಂತ ನಾವು ಎಷ್ಟು ಆರೋಗ್ಯವಂತರು ಎಂಬುದು ಮುಖ್ಯ. ಸಾವಿರಾರು ರೂಪಾಯಿ ವೆಚ್ಚವಾಗುತ್ತದೆ ಒಮ್ಮೆ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಲು ನಮ್ಮ ಶಿಬಿರದಲ್ಲಿ ಸಂಪೂರ್ಣ ಉಚಿತ ಇದರ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು. ಅಂದು ಲೈಫ್ ಟ್ರೀ ಆಯುರ್ವೇದ ಆಂಡ್ ವೆಲ್ನಸ್ ಪ್ರೈವೇಟ್ ಲಿಮಿಟೆಡ್ ಉಚಿತವಾಗಿ ನಾಡಿ ಪರೀಕ್ಷೆ, ಸ್ಪರ್ಶ ಆಸ್ಪತ್ರೆ ಸಹಯೋಗದಲ್ಲಿ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ. ಮೇ 20 ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ರಾಜಕೀಯ ಮುಖಂಡರು, ಸಾಹಿತಿಗಳು, ಸ್ಥಳೀಯ ಸಾಧಕರುಗಳು ಆಗಮಿಸಲಿದ್ದಾರೆ ಎಂದು ಹೇಳಿದರು.

# ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಗೊಂದಲ: ಹೈಕಮಾಂಡ್ ನಡೆ ಏನು?

■ ಸಿಎಂ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಶೀಘ್ರದಲ್ಲೇ ದೆಹಲಿಗೆ ಪ್ರವಾಸ ■ ಹೈಕಮಾಂಡ್ ಮೌನದ ಬಗ್ಗೆ ಕಾರ್ಯಕರ್ತರಲ್ಲೇ ಅಸಮಾಧಾನ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಹಾಗೂ ಸಂಪುಟ ಪುನಾರಚನೆ ಗೊಂದಲಕ್ಕೆ ಬ್ರೇಕ್ ಬಿದ್ದಿಲ್ಲ. ಈ ನಡುವೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಹುಟ್ಟು ಹಬ್ಬದ ನೆಪದಲ್ಲಿ ಮುಂದಿನ ಸಿಎಂ ಡಿಕೆಶಿ ಎಂಬ ಫ್ಲೆಕ್ಸ್ ಗಳು ಕೆಲವೆಡೆ ಕಂಡು ಬಂದವು.

## ನಿರ್ಧಾರ ಕೈಗೊಳ್ಳುವ ಸಾಧ್ಯತೆ

**ಈ ಎಲ್ಲಾ ವಿಚಾರವಾಗಿ ಮೇ ಅಂತ್ಯಕ್ಕೆ ಸಿಎಂ, ಡಿಸಿಎಂ ದೆಹಲಿ ಪ್ರವಾಸದ ಸಂದರ್ಭದಲ್ಲಿ ಒಂದು ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ. ಸದ್ಯ ಹೈಕಮಾಂಡ್ ಮೇಲೂ ಈ ಕುರಿತಾಗಿ ಒತ್ತಡ ತೀವ್ರಗೊಳ್ಳುತ್ತಿದೆ. ಪಂಚ ರಾಜ್ಯಗಳ ಚುನಾವಣೆ ಪ್ರಕ್ರಿಯೆ ಎಲ್ಲವೂ ಮುಕ್ತಾಯವಾಗಿದೆ. ಹಾಗಾಗಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಒಂದು ನಿರ್ಧಾರವನ್ನು ದೆಹಲಿ ನಾಯಕರು ಕೈಗೊಳ್ಳುತ್ತಾರಾ? ಎಂಬುವುದನ್ನು ಕಾದು ನೋಡಬೇಕಾಗಿದೆ.**



ಉದಯವಾಹಿನಿ ಚಿತ್ರ

ಅಲ್ಲದೆ, ಜನ್ಮದಿನವನ್ನು ಭರ್ಜರಿಯಾಗಿ ಆಚರಣೆ ಮಾಡುವ ಮೂಲಕ ಅಭಿಮಾನಿಗಳು ಒಂದು ಸಂದೇಶವನ್ನು ರವಾನೆ ಮಾಡಿದ್ದಾರೆ. ಹೀಗಿದ್ದರೂ ನಾಯಕತ್ವ ಬದಲಾವಣೆ ಮತ್ತು ಸಂಪುಟ ಪುನಾರಚನೆ ಕುರಿತಾಗಿ ಒಂದು ಸ್ಪಷ್ಟ ತೀರ್ಮಾನಕ್ಕೆ ಕಾಂಗ್ರೆಸ್ ಹೈಕಮಾಂಡ್ ಬಂದಿಲ್ಲ. ದಿನದಿಂದ ದಿನಕ್ಕೆ ಈ ಬಿಕ್ಕಟ್ಟು ತೀವ್ರಗೊಳ್ಳುತ್ತಲೇ ಇದೆ. ಇದಕ್ಕೆ ಅಂತ್ಯ ಹಾಡಬೇಕಾದ ಕಾಂಗ್ರೆಸ್ ಹೈಕಮಾಂಡ್ ಕಾದು ನೋಡುವ ತಂತ್ರಕ್ಕೆ ಮೊರೆ ಹೋದಂತಿದೆ. ಹೀಗಾಗಿ ಇದು ಕಾಂಗ್ರೆಸ್ ಕಾರ್ಯಕರ್ತರಲ್ಲೂ, ಇಬ್ಬರು ನಾಯಕರ ಆಪ್ತರಲ್ಲೂ ಗೊಂದಲಕ್ಕೆ ಎಡೆಮಾಡಿಕೊಟ್ಟಿದೆ.

**ಶೀಘ್ರದಲ್ಲೇ ದೆಹಲಿ ಪ್ರವಾಸ:** ಈ ಎಲ್ಲಾ ಬೆಳವಣಿಗೆಯ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಶೀಘ್ರದಲ್ಲೇ ದೆಹಲಿ ಪ್ರವಾಸ ನಡೆಸಲಿದ್ದಾರೆ.

ಮೇ ತಿಂಗಳ ಅಂತ್ಯಕ್ಕೆ ಅವರು ದೆಹಲಿಗೆ ತೆರಳುವ ಸಾಧ್ಯತೆ ಇದೆ. ದೆಹಲಿಯಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ.

ಈ ವೇಳೆ ನಾಯಕತ್ವ ಗೊಂದಲಕ್ಕೆ ಪರಿಹಾರ ಸಿಗುತ್ತಾ? ಎಂಬ ಕುತೂಹಲ ತೀವ್ರಗೊಂಡಿದೆ. ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವ ಸಾಧ್ಯತೆ ಇದೆ. ಇದೇ ಸಂದರ್ಭದಲ್ಲಿ ಡಿಕೆ ಶಿವಕುಮಾರ್ ಅವರು ನಾಯಕತ್ವ ವಿಚಾರವಾಗಿ ತಮ್ಮ ಬೇಡಿಕೆಯನ್ನು ಮಂಡನೆ ಮಾಡುವ ಸಾಧ್ಯತೆ ಅಲ್ಲಗಳೆಯುವ ಹಾಗಿಲ್ಲ.

## ಎರಡು ವರ್ಷಗಳ ಆಟ

**ರಾಜ್ಯ ಸರ್ಕಾರ ಮೇ 20 ಕ್ಕೆ 3 ವರ್ಷ ಪೂರ್ಣಗೊಳಿಸಲಿದೆ. ಇನ್ನೇನು ಎರಡು ವರ್ಷಗಳ ಕಾಲ ಸರ್ಕಾರ ಜಾರಿಯಲ್ಲಿರುತ್ತದೆ. ಈ ಹಿನ್ನೆಲೆಯಲ್ಲಿ ನಾಯಕತ್ವ ಬದಲಾವಣೆ ವಿಚಾರವಾಗಿ ಶೀಘ್ರದಲ್ಲೇ ಒಂದು ತೀರ್ಮಾನಕ್ಕೆ ಬರಬೇಕು ಎಂಬುವುದು ಉಭಯ ನಾಯಕರ ಆಪ್ತರ ಅಭಿಪ್ರಾಯವಾಗಿದೆ. ಹೀಗಾಗಿ ಹೈಕಮಾಂಡ್ ಏನು ತೀರ್ಮಾನ ಕೈಗೊಳ್ಳಲಿದೆ ಎಂಬುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಲಿದೆ.**

**ಸಂಪುಟ ಪುನಾರಚನೆಗೆ ಬೇಡಿಕೆ:** ಈಗಾಗಲೇ ಮೂರು ಸ್ಥಾನಗಳು ಸಂಪುಟದಲ್ಲಿ ಖಾಲಿ ಇದೆ. ಹಗರಣದ ಆರೋಪದಲ್ಲಿ ಬಿ ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಬಳಿಕ ಕೆ ಎನ್‌ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಲಾಗಿತ್ತು. ಇದೀಗ ಸಚಿವ ಡಿ. ಸುಧಾಕರ್ ಅವರು ಮೃತಪಟ್ಟಿದ್ದಾರೆ. ಈ ಹಿನ್ನಲೆಯಲ್ಲಿ ಸಂಪುಟ ವಿಸ್ತರಣೆಯನ್ನಾದರೂ ಮಾಡಲೇ ಬೇಕಾಗಿದೆ. ಹಾಗಾಗಿ ಸದ್ಯಕ್ಕೆ ಸಂಪುಟ ವಿಸ್ತರಣೆ ಮಾಡಲಾಗುತ್ತಾ?, ಪುನಾರಚನೆ ಇರುತ್ತಾ ಎಂಬುವುದು ಕುತೂಹಲಕ್ಕೆ ಕಾರಣವಾಗಿದೆ.

# ಸಮಾನ ವೇತನಕ್ಕೆ ಪರವಾನಗಿ ಭೂಮಾಪಕರ ಆಗ್ರಹ

• ಉದಯವಾಹಿನಿ, ಬೆಂಗಳೂರು

ಪರವಾನಗಿ ಪಡೆದ ಭೂಮಾಪಕರನ್ನು ವಿಶೇಷ ನೇಮಕಾತಿ ಮೂಲಕ ಸರ್ಕಾರಿ ಹುದ್ದೆಯಲ್ಲಿ ವಿಲೀನಗೊಳಿಸಿ, ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸಬೇಕು ಎಂದು ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂ ಮಾಪಕರ ಸಂಘವು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದೆ. ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಗೌರವಾಧ್ಯಕ್ಷ ಕೆ.ಪಿ. ಭಾರ್ಗವಲು, 'ರಾಜ್ಯದಲ್ಲಿ ಪರವಾನಗಿ ಹೊಂದಿದ ಐದು ಸಾವಿರಕ್ಕೂ ಅಧಿಕ ಭೂಮಾಪಕರಿದ್ದು, ಕಳೆದ 23 ವರ್ಷಗಳಿಂದ ಕನಿಷ್ಠ ವೇತನಕ್ಕೆ ದುಡಿಯುತ್ತಿದ್ದಾರೆ. ಸರ್ಕಾರಿ ಸೇವೆಗಳಾದ ವಿಭಾಗ ಪತ್ರ, ದಾನ, ಕ್ರಯಕ್ಕೆ ಇ-ನಕ್ಷೆ ತಯಾರಿ ಸೇರಿ ವಿವಿಧ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಕನಿಷ್ಠ ಸಂಭಾವನೆ ನಿಗದಿಪಡಿಸಿದ್ದು, ಬದುಕು ಕಷ್ಟಕರವಾಗಿದೆ. ಆದ್ದರಿಂದ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಭೂಮಾಪಕರನ್ನು ವಿಶೇಷ ನೇಮಕಾತಿ ಮೂಲಕ ಸರ್ಕಾರಿ ಹುದ್ದೆಯಲ್ಲಿ ವಿಲೀನ ಗೊಳಿಸಬೇಕು' ಎಂದು ಆಗ್ರಹಿಸಿದರು. 'ಪರವಾನಗಿ ಪಡೆದ ಭೂ ಮಾಪಕರನ್ನು ಕೆ.ಎಲ್.ಆರ್. ಕಾಯ್ದೆ 46ರ ತಿದ್ದುಪಡಿಯಂತೆ ಸರ್ಕಾರಿ ಹುದ್ದೆಯಲ್ಲಿ ವಿಲೀನಗೊಳಿಸಲು ಅವಕಾಶವಿದೆ. ಈ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಆದರೆ, ಈವರೆಗೆ ಯಾವುದಕ್ಕೂ ಸರಿಯಾದ ಸ್ಪಂದನೆ ಸಿಕ್ಕಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

# ಬಿಡಿಎ ಆಸ್ತಿ ಮಾಲೀಕರಿಗೆ ಭರ್ಜರಿ ಕೊಡುಗೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಆಸ್ತಿ ಹೊಂದಿರುವವರಿಗೆ ಪ್ರಾಧಿಕಾರವು ಗುಡ್‌ನ್ಯೂಸ್ ನೀಡಿದೆ. 2026–27ನೇ ಸಾಲಿನ ಆಸ್ತಿ ತೆರಿಗೆಯನ್ನು ನಿಗದಿತ ಅವಧಿಗಿಂತ ಮುಂಚಿತವಾಗಿ ಪಾವತಿಸುವ ಮಾಲೀಕರಿಗೆ ಒಟ್ಟು ತೆರಿಗೆ ಮೊತ್ತದಲ್ಲಿ ಶೇ. 5ರಷ್ಟು ರಿಯಾಯಿತಿ ನೀಡುವುದಾಗಿ ಬಿಡಿಎ ಪ್ರಕಟಿಸಿದೆ. ಬಿಡಿಎ ವ್ಯಾಪ್ತಿಯಲ್ಲಿ ಬರುವ ನಿವೇಶನಗಳು, ಫ್ಲಾಟ್‌ಗಳು, ಮನೆಗಳ ಮಾಲೀಕರು ಈ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ. ಸಕಾಲದಲ್ಲಿ ತೆರಿಗೆ ಪಾವತಿಸುವ ಮೂಲಕ ನಾಗರಿಕರು ಆರ್ಥಿಕ ಲಾಭ ಪಡೆಯಲು ಈ ಯೋಜನೆಯನ್ನು ರೂಪಿಸಲಾಗಿದೆ.

**ರಿಯಾಯಿತಿ ಪಡೆಯಲು ಕೊನೆಯ ದಿನಾಂಕ ಯಾವಾಗ:** 2026 – 27ನೇ ಸಾಲಿನ ಆಸ್ತಿ ತೆರಿಗೆಯನ್ನು ಮೇ 31, 2026ರ ಒಳಗಾಗಿ ಪಾವತಿಸುವ ಮಾಲೀಕರು ಮಾತ್ರ ಈ ಶೇಕಡಾ 5 ರಷ್ಟು ರಿಯಾಯಿತಿಗೆ ಅರ್ಹರಾಗಿರುತ್ತಾರೆ. ಜೂನ್ 1ರಿಂದ ಪಾವತಿಸುವವರಿಗೆ ಈ ರಿಯಾಯಿತಿ




ಉದಯವಾಹಿನಿ ಚಿತ್ರ

ಅನ್ವಯವಾಗುವುದಿಲ್ಲ.

**ಬಿಡಿಎ ತೆರಿಗೆ ಪಾವತಿಸುವುದು ಹೇಗೆ:** ಸಾರ್ವಜನಿಕರ ಅನುಕೂಲಕ್ಕಾಗಿ ಆನ್‌ಲೈನ್ ಮೂಲಕವೇ ತೆರಿಗೆ ಪಾವತಿಸಲು ವ್ಯವಸ್ಥೆ ಮಾಡಲಾಗಿದೆ. ಆಸ್ತಿ ಮಾಲೀಕರು ಬಿಡಿಎ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಿ ಸರಳ ಹಂತಗಳಲ್ಲಿ ಹಣ ಪಾವತಿಸಬಹುದು.

**ಜಾಲತಾಣ:** https://app.bda.karnataka.gov.in/bdaptax-citizen/login

## ಸಾರ್ವಜನಿಕರಲ್ಲಿ ಮನವಿ

**ತೆರಿಗೆದಾರರು ಕೊನೆಯ ದಿನದವರೆಗೆ ಕಾಯದೆ, ಮುಂಚಿತವಾಗಿಯೇ ತೆರಿಗೆ ಪಾವತಿಸುವ ಮೂಲಕ ಶೇ. 5ರಷ್ಟು ರಿಯಾಯಿತಿಯ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಈ ಮೂಲಕ ಪ್ರಾಧಿಕಾರದ ಅಭಿವೃದ್ಧಿ ಕೆಲಸಗಳಿಗೆ ಸಹಕರಿಸುವಂತೆ ಬಿಡಿಎ ಅಧಿಕಾರಿಗಳು ಮನವಿ ಮಾಡಿದ್ದಾರೆ.**

**ಸಹಾಯವಾಣಿ ಸಂಪರ್ಕಿಸಿ:** ಆಸ್ತಿ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಯಾವುದೇ ತಾಂತ್ರಿಕ ತೊಂದರೆಗಳು ಎದುರಾದಲ್ಲಿ ಅಥವಾ ಹೆಚ್ಚಿನ ಮಾಹಿತಿ, ದೂರುಗಳಿಗಾಗಿ ಸಾರ್ವಜನಿಕರು ಸಹಾಯವಾಣಿಯನ್ನು ಸಂಪರ್ಕಿಸಬಹುದು.

**ಸಹಾಯವಾಣಿ ಸಂಖ್ಯೆ:** 9483166622.

# 24 ಬಾಲ್ಯ ವಿವಾಹಕ್ಕೆ ತಡೆ

• ಉದಯವಾಹಿನಿ, ದೇವನಹಳ್ಳಿ

ಬಾಲ್ಯ ವಿವಾಹ ತಡೆಗೆ ಅಧಿಕಾರಿಗಳು ಸದಾ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕೆಂದು ಜಿಲ್ಲಾಧಿಕಾರಿ ಕೆ.ಎನ್. ಅನುರಾಧ ಹೇಳಿದರು.

ತಾಲ್ಲೂಕಿನ ಜಿಲ್ಲಾಡಳಿತ ಭವನದಲ್ಲಿ ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಕ್ಕಳ ರಕ್ಷಣಾ ಘಟಕದ 'ಮಿಷನ್ ವಾತ್ಸಲ್ಯ' ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ದಾಖಲಾಗಿದ್ದ 28 ಪ್ರಕರಣಗಳಲ್ಲಿ 24 ಬಾಲ್ಯ ವಿವಾಹವನ್ನು ತಡೆಯಲಾಗಿದೆ.

ಉಳಿದ ನಾಲ್ಕು ಪ್ರಕರಣಗಳಿಗೆ ಸಂಬಂಧಿಸಿ ಎಫ್‌ಐಆರ್ ದಾಖಲಾಗಿದೆ. ಸಾರ್ವಜನಿಕರು ಹಾಗೂ ಅಧಿಕಾರಿಗಳ ಸಮನ್ವಯದಿಂದ ಬಾಲ್ಯ ವಿವಾಹಗಳನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವಾಗಿದೆ ಎಂದು ಹೇಳಿದರು.

ಉದಯವಾಹಿನಿ ಚಿತ್ರ



ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಯಲ್ಲಿ ಸಂಬಂಧಿತ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಶಾಲೆಗಳು, ಕಾಲೇಜುಗಳು, ಕೈಗಾರಿಕೆಗಳು ಹಾಗೂ ಕಾರ್ಖಾನೆಗಳಲ್ಲಿ ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಬಾಲ್ಯ ವಿವಾಹ ನಡೆಯುತ್ತಿರುವ ಮಾಹಿತಿ ದೊರೆತರೆ ಸಾರ್ವಜನಿಕರು ಮಕ್ಕಳ ಸಹಾಯವಾಣಿ 1098, ಪೊಲೀಸ್ ಸಹಾಯವಾಣಿ 112 ಅಥವಾ ಸಮೀಪದ ಪೊಲೀಸ್ ಠಾಣೆಗೆ ತಕ್ಷಣ ಮಾಹಿತಿ ನೀಡುವಂತೆ ಮನವಿ ಮಾಡಿದರು.

# 'ಮ್ಯಾಂಗೊ ಉತ್ಸವ'ಕ್ಕೆ ಚಾಲನೆ

• ಉದಯವಾಹಿನಿ, ಯಲಹಂಕ

ಕೆಬಿಜಿ ಸ್ವಯಂ ಸೇವಕರ ಸಂಘ, ವಾಸವಿ ಕಾಂಡಿಮೆಂಟ್ಸ್ ಸಹಯೋಗದಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಸಹಕಾರನಗರದ ಗಣೇಶ ಮೈದಾನದಲ್ಲಿ ಮೇ 15ರಿಂದ 17ರವರೆಗೆ ಆಯೋಜಿಸಿರುವ 'ಮ್ಯಾಂಗೊ ಉತ್ಸವ'ಕ್ಕೆ ಶನಿವಾರ ಚಾಲನೆ ನೀಡಲಾಯಿತು. ಉತ್ಸವದಲ್ಲಿ ತಾಜಾ ಮಾವಿನ ಹಣ್ಣುಗಳು, ಜ್ಯೂಸ್, ಮಿಲ್ಕ್ ಶೇಕ್, ಡೆಸರ್ಟ್, ಮ್ಯಾಂಗೊ ಕುನಾಫ, ಮ್ಯಾಂಗೊ ಹೋಳಿಗೆ, ಮ್ಯಾಂಗೊ ಚಿತ್ರಾನ್ನ, ಹಲಸಿನ ಹಣ್ಣಿನ ಬಿರಿಯಾನಿ, ಮ್ಯಾಂಗೊ ಸ್ಯಾಂಡ್‌ವಿಚ್, ಮ್ಯಾಂಗೊ ಕೇಸರಿ ಬಾತ್, ಮ್ಯಾಂಗೊ ರಸಂ ರೈಸ್ ಸೇರಿದಂತೆ ಮಾವಿನಿಂದ ತಯಾರಿಸಿದ 100ಕ್ಕೂ ಹೆಚ್ಚು ಬಗೆಯ ಖಾದ್ಯಗಳನ್ನು ಒಂದೇ ಸೂರಿನಡಿಯಲ್ಲಿ ಸವಿಯಲು ವ್ಯವಸ್ಥೆ ಮಾಡಲಾಗಿದೆ. ಉತ್ಸವದ ಅಂಗವಾಗಿ ಲೈವ್ ಸಂಗೀತ ಕಾರ್ಯಕ್ರಮ, ಪರ್ವ ಬ್ಯಾಂಡ್ ತಂಡದವರಿಂದ ಭಜನ್ ಜಮ್ಮಿಂಗ್, ಐಪಿಎಲ್ ಲೈವ್ ಸ್ಕ್ರೀನಿಂಗ್ ಹಾಗೂ ಮಕ್ಕಳ ಮನರಂಜನೆಗಾಗಿ ವಿವಿಧ ಆಟಿಕೆಗಳ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

# ರಸ್ತೆ ವಿಸ್ತರಣೆಗೆ ಜೀವತೆತ್ತ ನೂರಾರು ಮರ

• ಉದಯವಾಹಿನಿ, ದೇವನಹಳ್ಳಿ

ಪಟ್ಟಣದ ರಸ್ತೆ ಬದಿಗಳಲ್ಲಿ ಬೃಹದಾಕಾರವಾಗಿ ಬೆಳೆದು ನಿಂತಿದ್ದ ಮರಗಳು ರಸ್ತೆ ವಿಸ್ತರಣೆಗೆ ಜೀವತೆತ್ತಿವೆ. ದಾರಿ ಹೋಕರಿಗೆ, ಜೀವಸಂಕುಲಕ್ಕೆ ಆಸರೆಯಾಗಿದ್ದ ನೂರಾರು ವರ್ಷದ ಹಳೆಯ ಮರಗಳು ನೆಲಕ್ಕುರುಳಿದ ಪರಿಣಾಮ ರಸ್ತೆಯೆಲ್ಲಾ ಬರಿದಾಗಿ ಕಾಣುತ್ತಿದೆ.



ಉದಯವಾಹಿನಿ ಚಿತ್ರ

ಈಗಾಗಲೇ ರಸ್ತೆ ವಿಸ್ತರಣೆ ಹೊಂದಿರುವ ಪಟ್ಟಣದ ಟೌನ್‌ಹಾಲ್ ವೃತ್ತದಿಂದ ಹಾರ್ಡಿಪುರದವರೆಗೂ 50ಕ್ಕೂ ಹೆಚ್ಚು ಬೃಹತ್ ಮರಗಳನ್ನು ಕಡಿಯಲಾಗಿದೆ. ಈಗ ಟೌನ್‌ಹಾಲ್ ವೃತ್ತದಿಂದ ಶಿಡ್ಲಘಟ್ಟ ಕ್ರಾಸ್ ವರೆಗೂ 43 ಮರಗಳು ಕಡಿಯಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಶಿಡ್ಲಘಟ್ಟ ಕ್ರಾಸ್ ನಿಂದ ಹಿಡಿದು ವಿಜಯಪುರ ಅಮಾನಿಕೆರೆವರೆಗೂ ರಸ್ತೆ ವಿಸ್ತರಣೆಗೊಂಡರೆ 30ಕ್ಕೂ ಹೆಚ್ಚು ಬೃಹತ್ ಮರಗಳಿಗೆ ಕೊಡಲಿ ಪೆಟ್ಟು ಬೀಳಲಿದೆ. ಈ ಬಿರುಬೇಸಿಗೆಯಲ್ಲಿ ದಾರಿ ಹೋಕರಿಗೆ, ಜೀವಸಂಕುಲಕ್ಕೆ ಆಸರೆಯಾಗಿದ್ದ ವಿವಿಧ ಹಣ್ಣಿನ ಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿಯುತ್ತಿರುವುದಕ್ಕೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬ ಮಾತನ್ನು ನಾವು ಬರಿ ಬಾಯಿ ಮಾತಿಗೆ ಹಾಡದೆ ವೃಕ್ಷಗಳ ಹಾಗೂ ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ನಾವೆಲ್ಲರೂ ಕಟ್ಟಿ ಬದ್ಧರಾಗಬೇಕು.

ಮರ ಕಡಿದ ನಂತರ ಅದರ ಹತ್ತರಷ್ಟು ಹೆಚ್ಚು ಸಸಿಗಳನ್ನು ಸಾರ್ವಜನಿಕರಿಗೆ ಗೊತ್ತಾಗುವ ರೀತಿಯಲ್ಲಿ ನೆಡಬೇಕು. ಜೊತೆಗೆ ಅದು ಬೆಳೆದು ನಿಲ್ಲುವವರೆಗೂ ಪೋಷಿಸಬೇಕು ಎಂದು ಪರಿಸರ ಪ್ರೇಮಿ ಮ.ಸುರೇಶ್ ಬಾಬು ತಿಳಿಸಿದರು.

ಪಟ್ಟಣ ಕ್ಷಿಪ್ರ ಗತಿಯಲ್ಲಿ ಬೆಳೆಯುತ್ತಿದೆ ಜನಸಂಖ್ಯೆ ಹೆಚ್ಚುತ್ತಿದೆ, ಸರಿಯಾಗಿ ವಾಹನಗಳ ಸಂಖ್ಯೆಯೂ ಹೆಚ್ಚಾಗಿದೆ. ಇದರಿಂದ ವಾಹನ ದಟ್ಟಣೆ ಸಮಸ್ಯೆ ಉಂಟಾಗುತ್ತದೆ. ವಾಹನ ದಟ್ಟಣೆ ಸಮಸ್ಯೆ ಪರಿಹರಿಸಲು ರಸ್ತೆ ವಿಸ್ತರಣೆ ಅಗತ್ಯ. ಆದರೆ, ಮರ ಕಡಿಯುವ ಮುನ್ನ ಅಕ್ಕ ಪಕ್ಕ ಗಿಡ ನೆಟ್ಟು ಪೋಷಿಸಬೇಕು ಎಂದು ಬಿಜೆಪಿ ಟೌನ್ ಅಧ್ಯಕ್ಷ ವೆಂಕಟೇಶ್ ಪ್ರಭು ಆರೋಪಿಸಿದ್ದಾರೆ.

# 3ನೇ ಹಂತದ ಮತಪಟ್ಟಿ ಪರಿಷ್ಕರಣೆ ಘೋಷಣೆ; ಜೂನ್ 20ರಿಂದ ಆರಂಭ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಮುಂಗಾರು ಸನ್ನದ್ಧತೆಯನ್ನು ಮತ್ತಷ್ಟು ಬಲಪಡಿಸಲು 'ಪ್ರಹರಿ' ವಾಹನಗಳ ಪರೇಡ್ ಆಯೋಜಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ತಿಳಿಸಿದರು. ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, 'ಪ್ರಹರಿ ವಾಹನಗಳಲ್ಲಿರುವ ಎಲ್ಲಾ ಅಗತ್ಯ ಉಪಕರಣಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ಮಳೆ ಸಂಬಂಧಿತ ತುರ್ತು ಪರಿಸ್ಥಿತಿ ಎದುರಿಸಲು ಸಂಪೂರ್ಣ ಕಾರ್ಯ ಸನ್ನದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು' ಎಂದು ನಿರ್ದೇಶಿಸಿದರು.

ಮರ ಕಟಾವು ಯಂತ್ರೋಪಕರಣಗಳು, ವಾಹನಗಳು, ಸಂಬಂಧಿತ ತುರ್ತು ಸೇವಾ ಸಾಧನಗಳನ್ನು ಕೂಡ ವಿವರವಾಗಿ ಪರಿಶೀಲಿಸಿ, ಒಂದು ವಾರದೊಳಗಾಗಿ ಸಮಗ್ರ ಸಿದ್ಧತಾ ವರದಿಯನ್ನು ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪ್ರವಾಹ ಉಂಟಾಗುವ ಮತ್ತು ನೀರು ನಿಲ್ಲುವ ರೈಲ್ವೆ ತಗ್ಗು ಪ್ರದೇಶಗಳಿಗೆ ಸಂಬಂಧಿತ ನಗರ ಪಾಲಿಕೆ ಅಧಿಕಾರಿಗಳು ಹಾಗೂ ರೈಲ್ವೆ ಅಧಿಕಾರಿಗಳು ಭೇಟಿ



ಉದಯವಾಹಿನಿ ಚಿತ್ರ

ನೀಡಿ ಜಂಟಿಯಾಗಿ ಪರಿಶೀಲಿಸಬೇಕು. ಸಮಸ್ಯೆಗಳನ್ನು ಸಮನ್ವಯದಿಂದ ಪರಿಹರಿಸಬೇಕು. ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ನಿಯಂತ್ರಣ ಕೊಠಡಿಗಳನ್ನು ಪರಿಶೀಲಿಸಿ, ಭಾರಿ ಮಳೆ, ಪ್ರವಾಹ ಪರಿಸ್ಥಿತಿಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸಲು ಅಗತ್ಯ ಸೌಲಭ್ಯಗಳು, ತುರ್ತು ವ್ಯವಸ್ಥೆಗಳು, ಸಿಬ್ಬಂದಿ ಸಿದ್ಧವಾಗಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ನಗರದ ಎಲ್ಲ ಪ್ರವಾಹ ಪೀಡಿತ ಪ್ರದೇಶಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು. ಪ್ರವಾಹ ನಿಯಂತ್ರಣಕ್ಕಾಗಿ ಮುನ್ನೆಚ್ಚರಿಕೆ ಮತ್ತು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

## ಅಗತ್ಯವಿದ್ದರೆ ಇನ್ನಷ್ಟು ಖರೀದಿಸಿ

**ನಗರದ ಸ್ವಚ್ಛತೆ ಮತ್ತು ತ್ಯಾಜ್ಯ ನಿರ್ವಹಣೆಯನ್ನು ಮತ್ತಷ್ಟು ಬಲಪಡಿಸಲು ಅಗತ್ಯ ಸಂಖ್ಯೆಯಲ್ಲಿ ಲಿಟ್ಟರ್ ಪಿಕ್ಕರ್‌ಗಳನ್ನು ಖರೀದಿಸುವ ಕುರಿತು ಪರಿಶೀಲನೆ ನಡೆಸಬೇಕು. ರಸ್ತೆ ತಡೆ ಗೋಡೆಗಳ ಸ್ವಚ್ಛತೆ, ಸಮರ್ಪಕ ನಿರ್ವಹಣೆ ಹಾಗೂ ಅಗತ್ಯವಿದ್ದಲ್ಲಿ ಹೂಳೆತ್ತುವಿಕೆ ಕಾರ್ಯ ಕೈಗೊಳ್ಳಬೇಕು. ನಗರದಲ್ಲಿರುವ ಶಿಥಿಲಾವಸ್ಥೆಯ ಕಟ್ಟಡಗಳು, ಅಪಾಯಕಾರಿ ಕಾಂಪೌಂಡ್‌ಗಳನ್ನು ತೆರವುಗೊಳಿಸಬೇಕು ಎಂದು ನಿರ್ದೇಶನ ನೀಡಿದರು.**

ವಿಶೇಷ ಆಯುಕ್ತರಾದ ಸುಷಮಾ ಗೋಡಬೋಲೆ, ಘನತ್ಯಾಜ್ಯ ನಿರ್ವಹಣಾ ನಿಯಮಿತದ ಸಿಇಒ ಕರೀಗೌಡ, ನಗರ ಪಾಲಿಕೆಗಳ ಆಯುಕ್ತರು, ಮುಖ್ಯ ಇಂಜಿನಿಯರ್ ಗಳು, ರೈಲ್ವೆ, ಜಲಮಂಡಳಿ, ಬಿಡಿಎ ಅಧಿಕಾರಿಗಳು ಉಪಸ್ಥಿತರಿದ್ದರು.

# ನಕಲಿ ಬಿಲ್: 310 ಇಂಜಿನಿಯರ್‌ಗಳಿಗೆ ನೋಟಿಸ್

• ಉದಯವಾಹಿನಿ, ಬೆಂಗಳೂರು

ಅಕ್ರಮ, ನಕಲಿ ಬಿಲ್ ಪ್ರಕರಣಕ್ಕೆ ಸಂಬಂಧಿಸಿದಂತೆ 310 ಇಂಜಿನಿಯರ್ ಗಳಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ನೋಟಿಸ್ ಜಾರಿ ಮಾಡಿದೆ. ಬಿಬಿಎಂಪಿಯಾಗಿದ್ದಾಗ 2008-09 ಮತ್ತು 2011-12ರ ಅವಧಿಯಲ್ಲಿ ಗಾಂಧಿನಗರ, ಮಲ್ಲೇಶ್ವರ, ರಾಜ ರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಡೆದಿದ್ದ ಸಾರ್ವಜನಿಕ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಲು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಸಮಿತಿಯನ್ನು ರಚಿಸಲಾಗಿತ್ತು. ಈ ಕುರಿತು ಮೇ 13ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ, ಕಾಮಗಾರಿ ನಡೆಯದಿದ್ದರೂ ನಕಲಿ ಬಿಲ್‌ಗಳನ್ನು ಸಲ್ಲಿಸಲಾಗಿದೆ ಎನ್ನಲಾಗಿದೆ. ನಗರಾಭಿವೃದ್ಧಿ ಇಲಾಖೆ ಈ ಹಿಂದೆ ನೀಡಿದ್ದ ನೋಟಿಸ್‌ಗಳಿಗೆ ಇಂಜಿನಿಯರ್ ಗಳು ಪ್ರತಿಕ್ರಿಯಿಸಿಲ್ಲ. ಹೀಗಾಗಿ, ಅಧಿಸೂಚನೆ ಹೊರಡಿಸಿರುವ 15 ದಿನಗಳಲ್ಲಿ ಇಂಜಿನಿಯರ್‌ಗಳು ಪ್ರಾಧಿಕಾರದ ಮುಂದೆ ಹಾಜರಾಗಿ, ಲಿಖಿತ ಪ್ರತಿಕ್ರಿಯೆ ಸಲ್ಲಿಸಬೇಕೆಂದು ಸೂಚಿಸಲಾಗಿದೆ.

# ಇಂಧನ ದರ ಏರಿಕೆ: ಗಿಗ್ ಕಾರ್ಮಿಕರಿಗೆ ಸಂಕಷ್ಟ


• ಉದಯವಾಹಿನಿ, ಬೆಂಗಳೂರು

ಇಂಧನ ದರ ಏರಿಕೆಯು ಗಿಗ್ ಕಾರ್ಮಿಕರ ಜೀವನೋಪಾಯದ ಮೇಲೆ ಪರಿಣಾಮ ಬೀರುತ್ತಿದೆ. ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯಾಗಿ ಆನ್‌ಲೈನ್ ಪ್ಲಾಟ್‌ಫಾರ್ಮ್ ಬಳಸಿ ಆಹಾರ ತರಿಸುವವರ ಪ್ರಮಾಣ ಒಂದೆಡೆ ಕಡಿಮೆಯಾಗಿದ್ದರೆ, ಪೆಟ್ರೋಲ್ ದರ ಹೆಚ್ಚಳವಾಗಿ ಪೂರೈಕೆ ವೆಚ್ಚ ಅಧಿಕಗೊಂಡಿದೆ.

ಎಲ್‌ಪಿಜಿ ಸಿಲಿಂಡರ್ ಸಮಸ್ಯೆ ತಲೆದೋರಿದಾಗ ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಆಹಾರದ ದರವನ್ನು ಏರಿಕೆ ಮಾಡಿದರು ಗ್ರಾಹಕರು ಅಗತ್ಯ ಬಿದ್ದಾಗ ನೇರವಾಗಿ ಹೋಟೆಲ್‌ಗಳಿಗೆ ಹೋಗುವುದಕ್ಕೆ ಆದ್ಯತೆ ನೀಡುತ್ತಿದ್ದು, ಆನ್‌ಲೈನ್ ವಿತರಣಾ ಪ್ಲಾಟ್‌ಫಾರ್ಮ್ ಬಳಸುವುದನ್ನು ಕಡಿಮೆ ಮಾಡಿದ್ದಾರೆ. ಇದರಿಂದ ಪೂರೈಕೆಯ ವೆಚ್ಚವು ಗ್ರಾಹಕರಿಗೆ ಉಳಿಯುತ್ತಿದೆ. ಆದರೆ, ವಿತರಣಾ ವ್ಯವಸ್ಥೆಯನ್ನೇ ನಂಬಿರುವ ಗಿಗ್ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ವಿತರಣಾ ಏಜೆಂಟ್‌ಗಳು ತಿಳಿಸಿದ್ದಾರೆ.

'ಮೊದಲು ದಿನಕ್ಕೆ 20ರಿಂದ 25 ಆರ್ಡರಗಳು ಬರುತ್ತಿದ್ದವು. ನಾಲ್ಕೈದು ವಾರಗಳ ಈಚೆಗೆ 15ರಿಂದ 20 ಆರ್ಡರಗಳಷ್ಟೇ ಬರುತ್ತಿವೆ. ಇದೀಗ ಪೆಟ್ರೋಲ್ ದರವೂ ಹೆಚ್ಚಳವಾಗಿರುವುದರಿಂದ ಖರ್ಚು ಅಧಿಕಗೊಂಡಿದ್ದು, ಆದಾಯ ಕಡಿಮೆಯಾಗಿದೆ' ಎಂದು ಗಿಗ್ ಕಾರ್ಮಿಕ ಮುಜಾಕಿರ್ ತಿಳಿಸಿದರು.

'ವೆಚ್ಚ ಹೆಚ್ಚಾಗಿದ್ದರೂ ನಮಗೆ ಸಿಗುವ ಕಮಿಷನ್ ಹೆಚ್ಚಾಗಿಲ್ಲ.



ನಮಗೆ ಏನು ಪರಿಹಾರ ಎಂಬುದನ್ನು ವಿತರಣಾ ಅಗ್ರಿಗೇಟರ್ ಸಂಸ್ಥೆಗಳು ತಿಳಿಸಿಲ್ಲ. ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕಿದೆ' ಎಂದು ಗಿಗ್ ಕಾರ್ಮಿಕ ತರುಣ್ ಕುಮಾರ್ ಹೇಳಿದರು.

'ದೊಡ್ಡ ಪ್ರಮಾಣದ ರೆಸ್ಟೋರೆಂಟ್‌ಗಳಿಂದ ತರಿಸಿಕೊಳ್ಳುವವರ ಪ್ರಮಾಣ ಕಡಿಮೆಯಾಗಿಲ್ಲ. ರಾತ್ರಿ ವಿತರಣೆಗಳು ಉಳಿದಿರುವುದರಿಂದ ಗಿಗ್ ಕಾರ್ಮಿಕರು ಉಸಿರಾಡುವಂತಾಗಿದೆ' ಎಂದು ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್ನರ್ಸ್‌ರ ಯೂನಿಯನ್ ಅಧ್ಯಕ್ಷ ವಿನಯ್ ಸಾರಥಿ ತಿಳಿಸಿದರು.

'ಮೊದಲೇ ಕಡಿಮೆ ಆದಾಯ ಗಳಿಸುತ್ತಿದ್ದ ಗಿಗ್ ಕಾರ್ಮಿಕರಿಗೆ ಇಂಧನ ಬೆಲೆ ಏರಿಕೆ ಹೊಡೆತ ನೀಡಿದೆ. ಇಂಧನ ವೆಚ್ಚವನ್ನು ಸರಿದೂಗಿಸಲು ಅಗ್ರಿಗೇಟರ್ ಕಂಪನಿಗಳು ನೆರವಿಗೆ ಬರುತ್ತಿಲ್ಲ. ಅದೂ ಈ ಕಾರ್ಮಿಕರ ಜೇಬಿನಿಂದ ಭರಿಸಬೇಕಿದ್ದರೆ ಅವರ ಜೀವನ ಸಾಗುವುದು ಕಷ್ಟ. ಗಿಗ್ ಕಾರ್ಮಿಕರ ನೆರವಿಗೆ ಸರ್ಕಾರ ಬರಬೇಕು. ಪರಿಹಾರ, ರಿಯಾಯಿತಿಗಳನ್ನು ನೀಡಲು ಪರಿಶೀಲಿಸಬೇಕು' ಎಂದು ಕರ್ನಾಟಕ ಆಯಪ್ ಆಧಾರಿತ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ, ಭಾರತೀಯ ಆಯಪ್ ಆಧಾರಿತ ಸಾರಿಗೆ ಕಾರ್ಮಿಕರ ಒಕ್ಕೂಟದ ರಾಷ್ಟ್ರೀಯ ಉಪಾಧ್ಯಕ್ಷ ಇನಾಯತ್ ಅಲಿ ಒತ್ತಾಯಿಸಿದರು.

**ದರ ಹೆಚ್ಚಳ: ಗ್ರಾಹಕರಿಗೆ ಆಘಾತ;** ತಮ್ಮ ವಾಹನಗಳಿಗೆ ಇಂಧನ ತುಂಬಿಸಲು ಶುಕ್ರವಾರ ಬೆಳಿಗ್ಗೆ ಬಂಕ್‌ಗಳಿಗೆ ಬಂದಿದ್ದ ಗ್ರಾಹಕರು ಡೀಸೆಲ್, ಪೆಟ್ರೋಲ್ ದರ ಏರಿಕೆಯಾಗಿರುವುದನ್ನು ಕಂಡು ಆಘಾತಗೊಂಡರು. ಡೀಸೆಲ್ ದರವು ಲೀಟರ್‌ಗೆ 94.10, ಪೆಟ್ರೋಲ್ ದರವು 106.10ಕ್ಕೆ ತಲುಪಿತ್ತು. ರಾಜಾಜಿನಗರ, ಜಯನಗರ ಮತ್ತು ಸುತ್ತಮುತ್ತಲಿನ ಹಲವಾರು ಪೆಟ್ರೋಲ್ ಬಂಕ್‌ಗಳಲ್ಲಿ ಸಿಬ್ಬಂದಿ ದರದ ಪ್ರದರ್ಶನಗಳನ್ನು ಬದಲಾಯಿಸಿದಾಗ ಪ್ರಯಾಣಿಕರು ಹತಾಶೆ ವ್ಯಕ್ತಪಡಿಸಿದರು. 'ನಾನು ಮೊದಲು 200ಕ್ಕೆ ಪೆಟ್ರೋಲ್ ಹಾಕಿಸಿದಾಗ ಎಷ್ಟು ದೂರ ಸಂಚರಿಸಲು ಸಾಧ್ಯವಿತ್ತೋ ಅಷ್ಟು ದೂರಕ್ಕೆ ಸಂಚರಿಸಲು ಇನ್ನು ಮುಂದೆ 220ಕ್ಕೆ ಪೆಟ್ರೋಲ್ ಹಾಕಿಸಬೇಕಾಗುತ್ತದೆ' ಎಂದು ದ್ವಿಚಕ್ರ ವಾಹನ ಸವಾರ ಕಿರಣ್ ಹೇಳಿದರು.

'ಡೀಸೆಲ್, ಪೆಟ್ರೋಲ್ ದರ ಹೆಚ್ಚಳವಾದಾಗ ಅದೇ ಪ್ರಮಾಣದಲ್ಲಿ ಆಹಾರ ಪದಾರ್ಥಗಳಿಂದ ಹಿಡಿದು ಸಾರಿಗೆ ದರಗಳವರೆಗೆ ದರ ಹೆಚ್ಚಳವಾಗುತ್ತದೆ. ಆದರೆ, ನಮ್ಮ ವೇತನವು ಅದಕ್ಕೆ ಅನುಗುಣವಾಗಿ ಹೆಚ್ಚಳವಾಗುವುದೇ ಇಲ್ಲ' ಎಂದು ಇನ್ನೊಬ್ಬ ಗ್ರಾಹಕರು ಪ್ರತಿಕ್ರಿಯಿಸಿದರು.

'ಮೆಟ್ರೊ ಪ್ರಯಾಣ ಈಗಾಗಲೇ ದುಬಾರಿಯಾಗಿದೆ. ಈಗ ಪೆಟ್ರೋಲ್ ದರವೂ ಹೆಚ್ಚಳವಾದರೆ ಇನ್ನು ಮುಂದೆ ವಿದ್ಯುತ್ ವಾಹನಗಳನ್ನೇ ಖರೀದಿಸುವುದು ಉತ್ತಮ' ಎಂದು ಗ್ರಾಹಕ ರಂಜಿತ್ ಶಂಕರ್ ಹೇಳಿದರು. ಆದಾಯ ಅಷ್ಟೇ ಇದ್ದು, ವೆಚ್ಚ ಹೆಚ್ಚಾಗಿರುವುದರಿಂದ ಸ್ಥಳೀಯ ಟ್ಯಾಕ್ಸಿ ಮತ್ತು ಆಟೋ ಚಾಲಕರ ದೈನಂದಿನ ಆದಾಯದ ಮೇಲೆ ಪರಿಣಾಮ ಬೀರಿದೆ ಎಂದು ಆಟೋ ಚಾಲಕರೊಬ್ಬರು ತಿಳಿಸಿದರು.

# 2 ಬಿ ಮೀಸಲಾತಿ ಮರುಸ್ಥಾಪಿಸಿ, ಗೋಹತ್ಯೆ ನಿಷೇಧ ರದ್ದು ಮಾಡಿ

● ಮುಸ್ಲಿಮರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡಲು ಆಗ್ರಹ ● ಮುಸ್ಲಿಂ ಸಮಾವೇಶದಲ್ಲಿ ರಾಜ್ಯ ಸರ್ಕಾರಕ್ಕೆ 10 ಬೇಡಿಕೆಗಳ ಪಟ್ಟಿ

• ಉದಯವಾಹಿನಿ, ಬೆಂಗಳೂರು

2 ಬಿ ಮೀಸಲಾತಿ ಜಾರಿಗೆ ತರಬೇಕು, ಗೋಹತ್ಯೆ ನಿಷೇಧ ಕಾನೂನು ರದ್ದು ಮಾಡಬೇಕು ಎಂಬ ಬೇಡಿಕೆ ಒಳಗೊಂಡು ರಾಜ್ಯ ಸರ್ಕಾರದ ಮುಂದೆ ಮುಸ್ಲಿಂ ಸಮಾವೇಶದಲ್ಲಿ 10 ಬೇಡಿಕೆಗಳ ಪಟ್ಟಿಯನ್ನು ಮುಂದಿಡಲಾಗಿದೆ. ಶನಿವಾರ ಬೆಂಗಳೂರಿನ ಟೌನ್ ಹಾಲ್‌ನಲ್ಲಿ ನಡೆದ ಸಮಾವೇಶದಲ್ಲಿ ವಿವಿಧ ಮುಸ್ಲಿಂ ಸಂಘಟನೆಗಳ ಭಾಗಿಯಾಗಿದ್ದವು. ಸಮಾವೇಶದ ವೇದಿಕೆಯಲ್ಲಿ ಸಮುದಾಯದ ಬೇಡಿಕೆಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಯಿತು. ಹಾಗೂ ಇದನ್ನು ಇಡೇರಿಸುವಂತೆ ಆಗ್ರಹಿಸಲಾಯಿತು.

**ಮುಸ್ಲಿಂ ಸಮಾವೇಶ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ವಿರುದ್ಧ ಅಲ್ಲ. ಆದರೆ ಮುಸ್ಲಿಂ ಸಮುದಾಯಕ್ಕೆ ಕೊಟ್ಟ ಆಶ್ವಾಸನೆ ಈಡೇರಿಸಿದ್ಯಾ? ಎಂಬುವುದನ್ನು ಜನರ ಮುಂದಿಡುವ ಉದ್ದೇಶ ಇದಾಗಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಸಮುದಾಯದ ಆಶೋತ್ತರಗಳನ್ನು ಈಡೇರಿಸಬೇಕು.**

**-ಸುಹೈಲ್ ಅಹ್ಮದ್ , ಮಾಜಿ ಪೊಲೀಸ್ ಅಧಿಕಾರಿ**

ಉದಯವಾಹಿನಿ ಚಿತ್ರ




**ಸಂಘಟನೆಯ ಒತ್ತಡವೇ ಕಾರಣ**

ಸಮಾವೇಶವನ್ನು ಉದ್ದೇಶಿಸಿ ಮಾಜಿ ಪೊಲೀಸ್ ಅಧಿಕಾರಿ ಸುಹೈಲ್ ಅಹ್ಮದ್ ಅವರು ಮಾತನಾಡಿ, ''ಮುಸ್ಲಿಂ ಸಮುದಾಯದ ಹಕ್ಕುಗಳಿಗಾಗಿ ಮತ್ತು ಅಸ್ಮಿತೆಗಾಗಿ ನಡೆಯುತ್ತಿರುವ ಹೋರಾಟ ಇದಾಗಿದೆ. ಆದರೆ ಇಂತಹ ಹೋರಾಟವನ್ನು ತಡೆಯುವ ಪ್ರಯತ್ನ ನಡೆಸಲಾಗಿತ್ತು. ತಮ್ಮ ಬೇಡಿಕೆಗಳಲ್ಲಿ ಒಂದಾದ ಹಿಜಾಬ್ ನಿಷೇಧ ರದ್ದತಿಯನ್ನು ವಾಪಸ್ ಪಡೆಯಲಾಗಿದೆ. ಇದಕ್ಕೆ ನಮ್ಮ ಸಂಘಟನೆಯ ಒತ್ತಡವೇ ಕಾರಣ. ಹೀಗಾಗಿ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುತ್ತೇವೆ'' ಎಂದರು. ಸಾಮಾಜಿಕ ಹೋರಾಟಗಾರರ ಮುಹಮ್ಮದ್ ಯಾಸೀನ್ ಮಲ್ಪೆ ಮಾತನಾಡಿ, ''ಚುನಾವಣೆಗೂ ಮೊದಲು ದ್ವೇಷ ಹರಡುವವನ್ನು ನಿಯಂತ್ರಣ ಮಾಡುತ್ತೇವೆ ಎಂದು ಕಾಂಗ್ರೆಸ್ ಪಕ್ಷ ಭರವಸೆ ಕೊಟ್ಟಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ದ್ವೇಷ ಹರಡುವ ಸಂಘಟನೆಗಳ ವಿರುದ್ಧ ಕ್ರಮ ಏಕಿಲ್ಲ? ಹಿಜಾಬ್ ನಿಷೇಧ ವಾಪಸ್‌ಪಡೆಯಲು ಇಷ್ಟು ದಿನ ಬೇಕಾಗಿತ್ತಾ? ಮುಸ್ಲಿಮರಿಗೆ ಸಂವಿಧಾನ ಬದ್ದವಾಗಿ ನೀಡಲಾಗಿದ್ದ 2 ಬಿ ಮೀಸಲಾತಿ ರದ್ದು ಮಾಡಲಾಗಿದೆ.ಆದರೆ ಈವರೆಗೆ ಮೀಸಲಾತಿ ಮರುಸ್ಥಾಪಿಸಿಲ್ಲ. ಕೂಡಲೇ 2 ಬಿ ಜಾರಿಗೊಳಿಸಬೇಕು. ಗೋಹತ್ಯೆ ನಿಷೇಧ ಕಾಯ್ದೆಯನ್ನು ರದ್ದು ಮಾಡಬೇಕು'' ಎಂದು ಒತ್ತಾಯಿಸಿದರು.

## 10 ಬೇಡಿಕೆಗಳೇನು?

- ■ ಮುಸ್ಲಿಮರಿಗೆ ಸಂವಿಧಾನ ಬದ್ದವಾಗಿ ನೀಡಲಾಗಿದ್ದ 2 ಬಿ ಮೀಸಲಾತಿ ರದ್ದು ಮಾಡಲಾಗಿದೆ. ಈವರೆಗೆ ಮೀಸಲಾತಿ ಮರುಸ್ಥಾಪಿಸಿಲ್ಲ. ಕೂಡಲೇ 2 ಬಿ ಜಾರಿಗೊಳಿಸಬೇಕು.
- ■ ರಾಜ್ಯದಲ್ಲಿ ಮುಸ್ಲಿಮರಿಗೆ ಸೂಕ್ತ ರಾಜಕೀಯ ಪ್ರಾತಿನಿತ್ಯ ನೀಡಬೇಕು. ಕಾಂಗ್ರೆಸ್‌ನಲ್ಲಿ 9 ಶಾಸಕರಿದ್ದಾರೆ. ಕಳೆದ ಚುನಾವಣೆಯಲ್ಲಿ ಮುಸ್ಲಿಮರಿಗೆ ನಿರೀಕ್ಷಿತ ಟಿಕೆಟ್ ಕೊಡಲು ಸಾಧ್ಯವಾಗುತ್ತಿಲ್ಲ.
- ■ ಸರ್ಕಾರದ ವಿವಿಧ ನಿಗಮ ಮಂಡಳಿಯಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯ ನೀಡಿಲ್ಲ. ಸರ್ಕಾರದ ವಿವಿಧ ಸಂಸ್ಥೆಗಳ ಮುಖ್ಯಸ್ಥರ ಹುದ್ದೆಯಲ್ಲಿ ಸೂಕ್ತ ಪ್ರಾತಿನಿಧ್ಯ ನೀಡಬೇಕು.
- ■ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆಯನ್ನು ಕೂಡಲೇ ವಾಪಸ್ ಪಡೆದುಕೊಳ್ಳಬೇಕು.
- ■ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮುಸ್ಲಿಮರಿಗೆ ಸಾವಿರ ಕೋಟಿ ರೂಪಾಯಿ ಅನುದಾನ ವಾಗ್ದಾನ ನೀಡಿತ್ತು. ಆದರೆ ಭರವಸೆ ಕೊಟ್ಟ ಮೊತ್ತದ ಅರ್ಧದಷ್ಟೇ ನೀಡಲಾಗಿದೆ.
- ■ ವಕ್ಫ್ ಆಸ್ತಿಗಳ ಅತಿಕ್ರಮಣ, ಅಸಮರ್ಪಕ ಬಳಕೆ, ವಕ್ಫ್ ಅಭಿವೃದ್ಧಿ ವಿಚಾರವಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು. ವಕ್ಫ್ ಆಸ್ತಿ ರಕ್ಷಣೆಗೆ ಯೋಜನೆ ರೂಪಿಸಬೇಕು.
- ■ ರಾಜ್ಯ ಸರ್ಕಾರ ಕೂಡಲೇ ಜಾತಿ ಗಣತಿಯನ್ನು ಜಾರಿಗೊಳಿಸಬೇಕು.
- ■ ಮುಸ್ಲಿಂ ವಿದ್ಯಾರ್ಥಿಗಳಿಗೆ ಶಿಕ್ಷಣದ ಅನುಕೂಲಕ್ಕಾಗಿ ಸೂಕ್ತ ಕ್ರಮ ಕೈಗೊಂಡಿಲ್ಲ. ಮೌಲಾನಾ ಆಝಾದ್ ಶಾಲೆಗಳ ಪರಿಸ್ಥಿತಿ ಚಿಂತಾಜನವಾಗಿದೆ. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು.
- ■ ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ರದ್ದು ಮಾಡಬೇಕು. ಅಧಿಕಾರಕ್ಕೆ ಬಂದರೆ ರದ್ದು ಮಾಡುತ್ತೇವೆ ಎಂಬ ಭರವಸೆಯನ್ನು ಕೂಡಲೇ ಈಡೇರಿಸಬೇಕು.
- ■ ಎಸ್‌ಐಆರ್ ಮೂಲಕ ಒಂದು ವರ್ಗದ ಮತದಾರರ ಹಕ್ಕು ಕಸಿಯುವ ಪ್ರಯತ್ನ ನಡೆಯುವ ಅಪಾಯ ಇದೆ. ಈ ನಿಟ್ಟಿನಲ್ಲಿ ಎಸ್ ಐ ಆರ್ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ ಕೈಗೊಳ್ಳಬೇಕು.

# ಮಕ್ಕಳ ಮನೋ ಸದೃಢತೆಗೆ ಕಲರಿ ವಿದ್ಯೆ ಸಹಕಾರಿ: ಡಾ.ಎಸ್.ಕೆ.ರಾಜೇಶ್

• ಉದಯವಾಹಿನಿ, ರಾಮನಗರ



ಉದಯವಾಹಿನಿ ಚಿತ್ರ

ಕಲರಿ ವಿದ್ಯೆಯು ಎಲ್ಲಾ ಕಲೆಗಳಿಗೆ ತಾಯಿ ಕಲೆಯಾಗಿದೆ. ಮಕ್ಕಳ ಭವಿಷ್ಯದಲ್ಲಿ ಸಪ್ತ ಚಕ್ರಗಳನ್ನು ಸಮ ಸ್ಥಿತಿಯಲ್ಲಿಟ್ಟುಕೊಳ್ಳಲು ಅತ್ಯಂತ ಸಹಕಾರಿಯಾಗಿದೆ. ಈ ಕಲೆ ಮೈಗೂಡಿಸಿಕೊಂಡಲ್ಲಿ ಬದುಕಿನ ಎಂತಹ ಕ್ಲಿಷ್ಟಕರ ಸ್ಥಿತಿಯನ್ನು ಎದುರಿಸಲು ಮನಸ್ಸು ಸದೃಢವಾಗುತ್ತದೆ ಎಂದು ಕೇರಳದ ಯೋಗ ಕಲರಿ ಶಿಕ್ಷಕ ತಜ್ಞ ಡಾ. ಎಸ್.ಕೆ.ರಾಜೇಶ್ ಹೇಳಿದರು. ಮಾಗಡಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿ ಸಮೀಪದಲ್ಲಿರುವ ಶ್ರೀ ವಿವೇಕ ಭಾರತಿ ಪ್ರಗತಿ ಕೇಂದ್ರದಲ್ಲಿ ಯೋಗಶ್ರೀ ಗುರುಕುಲದ ವತಿಯಿಂದ ನಡೆಯುತ್ತಿರುವ ಯೋಗ ಬಿಗ್ ಬಾಸ್ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಕಲರಿ ವಿದ್ಯೆ ತರಬೇತಿ ನೀಡಿ ಅವರು ಮಾತನಾಡಿದರು. ಕೇರಳದ ಪ್ರಸಿದ್ಧ ಯುದ್ಧಕಲೆಗಳಲ್ಲಿ ಕಲರಿ ವಿದ್ಯೆ ಅತ್ಯಂತ ಪುರಾತನವಾದದ್ದು. ಇದು ಸುಮಾರು ಮೂರು ಸಾವಿರ ವರ್ಷಗಳ ಇತಿಹಾಸ ಹೊಂದಿದ್ದು, ದೇಹದ ಶಕ್ತಿ, ಚುರುಕುತನ, ಧೈರ್ಯ, ಆತ್ಮರಕ್ಷಣೆಯನ್ನು ಕಲಿಸುತ್ತದೆ. ಕಲರಿ ವಿದ್ಯೆಯಲ್ಲಿ ಕೈ ಯುದ್ಧ, ಕತ್ತಿ, ಗುರಾಣಿ, ಭಲ್ಲೆ ಮುಂತಾದ ಆಯುಧಗಳ ಬಳಕೆ ಕಲಿಸಲಾಗುತ್ತದೆ. ಜತೆಗೆ ಯೋಗ, ಧ್ಯಾನ, ಉಸಿರಾಟದ ಅಭ್ಯಾಸಗಳನ್ನೂ ಇದು ಒಳಗೊಂಡಿದೆ ಎಂದರು. ವಿದ್ಯಾರ್ಥಿಗಳು ಮೊದಲು ದೇಹವನ್ನು ಬಲಿಷ್ಠವಾಗಿಸಲು ವ್ಯಾಯಾಮಗಳನ್ನು ಮಾಡುತ್ತಾರೆ. ನಂತರ ಹಂತ ಹಂತವಾಗಿ ಯುದ್ಧಕಲೆಗಳನ್ನು ಕಲಿಯುತ್ತಾರೆ.

ಈ ವಿದ್ಯೆ ಕೇವಲ ಹೋರಾಟಕ್ಕೆ ಮಾತ್ರವಲ್ಲ, ಶಿಸ್ತು, ಆತ್ಮವಿಶ್ವಾಸ ಮತ್ತು ಮನೋ ನಿಗ್ರಹ ಬೆಳೆಸುವುದಕ್ಕೂ ಸಹಾಯಕವಾಗಿದೆ. ಇಂದಿಗೂ ಕೇರಳದಲ್ಲಿ ಅನೇಕ ಕಲರಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ವಿಶ್ವದ ವಿವಿಧ ಭಾಗಗಳ ಜನರು ಈ ಕಲೆಯನ್ನು ಕಲಿಯಲು ಬರುತ್ತಿದ್ದಾರೆ ಎಂದರು. ಶ್ರೀ ವಿವೇಕ ಭಾರತಿ ಪ್ರಗತಿ ಕೇಂದ್ರದ ಸಂಸ್ಥಾಪಕ ವಿ.ವಿಜಯ್ ಮಾತನಾಡಿ, ನಮ್ಮ ಕೇಂದ್ರದಲ್ಲಿ ಆಧ್ಯಾತ್ಮಿಕ, ಧ್ಯಾನ, ಯೋಗ ಕಾರ್ಯಕ್ರಮ ಆಯೋಜಿಸಲು ಸರ್ವ ರೀತಿಯಲ್ಲಿ ಸಹಕಾರ ನೀಡಲಾಗುವುದು. ಇದೀಗ ನಡೆಯುತ್ತಿರುವ ಶಿಬಿರದಲ್ಲಿ ಮಕ್ಕಳು ಮುಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಸ್ಕೃತಿ ಸಂಪ್ರದಾಯಗಳ ಬಗ್ಗೆ ಸಮಗ್ರ ರೀತಿಯಲ್ಲಿ ಕಲಿಯುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಯೋಗಶ್ರೀ ಗುರುಕುಲದ ಯೋಗ ಶಿಕ್ಷಕ ಮಲ್ಲಣ್ಣ, ಯೋಗ ಶಿಕ್ಷಕಿ ಪವಿತ್ರ, ವಾಣಿಶ್ರೀ, ಸುಜಾತ ಹಿರೇಮಠ್, ಆಧ್ಯಾತ್ಮ ಚಿಂತಕ ರೂಪೇಶ್ ಕುಮಾರ್ ಉಪಸ್ಥಿತರಿದ್ದರು.

## 6.84 ಲಕ್ಷ ಮನೆಗಳ ಗಣತಿ ಪೂರ್ಣ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಮಂಡ್ಯ

ದೇಶದಾದ್ಯಂತ ಜನಗಣತಿ-2027 ಎರಡು ಹಂತಗಳಲ್ಲಿ ನಡೆಯುತ್ತಿದ್ದು, ಮೊದಲ ಹಂತದ 'ಮನೆ ಗಣತಿ' ಕಾರ್ಯ ಜಿಲ್ಲೆಯಲ್ಲಿ ಪೂರ್ಣಗೊಂಡಿದೆ. ಜಿಲ್ಲೆಯಲ್ಲಿರುವ 6,84,767 ಮನೆಗಳನ್ನು ಗಣತಿ ಮಾಡಿದ್ದು, ಶೇ 100ರಷ್ಟು ಪ್ರಗತಿ ಸಾಧಿಸಲಾಗಿದೆ. ಮೊದಲ ಹಂತದಲ್ಲಿ 2026ರ ಏಪ್ರಿಲ್ 16ರಿಂದ ಮೇ 15ರವರೆಗೆ ಮನೆ ಪಟ್ಟಿ ಕ್ಷೇತ್ರ ಕಾರ್ಯ ನಡೆದಿದೆ. ಎರಡನೇ ಹಂತದ ಜನಗಣತಿಯು 2027ರ ಫೆಬ್ರವರಿ 1ರಿಂದ ಫೆಬ್ರವರಿ 28ರವರೆಗೆ ನಡೆಯಲಿದೆ. 3737 ಮನೆಪಟ್ಟಿ ಬ್ಲಾಕ್‌ಗಳಲ್ಲಿ ಒಟ್ಟು 6,84,767 ಮನೆಗಳ ಗಣತಿ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಗಣತಿ ಕಾರ್ಯದಿಂದ ಜಿಲ್ಲೆಯಲ್ಲಿ 17,89,706 ಜನಸಂಖ್ಯೆ ಇರುವುದು ದಾಖಲಾಗಿದೆ. 78,637 ಖಾಲಿ ಮನೆಗಳು ಮತ್ತು 194 ಬೀಗ ಹಾಕಿದ ಮನೆಗಳು ಕಂಡುಬಂದಿವೆ. ಬೀಗ ಹಾಕಿದ ಮನೆಗಳನ್ನು ಪುನರ್ ಗಣತಿ ಮಾಡಲು ಜಿಲ್ಲಾಧಿಕಾರಿ ಕುಮಾರ ಸೂಚಿಸಿದ್ದಾರೆ. ಏಪ್ರಿಲ್ 1ರಿಂದ ಏಪ್ರಿಲ್ 15ರವರೆಗೆ ಸಾರ್ವಜನಿಕರಿಗೆ 'ಸ್ವಯಂ ಗಣತಿ' ಮಾಡಲು ಅವಕಾಶ ಕಲ್ಪಿಸಲಾಗಿತ್ತು. ತಮ್ಮ ಮನೆ ಮತ್ತು ವೈಯಕ್ತಿಕ ವಿವರಗಳನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದವರ ಸಂಖ್ಯೆ 1926 ಮಾತ್ರ. ಜಿಲ್ಲೆಯಾದ್ಯಂತ ಒಟ್ಟು 3115 ಗಣತಿದಾರರು ಹಾಗೂ 622 ಮೇಲ್ವಿಚಾರಕರನ್ನು ನಿಯೋಜಿಸಲಾಗಿತ್ತು. ಈ ಸಂಬಂಧ ಮೂರು ದಿನಗಳ ತರಬೇತಿ ಕೂಡ ನೀಡಲಾಗಿತ್ತು. ಯಾವುದೇ ತುರ್ತು ಸಂದರ್ಭಗಳಲ್ಲಿ ಬಳಕೆ ಮಾಡಲು ಶೇ 10ರಷ್ಟು ಹೆಚ್ಚುವರಿ ಸಿಬ್ಬಂದಿಯನ್ನು ಮೀಸಲಿರಿಸಲಾಗಿತ್ತು.

**ತಂತ್ರಾಂಶ ಬಳಕೆ:** ಗಣತಿದಾರರು ಸೆನ್ಸಸ್ ಮ್ಯಾನೇಜ್‌ಮೆಂಟ್ ಅಂಡ್ ಮಾನಿಟರಿಂಗ್ ಸಿಸ್ಟಂ ತಂತ್ರಾಂಶದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಮೇಲ್ವಿಚಾರಕರು ಪರಿಶೀಲಿಸಿ, ತಮ್ಮ ಲಾಗಿನ್ ಮೂಲಕ ಅಂತಿಮಗೊಳಿಸಿದ್ದಾರೆ. ಸಾರ್ವಜನಿಕರು ಯಾವುದೇ ಆತಂಕವಿಲ್ಲದೆ ಗಣತಿದಾರರಿಗೆ ನಿಖರ ಮತ್ತು ಸಂಪೂರ್ಣ ಮಾಹಿತಿ ನೀಡಿ ಈ ರಾಷ್ಟ್ರೀಯ ಕಾರ್ಯಕ್ಕೆ ಸಹಕರಿಸುವಂತೆ ಜಿಲ್ಲಾಡಳಿತ ಮತ್ತು ತಾಲ್ಲೂಕು ಆಡಳಿತಗಳಿಂದ ಜಾಗೃತಿ ಮೂಡಿಸಲಾಗಿತ್ತು.

# ಜಾನುವಾರು ಜೊತೆ ಪಾದಯಾತ್ರೆ: ಆಕ್ರೋಶ

## ಬಿರು ಬಿಸಿಲಿನ ನಡುವೆ ಜಿಲ್ಲಾ ಪಂಚಾಯಿತಿ ಕಚೇರಿಯವರೆಗೆ ಹೆಜ್ಜೆ

• ಉದಯವಾಹಿನಿ, ಮೈಸೂರು

ತಾಲ್ಲೂಕಿನ ಗುಡುಮಾದನ ಹಳ್ಳಿಯ 20 ಎಕರೆ ಕೃಷಿ ಭೂಮಿಯಲ್ಲಿ ನಿಮ್ಹಾನ್ಸ್ ಮಾದರಿ ಆಸ್ಪತ್ರೆ ನಿರ್ಮಾಣಕ್ಕೆ ಸರ್ಕಾರ ಮುಂದಾಗಿರುವುದನ್ನು ವಿರೋಧಿಸಿ ನೂರಾರು ರೈತರು, ಮಹಿಳೆಯರು, ಯುವಕರು ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಪಾದಯಾತ್ರೆ ನಡೆಸಿದರು. ಗುಡುಮಾದನಹಳ್ಳಿಯಲ್ಲಿ ಜಮಾಯಿಸಿದ ಪ್ರತಿಭಟನಕಾರರು ಕೃಷಿ ಭೂಮಿ ಉಳಿಸಲೇಬೇಕು ಎಂಬ ಆಶಯದೊಂದಿಗೆ ಪಾದಯಾತ್ರೆ ಆರಂಭಿಸಿದರು. ಬಿರು ಬಿಸಿಲಿನ ನಡುವೆ ಜಿಲ್ಲಾ ಪಂಚಾಯಿತಿ ಕಚೇರಿಯವರೆಗೆ ಹೆಜ್ಜೆ ಹಾಕಿದರು.

ಪ್ರತಿಭಟನಕಾರರೊಂದಿಗೆ ಹಸುಗಳು ಹಜ್ಜೆ ಹಾಕಿದವು. 'ನಮ್ಮ ಮೇವು, ನಮ್ಮ ಹಕ್ಕು' ಎಂಬ ಭಾವನಾತ್ಮಕ ಘೋಷಣಾ ಫಲಕ ಅವುಗಳ ಕೊರಳಲ್ಲಿ ನೇತಾಡುತ್ತಿತ್ತು. ಎತ್ತಿನ ಬಂಡಿಗೆ ಜನರೇ ಹೆಗಲು ಕೊಟ್ಟರು. ಸರ್ಕಾರದ ನೀತಿ ವಿರುದ್ಧ ಘೋಷಣೆ ಮೊಳಗಿದವು.

'ನಾವು ಅಭಿವೃದ್ಧಿಯ ವಿರೋಧಿ ಗಳಲ್ಲ, ಗುಡುಮಾದನಹಳ್ಳಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತವಲ್ಲ', 'ಬಡ ರೈತ ಮಹಿಳೆಯ ಬದುಕನ್ನು ಉಳಿಸಿ', 'ಫಲವತ್ತತೆ ಭೂಮಿಯಲ್ಲಿ ಆಸ್ಪತ್ರೆ ಬೇಡ', 'ಹಸಿರೇ ಉಸಿರು', 'ಹಸಿರು ಉಳಿದರೆ ಜೀವ ಉಳಿಯುತ್ತದೆ' ಇತ್ಯಾದಿ ಘೋಷಣಾ ಫಲಕ ಪ್ರದರ್ಶಿಸಿದರು. ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ, ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಪರಿಸರಕ್ಕಾಗಿ ನಾವು ಸಂಘಟನೆಯ ಮುಖಂಡರು ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. 'ಅಭಿವೃದ್ಧಿಯ ಹೆಸರಿನಲ್ಲಿ ಕೃಷಿ ಭೂಮಿಗಳನ್ನು ನಾಶ ಮಾಡುತ್ತಿರುವುದು ಪರಿಸರ ಮತ್ತು ಆಹಾರ ಭದ್ರತೆಗೆ ಅಪಾಯವಾಗಲಿದೆ' ಎಂದು ಎಚ್ಚರಿಸಿದರು.

ಉದಯವಾಹಿನಿ ಚಿತ್ರ



**ಕ್ಷಣಕಾಲ ಆತಂಕ ಸೃಷ್ಟಿ**

**ಆರು ಕಿಲೋ ಮೀಟರ್ ದೂರ ಕಾಲ್ನಡಿಗೆಯಲ್ಲಿ ಬಂದ ರೈತರು ಹಾಗೂ ಸಂಘಟನೆಗಳ ಮುಖಂಡರು ಜಿಲ್ಲಾ ಪಂಚಾಯಿತಿ ಆವರಣದಲ್ಲಿ ಸಮಾವೇಶ ಗೊಂಡು ಸರ್ಕಾರಕ್ಕೆ ಹಕ್ಕೊತ್ತಾಯ ಮಂಡಿಸಿದರು. ಸರ್ಕಾರ ಕೂಡಲೇ ಸ್ಪಂದಿಸದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದರು. ಜಿಲ್ಲಾ ಪಂಚಾಯಿತಿ ಮುಖ್ಯ ದ್ವಾರದಲ್ಲಿ ಪೊಲೀಸರು ಪ್ರತಿಭಟನಕಾರರನ್ನು ತಡೆದಾಗ ಮಾತಿನ ಚಕಮಕಿ ನಡೆಯಿತು. ಈ ವೇಳೆ ಜೊತೆಗಿದ್ದ ರಾಸುಗಳು ಭಯದಿಂದ ಓಡಾಡಿದವು. ಕ್ಷಣಕಾಲ ಆತಂಕ ಸೃಷ್ಟಿಯಾಯಿತು.**

'ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಮೈಸೂರು ತಾಲ್ಲೂಕಿನ ಹೊಸಹುಂಡಿ ಗ್ರಾಮದ ಸರ್ವೆ ನಂ 44ರಲ್ಲಿ 48 ಎಕರೆ. ಚೋರನಹಳ್ಳಿ ಸರ್ವೆ ನಂಬರ್ 20ರಲ್ಲಿ 10 ಎಕರೆ, ಹಡಜನ ಗ್ರಾಮದ ಸರ್ವೆ ನಂಬರ್ 149ರಲ್ಲಿ 16 ಎಕರೆ, ವಾಜಮಂಗಲ ಸರ್ವೆ ನಂಬರ್ 96ರಲ್ಲಿ 102 ಎಕರೆ ಸರ್ಕಾರಿ ಜಮೀನಿದೆ. ವರುಣ ಕ್ಷೇತ್ರದ ಇಮ್ಮಾವು ಗ್ರಾಮದಲ್ಲೂ ಜಮೀನಿದೆ. ಇವು ಆಸ್ಪತ್ರೆ ನಿರ್ಮಾಣಕ್ಕೆ ಯೋಗ್ಯ ಸ್ಥಳವಾಗಿದೆ' ಎಂದು ಹೇಳಿದರು. ಸಿಎಂ ಕಾರ್ಯಾಲಯದ ಕರ್ತವ್ಯಾಧಿಕಾರಿ ಶಿವಸ್ವಾಮಿ ಅವರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.


**ಆಸ್ಪತ್ರೆಗೆ ಗುರುತಿಸಿರುವ ಸರ್ವೆ ನಂಬರ್‌ನಲ್ಲಿ 80 ಕುಟುಂಬಗಳು ಕಳೆದ 70 ವರ್ಷಗಳಿಂದಲೂ ಸ್ವಾಧೀನಾನುಭವ ಹೊಂದಿ ಬೇಸಾಯ ಮಾಡುತ್ತ ಬಂದಿದ್ದು, ವಾರ್ಷಿಕ 2 ಭತ್ತದ ಫಸಲಿನ ಜೊತೆಗೆ ತೆಂಗು ಸೇರಿದಂತೆ ಇತರೆ ತೋಟಗಾರಿಕೆ ಬೆಳೆ ಬೆಳೆಯುತ್ತಿವೆ. 400 ಹಸುಗಳು, 300 ಕುರಿಗಳು, 100 ಮೇಕೆಗಳಿವೆ. ಈ ಸ್ಥಳವು ಜಾನುವಾರಗಳ ಮೇವಿಗೆ ಸೂಕ್ತ ಸ್ಥಳವಾಗಿದೆ. ಸಂಪೂರ್ಣ ನೀರಿನಿಂದ ಆವರಿಸಿರುವ ಭೂಮಿಯು ಕೃಷಿಗೆ ಮಾತ್ರ ಯೋಗ್ಯವಾಗಿದೆ. ಹೀಗಾಗಿ ಇಲ್ಲಿ ಕಟ್ಟಡ ನಿರ್ಮಿಸಿ ತೆರಿಗೆ ಹಣವನ್ನು ವ್ಯರ್ಥ ಮಾಡಬೇಡಿ.**

**– ಬಸವರಾಜು, ರೈತ ಸಂಘದ ಹೊಸಕೋಟೆ**

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ಮಂಡ ಕಳ್ಳಿ ಮಹೇಶ್, ಚಾಮರಾಜನಗರ ಬೋರೇಗೌಡ, ಮಹಿಳಾ ಘಟಕದ ನೇತ್ರಾವತಿ, ತಾಲ್ಲೂಕು ರೈತ ಸಂಘದ ಉಪಾಧ್ಯಕ್ಷ ಜಿ.ಎನ್. ಕುಮಾರ್, ಸಂಯುಕ್ತ ಹೋರಾಟ ಕರ್ನಾಟಕದ ಯಶವಂತ್, ಪರಿಸರವಾದಿ ಪ್ರಶಾಂತ್, ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕ ಪರಶು, ಪರಿಸರಕ್ಕಾಗಿ ನಾವು ಸಂಘಟನೆಯ ಪರುಶುರಾಮೇಗೌಡ ಭಾಗವಹಿಸಿದರು.

# ಕೇರಳದಿಂದ ವೈದ್ಯಕೀಯ ತ್ಯಾಜ್ಯ ಅಕ್ರಮ ಸಾಗಣೆ: ಜಾರಕಿಹೊಳಿ ಬ್ರಿಗೇಡ್ ಆರೋಪ

• ಉದಯವಾಹಿನಿ, ಗುಂಡ್ಲುಪೇಟೆ



ಉದಯವಾಹಿನಿ ಚಿತ್ರ

ಕೇರಳದಿಂದ ತಾಲ್ಲೂಕಿಗೆ ಅಕ್ರಮವಾಗಿ ರವಾನೆ ಆಗುತ್ತಿರುವ ಮೆಡಿಕಲ್ ತ್ಯಾಜ್ಯ ಮತ್ತು ಕಸಕ್ಕೆ ಕಡಿವಾಣ ಹಾಕುವ ಜೊತೆಗೆ ಈ ದಂಧೆಯಲ್ಲಿ ಶಾಮೀಲಾಗಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಜಾರಕಿಹೊಳಿ ಬ್ರಿಗೇಡ್ ವತಿಯಿಂದ ತಹಶೀಲ್ದಾರ್ ತನ್ಮಯ್ ರವರಿಗೆ ಮನವಿ ಸಲ್ಲಿಸಲಾಯಿತು.

ತಹಶೀಲ್ದಾರ್ ತನ್ಮಯ್ ರಿಗೆ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಗೋವಿನಾಯಕ್, ನೆರೆಯ ಕೇರಳ ರಾಜ್ಯದಿಂದ ಮೂಲೆಹೊಳೆ ಚೆಕ್ ಪೋಸ್ಟ್ ಮೂಲಕ ನಮ್ಮ ರಾಜ್ಯಕ್ಕೆ ಆಸ್ಪತ್ರೆ ವಿಷಕಾರಿ ತ್ಯಾಜ್ಯ ಮತ್ತು ನಿರುಪಯುಕ್ತ ಕಸವನ್ನು ಲಾರಿಗಳ ಮೂಲಕ ತರಲಾಗುತ್ತಿದೆ. ಇದರ ಬಗ್ಗೆ ಈಗಾಗಲೇ ಹಲವು ಬಾರಿ ದೂರು ನೀಡಲಾಗಿದ್ದರು ಸಹ ಕ್ರಮವಾಗಿಲ್ಲ ಎಂದು ಅಸಮಾಧಾನ ಹೊರ ಹಾಕಿದರು.

ಕಳೆದ 8 ದಿನಗಳ ಹಿಂದೆ ನಂಜನಗೂಡಿನಲ್ಲಿ ಆಸ್ಪತ್ರೆ ವಿಷಕಾರಿ ತ್ಯಾಜ್ಯ ಮತ್ತು ನಿರುಪಯುಕ್ತ ಕಸವನ್ನು ಸಾಗಿಸುತ್ತಿದ್ದ ಎರಡು ಲಾರಿಗಳನ್ನು ವಶಪಡಿಸಿಕೊಂಡು ಕೇಸ್ ಕೂಡ ದಾಖಲಾಗಿದೆ. ಆ ವಾಹನಗಳು ಕೇರಳ ರಾಜ್ಯದಿಂದ ಮೂಲೆಹೊಳೆ ಚೆಕ್ ಪೋಸ್ಟ್ ಮೂಲಕ ಬಂದಿದ್ದರು ಸಹ ಅಲ್ಲಿ ಕೆಲಸ ನಿರ್ವಹಿಸುವ ಅರಣ್ಯ ಇಲಾಖೆ, ಆರ್‌ಟಿಓ, ಪೊಲೀಸ್ ಇಲಾಖೆಯವರು ಸಮರ್ಪಕ ತಪಾಸನೆ ನಡೆಸುತ್ತಿಲ್ಲ. ಇದರಿಂದ ವಿಷಕಾರಿ ವಸ್ತುಗಳು ನಮ್ಮಲ್ಲಿಗೆ ವಾಹನಗಳ ಮೂಲಕ ರವಾನೆಯಾಗುತ್ತಿದೆ. ಇದು ಹಲವು ಅನುಮಾನಕ್ಕೆ ಎಡೆಮಾಡಿಕೊಡುತ್ತಿದೆ. ಈ ವಿಚಾರದಲ್ಲಿ ಪೊಲೀಸರ ಹೆಸರಿನಲ್ಲಿ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೋಂ ಗಾರ್ಡ್ ಒಬ್ಬರಿಗೆ ತಲಾ ಒಂದು ವಾಹನಕ್ಕೆ 2000 ರೂ.ನಂತೆ ಹಾಗೂ ಅರಣ್ಯ ಇಲಾಖೆಯವರಿಗೆ 3000 ಹಣ ನೀಡುತ್ತಿದ್ದೇವೆ ಎಂದು ಸಾಗಾಣೆ ಮಾಡುತ್ತಿರುವ ಕೇರಳದವರು ಹೇಳುತ್ತಿದ್ದಾರೆ ಎಂದು ಆರೋಪಿಸಿದರು.

ಆಸ್ಪತ್ರೆ ವಿಷಕಾರಿ ತ್ಯಾಜ್ಯ ಮತ್ತು ನಿರುಪಯುಕ್ತ ಕಸವನ್ನು ಲಾರಿಗಳು ಮೂಲೆಹೊಳೆ ಚೆಕ್ ಪೋಸ್ಟ್ ಮೂಲಕ ಕೆಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸೋಗಿನಲ್ಲಿ ವಾಹನಗಳು ಬರುತ್ತಿದೆ. ಇದರಿಂದ ದಿನ ಕಳೆದಂತೆ ಗುಂಡ್ಲುಪೇಟೆ ತಾಲ್ಲೂಕಿ ವಾತಾವರಣ ಕಲುಷಿತವಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಸೂಕ್ತ ತನಿಖೆ ನಡೆಸಿ ಮೆಡಿಕಲ್ ತ್ಯಾಜ್ಯಕ್ಕೆ ಕಡಿವಾಣ ಹಾಕುವ ಜೊತೆಗೆ ದಂಧೆಯಲ್ಲಿ ಶಾಮಿಲಾಗಿರುವವ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಾರಕಿಹೊಳಿ ಬ್ರಿಗೇಡ್ ಪದಾಧಿಕಾರಿಗಳಾದ ರಮೇಶ್, ಗಿರೀಶ್, ರವಿಶೇಖರ್ (ಬಾಂಡ್), ಧನುಷ್ ಗೌಡ, ಸೀನ, ಹರ್ಷ ಇತರರು ಹಾಜರಿದ್ದರು.

# ಕೆಆರ್‌ಎಸ್ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ನಾರಾಯಣಸ್ವಾಮಿ ದೇಗುಲ ಗೋಚರ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಪಾಂಡವಪುರ

ಕೆ.ಆರ್.ಎಸ್. ಅಣೆಕಟ್ಟೆಯ ನೀರಿನ ಮಟ್ಟ 88 ಅಡಿಗೆ ಇಳಿಕೆಯಾಗಿದ್ದು, ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ನಾರಾಯಣಸ್ವಾಮಿ ದೇಗುಲ 3 ವರ್ಷಗಳ ನಂತರ ಸಂಪೂರ್ಣ ಗೋಚರವಾಗಿದೆ. ಕೃಷ್ಣರಾಜ ಸಾಗರ ಜಲಾಶಯದ ಬೋರೆ ಆನಂದೂರು ಸಮೀಪದ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ನಾರಾಯಣಸ್ವಾಮಿ ದೇವಾಲಯ ಮೂರು ವರ್ಷಗಳ ಹಿಂದೆ 2023ರಲ್ಲಿ ಗೋಚರವಾಗಿತ್ತು. ಕೆ.ಆರ್. ಸಾಗರ ಅಣೆಕಟ್ಟೆಯ ನಿರ್ಮಾಣ ಸಂದರ್ಭದಲ್ಲಿ ನೂರು ವರ್ಷಗಳ ಹಿಂದೆಯೇ ದೇವರ ಮೂರ್ತಿಯನ್ನು ಸ್ಥಳಾಂತರ ಮಾಡಲಾಗಿತ್ತು. ಉಳಿದಿದ್ದ ಗೋಪುರ ಮತ್ತು ದೇವಸ್ಥಾನ ಕಂಬಗಳು ಈಗ ಕಾಣಿಸಿಕೊಂಡಿವೆ.

ನಾರಾಯಣಸ್ವಾಮಿ ದೇಗುಲವು ಸುತ್ತಮುತ್ತಲಿನ ಹತ್ತು ಗ್ರಾಮಗಳ ಮನೆ ದೇವರಾಗಿದೆ. ಮಜ್ಜಿಗೆರ ಗ್ರಾಮದಲ್ಲಿ ದೇವಸ್ಥಾನ ನಿರ್ಮಾಣವಾಗಿದ್ದು, ಮೂಲ ದೇವರಾದ ನಾರಾಯಣಸ್ವಾಮಿ ದೇವರಿಗೆ ನಿತ್ಯ ಪೂಜೆಗಳು ನಡೆಯುತ್ತಿವೆ. ಬೋರೆ ಆನಂದೂರು ಗ್ರಾಮದ ಬಳಿಯ ಕಗ್ಗಲಿ ಅರಣ್ಯ ವಲಯದ ಪಕ್ಕದ ಕೆ.ಆರ್. ಸಾಗರ ಹಿನ್ನೀರಿನ ಸಮೀಪದಲ್ಲಿ ಈರಣ್ಯ, ಸೂರಣ್ಣ ಎಂಬ ಎರಡು ದೇವರ ವಿಗ್ರಹಗಳು ಕಾಣ ಸಿಗುತ್ತಿವೆ. ಈ ಎರಡು ಕಲ್ಲುಗಳಲ್ಲಿ ಶಿವನ ಪೂಜೆ ಮಾಡುತ್ತಿರುವುದು ಮತ್ತು ವಿವಿಧ ಭಂಗಿಗಳಲ್ಲಿ ಕೆತ್ತನೆ ಕಂಡು ಬಂದಿದೆ. ಈ ಬಗ್ಗೆ ಹಳೆಗನ್ನಡದಲ್ಲಿ ಬರಹವಿದೆ. ಆದರೆ, ಸತತವಾಗಿ ಹಿನ್ನೀರಿನಲ್ಲಿ ಮುಳುಗಿರುವ ಕಾರಣ ಮಸುಕಾಗಿದೆ ಎನ್ನಲಾಗಿದೆ.

# ನೀರಿನ ಸಮಸ್ಯೆ ಇತ್ಯರ್ಥಕ್ಕೆ ಸೂಚನೆ

• ಉದಯವಾಹಿನಿ, ಬಾಗೇಪಲ್ಲಿ



ಉದಯವಾಹಿನಿ ಚಿತ್ರ

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಸಭೆ ನಡೆಯಿತು. ಬಾಗೇಪಲ್ಲಿ, ಗುಡಿಬಂಡೆ ಮತ್ತು ಚೇಳೂರು ತಾಲ್ಲೂಕುಗಳಲ್ಲಿ ಅವಧಿ ಒಳಗೆ ಮಳೆ ಆಗದಿದ್ದರೆ 35 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸಬಹುದು ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಮಾತನಾಡಿ, ಗ್ರಾಮಗಳಲ್ಲಿ ಜನರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆ ಆಗದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಅಗತ್ಯ ಕ್ರಮ ಕೈಗೊಳ್ಳಬೇಕು. ಪಟ್ಟಣದ 1, 2 ಮತ್ತು 3ನೇ ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಇದೆ ಎಂಬುದಾಗಿ ಸಾರ್ವಜನಿಕರಿಂದ ದೂರುಗಳು ಬಂದಿವೆ. ಮುಖ್ಯಾಧಿಕಾರಿಗಳು, ಇಂಜಿನಿಯರ್‌ಗಳು ಭೇಟಿ ನೀಡಿ, ಕೊಳವೆಬಾವಿ ಕೊರೆಸಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಬೇಕು ಎಂದು ಸೂಚಿಸಿದರು. ಯಾವುದೇ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಎದುರಾಗಿರುವ ಕುರಿತು ದೂರುಗಳು ಬಂದಲ್ಲಿ, ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

# ಕೆರೆಗಳ ಪುನಶ್ಚೇತನದಿಂದ ಅಂತರ್ಜಲ ಹೆಚ್ಚಳ

• ಉದಯವಾಹಿನಿ, ಹಿರೀಸಾವೆ

ಉದಯವಾಹಿನಿ ಚಿತ್ರ



ಕೆರೆಗಳ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಅವುಗಳನ್ನು ಪುನಶ್ಚೇತನ ಮಾಡುವುದರಿಂದ ಅಂತರ್ಜಲ ಹೆಚ್ಚಲಿದೆ. ಮಾನವ, ಪ್ರಾಣಿ, ಪಕ್ಷಿಗಳಿಗೆ ನೀರಿನ ಅಭಾವವು ಇರುವುದಿಲ್ಲ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಹೋಬಳಿಯ ಬೆಳಗೀಹಳ್ಳಿಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು ಶಾಖೆ ವತಿಯಿಂದ 'ನಮ್ಮೂರು ನಮ್ಮ ಕೆರೆ' ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಕೆರೆಗಳು ಉತ್ತಮ ಸ್ಥಿತಿಯಲ್ಲಿ ಇದ್ದು, ನೀರು ತುಂಬಿದರೆ, ಕುಡಿಯುವ ನೀರು ಮತ್ತು ಕೃಷಿಗೆ ಅನುಕೂಲವಾಗುತ್ತದೆ.

ಕೆರೆಗಳಲ್ಲಿ ಹೂಳ ಅನ್ನು ವೈಜ್ಞಾನಿಕವಾಗಿ ಎತ್ತಬೇಕು. ಆದರೆ ನಮ್ಮ ಭಾಗದಲ್ಲಿ ಆಳವಾಗಿ ತೆಗೆಯುತ್ತಿರುವುದು ಸರಿಯಲ್ಲ. ಕೆರೆಯ ಹೂಳಿನ ಮೇಲ್ಭಾಗದ ಮೂರು ಅಡಿಯಷ್ಟು ಮಣ್ಣು ಮಾತ್ರ ತೆಂಗಿನ ಮರಗಳಿಗೆ ಮತ್ತು ಕೃಷಿಗೆ ಭೂಮಿಗೆ ಅನುಕೂಲರವಾಗಿದೆ. ಹೆಚ್ಚು ಆಳಕ್ಕೆ ಮಣ್ಣು ತೆಗೆಯುವುದರಿಂದ ನೀರು ಬೇಗ ಬಸಿದು ಹೋಗುತ್ತದೆ' ಎಂದರು.

ತುಮಕೂರು ಜಿಲ್ಲಾ ಯೋಜನಾ ನಿರ್ದೇಶಕ ಸತೀಶ್ ಸುವರ್ಣ ಮಾತನಾಡಿ, 'ಸುಮಾರು 13 ಲಕ್ಷದಲ್ಲಿ ಈ ಕೆರೆಯನ್ನು ಅಭಿವೃದ್ಧಿ ಪಡಿಸಲಾಗುವುದು. ಉತ್ತಮವಾದ ಕೆಲಸ ಮಾಡಲು ಗ್ರಾಮಸ್ಥರು ಹೆಚ್ಚಿನ ಸಹಕಾರ ನೀಡಿ' ಎಂದರು. ಯೋಜನಾಧಿಕಾರಿ ಕುಸುಮಧರ್ ಕಾಮಗಾರಿ ಮತ್ತು ಇತರೆ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

# ಮಳೆ ಮರೀಚಿಕೆ: ಹೆಚ್ಚುತ್ತಿದೆ ನೀರಿನ ಸಮಸ್ಯೆ

## 36 ಗ್ರಾಮ ಪಂಚಾಯಿತಿಯ 24 ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪ್ರಾರಂಭ

• ಉದಯವಾಹಿನಿ, ಕುಣಿಗಲ್


ತಾಲ್ಲೂಕಿನಲ್ಲಿ ಮಳೆ ಮರೀಚಿಕೆಯಾಗಿದ್ದು, ಇದೇ ಪರಿಸ್ಥಿತಿ ಮುಂದುವರಿದರೆ ಗ್ರಾಮೀಣ ಪ್ರದೇಶದಲ್ಲಿ ಜನ, ಜಾನುವಾರುಗಳು ಕುಡಿಯುವ ನೀರಿಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗುತ್ತದೆ.

ತಾಲ್ಲೂಕಿನಲ್ಲಿ 36 ಗ್ರಾಮ ಪಂಚಾಯಿತಿಯ 24 ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪ್ರಾರಂಭವಾಗಿದೆ. ಕೊತ್ತಗೆರೆ ಹೋಬಳಿಯ ತರೆದಕುಪ್ಪೆ, ಬಾಗೇನಹಳ್ಳಿ ಪಂಚಾಯಿತಿಯ 12 ಗ್ರಾಮಗಳಲ್ಲಿ ಮತ್ತು ಹುಲಿಯೂರುದುರ್ಗ ಹೋಬಳಿ ನಿಡಸಾಲೆ ಪಂಚಾಯಿತಿಯ ಮೂರು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ.

ಮೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಅಧಿಕಾರಿಗಳು ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದಾರೆ. ಜತೆಗೆ ಖಾಸಗಿ ಕೊಳವೆಬಾವಿ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡು ನೀರನ್ನು ಪಡೆದು ಸರಬರಾಜು ಮಾಡುತ್ತಿದ್ದರೂ, ನಿರೀಕ್ಷಿತ ಪ್ರಮಾಣದ ಮಳೆಯಾಗದ ಕಾರಣ ಸಮಸ್ಯೆ ಮತ್ತಷ್ಟೂ ಬಿಗಡಾಯಿಸುತ್ತಿದೆ. ಹುಲಿಯೂರುದುರ್ಗ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಶಿಂಷಾ ಕೊಳ್ಳದಿಂದ ನೀರು ಪಡೆದು ವಿತರಣೆ ಮಾಡಲಾಗುತ್ತಿದೆ.

ಕೊಳ್ಳ ಬತ್ತಿಹೋಗುತ್ತಿದ್ದು, ನೀರಿನ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಈ ಭಾಗದಲ್ಲೂ ನೀರಿನ ಸಮಸ್ಯೆ ವಾರದಲ್ಲೇ ಮತ್ತೆ ಹೆಚ್ಚಾಗುತ್ತದೆ. ಎಡೆಯೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಮಾರ್ಕೋನಹಳ್ಳಿ ಜಲಾಶಯದಿಂದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ನೀರು ಸರಬರಾಜಾಗುತ್ತಿದೆ. ಕಾರ್ಯನಿರ್ವಹಿಸುತ್ತಿದ್ದ 4 ಪಂಪ್‌ಮೋಟಾರ್‌ಗಳ ಪೈಕಿ ಮೂರು ಕೆಟ್ಟು ವರ್ಷಗಳೇ ಕಳೆದಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದು ದೂರಿರುವ ನಾಗರಿಕರು ಪರಿಸ್ಥಿತಿ ಮುಂದುವರಿದರೆ ಎಡೆಯೂರು, ಬೀರಾಗಾನಹಳ್ಳಿ, ಜಲಧಿಗೆರೆ ಗ್ರಾಮಗಳಲ್ಲಿ ಸಮಸ್ಯೆ ಹೆಚ್ಚಾಗುತ್ತದೆ ಎಂದು ತಿಳಿಸಿದ್ದಾರೆ.

ಉದಯವಾಹಿನಿ ಚಿತ್ರ



**ನೀರು ಸಿಗುವುದು ಕಷ್ಟ**

ತಾಲ್ಲೂಕಿನ 70 ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ. 30 ಗ್ರಾಮದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. 11 ಗ್ರಾಮದಲ್ಲಿ ಖಾಸಗಿ ಕೊಳವೆಬಾವಿ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡು ನೀರು ವಿತರಣೆ ಮಾಡಲಾಗುತ್ತದೆ ಎಂದು ತಾಲ್ಲೂಕು ಪಂಚಾಯಿತಿ ಇಒ ವಸಂತ್ ಕುಮಾರ್ ತಿಳಿಸಿದ್ದಾರೆ. ತಾಲ್ಲೂಕಿನ 36 ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ 800 ಕೊಳವೆ ಬಾವಿಗಳಿದ್ದು, 80 ಕೊಳವೆಬಾವಿ ಬತ್ತಿ ಹೋಗಿದೆ. ಅಂತರ್ಜಲ ಕುಸಿದ ಪರಿಣಾಮ ಒಂದು ಸಾವಿರ ಅಡಿ ಕೊರೆದರೂ ನೀರು ಸಿಗುವುದು ಕಷ್ಟವಾಗಿದೆ. ಹೊಸದಾಗಿ 44 ಕೊಳವೆಬಾವಿ ಕೊರೆಸಲಾಗುತ್ತಿದೆ.

ಗ್ರಾಮ ಪಂಚಾಯಿತಿ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಜನಪ್ರತಿನಿಧಿಗಳ ಆಡಳಿತ ವ್ಯವಸ್ಥೆ ಇಲ್ಲದ ಕಾರಣ ಗ್ರಾಮೀಣ ಪ್ರದೇಶದ ಜನರು ಕುಡಿಯುವ ನೀರಿನ ಸಮಸ್ಯೆಗೆ ನೇರವಾಗಿ ಶಾಸಕ ಡಾ.ರಂಗನಾಥ್ ಅವರನ್ನೆ ಸಂಪರ್ಕಿಸುತ್ತಿದ್ದಾರೆ. ಸಮಸ್ಯೆಗೆ ಸ್ಪಂದಿಸಲು ಶಾಸಕರು ಒಟ್ಟು ಐದು ಕಾರ್ಯಪಡೆ ಸಭೆಗಳನ್ನು ನಡೆಸಿ, ಕುಡಿಯುವ ನೀರಿನ ಸಮಸ್ಯೆಗಳಿಗೆ ಸ್ಪಂದಿಸುವಂತೆ ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ಕೊಳವೆಬಾವಿ ಕೊರೆಸುವುದು ಮತ್ತೂ ಟ್ಯಾಂಕರ್‌ಮೂಲಕ ಸರಬರಾಜು ಮಾಡುವುದೇ ಪರಿಹಾರವಲ್ಲ ಮಿತವಾಗಿ ಬಳಸುವುದರ ಜತೆಗೆ, ತಾಲ್ಲೂಕಿನಲ್ಲಿ ಕೊಳವೆ ಬಾವಿ ಕೊರೆಸುವುದಕ್ಕೆ ತಾಲ್ಲೂಕು ಆಡಳಿತದ ಅನುಮತಿ ಕಡ್ಡಾಯ ಮಾಡಿ, ಹೊಸದಾಗಿ ಕೊರೆಯುವ ಖಾಸಗಿ ಕೊಳವೆಬಾವಿ ಮಾಲೀಕರು ಕುಡಿಯುವ ನೀರಿಗಾಗಿ ಸಹಕರಿಸಲು ಮನವಿ ಮಾಡಿದ್ದಾರೆ.

**ಮಳೆ ಕೊರತೆಯಿಂದ ಪೂರ್ವ ಮುಂಗಾರು ಚಟುವಟಿಕೆ ಪ್ರಾರಂಭವಾಗಿಲ್ಲ**

**ತಾಲ್ಲೂಕಿನಲ್ಲಿ ಒಟ್ಟು 135 ಶುದ್ಧ ಕುಡಿಯುವ ನೀರಿನ ಘಟಕಗಳಿವೆ. 120 ಕಾರ್ಯನಿರ್ವಹಿಸುತ್ತಿದ್ದು 15 ದುರಸ್ತಿಯಾಗಬೇಕಿದೆ. ಹೊಸದಾಗಿ 20 ಘಟಕಗಳ ನಿರ್ಮಾಣಕ್ಕೆ ಕ್ರಮಕೈಗೊಳ್ಳಲಾಗಿದೆ. ಕೃಷಿ ಇಲಾಖೆ ಅಧಿಕಾರಿಗಳ ಮಾಹಿತಿಯಂತೆ ತಾಲ್ಲೂಕಿಗೆ ವಾರ್ಷಿಕ ಸರಾಸರಿ 830 ಮಿ.ಮೀ ಮಳೆಯಾಗಬೇಕಾಗಿದ್ದು ಇದುವರೆಗೂ 40 ಮಿ.ಮೀ ಮಳೆಯಾಗಿದೆ. ಏಪ್ರಿಲ್ ತಿಂಗಳಲ್ಲಿ 40 ಮಿ.ಮೀ ಮಳೆಯಾಗಬೇಕಾಗಿದ್ದು 10 ಮಿ.ಮೀ ಮಳೆಯಾಗಿದೆ. ಶೇ.90ರಷ್ಟು ಮಳೆ ಕೊರತೆಯಾಗಿರುವುದರಿಂದ ಪೂರ್ವ ಮುಂಗಾರು ಚಟುವಟಿಕೆ ಪ್ರಾರಂಭವಾಗಿಲ್ಲ.**

**ಪುರಸಭೆ ಸಿಬ್ಬಂದಿ ನಿರ್ಲಕ್ಷ್ಯದಿಂದ ಸಮಸ್ಯೆ**

**ದೊಡ್ಡಕೆರೆಯಲ್ಲಿ ನೀರು ಇರುವುದರ ಜತೆಗೆ 90 ಕೊಳವೆ ಬಾವಿಗಳಿರುವುದರಿಂದ ಕುಣಿಗಲ್ ಪಟ್ಟಣದಲ್ಲಿ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಆದರೂ ವಿತರಣೆ ವ್ಯವಸ್ಥೆಯ ಲೋಪ ಮತ್ತು ಶುದ್ಧೀಕರಣಗೊಳಿಸುವಲ್ಲಿ ಪುರಸಭೆ ಸಿಬ್ಬಂದಿ ನಿರ್ಲಕ್ಷ್ಯದಿಂದ ಸಮಸ್ಯೆ ಹೆಚ್ಚಾಗುತ್ತಿದೆ.**

# ಮಿನಿ ನ್ಯೂಸ್

## ಮೇಕೆ, ಕುರಿಗಳನ್ನ ಕೊಂದು ಹಾಕಿದ್ದ ಚಿರತೆ ಸೆರೆ ನಿಟ್ಟುಸಿರು ಬಿಟ್ಟ ಗ್ರಾಮಸ್ಥರು

• ಉದಯವಾಹಿನಿ, ರಾಮನಗರ

15 ಅಡಿ ಎತ್ತರದ ಕಾಂಪೌಂಡ್ ಹಾರಿ ಮೇಕೆ, ಕುರಿಗಳ ಮೇಲೆ ದಾಳಿ ಮಾಡಿ ಕೊಂದು ಹಾಕಿದ್ದ ಚಿರತೆ ಕೊನೆಗೂ ಬೋನಿಗೆ ಬಿದ್ದಿರುವ ಘಟನೆ ಕನಕಪುರ ತಾಲ್ಲೂಕಿನ ಮಳಗಾಳು ಗ್ರಾಮದಲ್ಲಿ ನಡೆದಿದೆ. ಕಳೆದ ಮೂರು ದಿನಗಳ ಹಿಂದೆ ಗ್ರಾಮದ ರೈತ ರಾಕೇಶ್ ಎಂಬವರ ಕೊಟ್ಟಿಗೆಯಲ್ಲಿ ಕಟ್ಟಿದ್ದ ಕುರಿ, ಮೇಕೆಗಳ ಮೇಲೆ ದಾಳಿ ಮಾಡಿದ್ದ ಪರಿಣಾಮ ಎರಡು ಕುರಿ, ಎರಡು ಮೇಕೆಗಳನ್ನ ಕೊಂದುಹಾಕಿತ್ತು. 15 ಅಡಿ ಎತ್ತರದ ಕಾಂಪೌಂಡ್ ಇದ್ದರೂ ಕೂಡಾ ಚಿರತೆ ಕೊಟ್ಟಿಗೆಗೆ ನುಗ್ಗಿ ದಾಳಿ ಮಾಡಿದೆ. ಇನ್ನೂ ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿದ ವೇಳೆ ಗ್ರಾಮಸ್ಥರು ಚಿರತೆ ಸೆರೆಗೆ ಒತ್ತಾಯಿಸಿದ್ದರು. ಶುಕ್ರವಾರ ಮಾಳಗಾಳು ಗ್ರಾಮದ ಹೊರವಲಯದಲ್ಲಿ ಅರಣ್ಯಾಧಿಕಾರಿಗಳು ಬೋನ್ ಅಳವಡಿಸಿದ್ದರು. ಶನಿವಾರ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಚಿರತೆ ಬಿದ್ದಿದ್ದು, ಚಿರತೆ ಸೆರೆಯಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.

## ಅರಣ್ಯ ಪ್ರದೇಶದಲ್ಲಿ ಚುಕ್ಕೆ ಜಿಂಕೆ ಕಡವೆಯ ಬೇಟೆ

• ಉದಯವಾಹಿನಿ, ಹನೂರು


ತಾಲ್ಲೂಕಿನ ಕೌದಳ್ಳಿ ವನ್ಯಜೀವಿ ವಲಯ ವ್ಯಾಪ್ತಿಯ ಚನ್ನಬಸವಹಳ್ಳ ಅರಣ್ಯ ಪ್ರದೇಶದಲ್ಲಿ ಚುಕ್ಕೆ ಜಿಂಕೆ ಹಾಗೂ ಕಡವೆಯನ್ನು ಬೇಟೆಯಾಡಿ ಮಾಂಸ ಕತ್ತರಿಸುತ್ತಿದ್ದ ಆರೋಪಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ. ಮದ್ಯ ಮಧ್ಯರಾತ್ರಿ ಸುಮಾರು 1-00 ಗಂಟೆ ವೇಳೆಗೆ ಕೌದಳ್ಳಿ ಶಾಖೆಯ ಸಾವಿರಮತ್ತಿ ಗಸ್ತಿನ ವೇಳೆ ಅರಣ್ಯ ಸಿಬ್ಬಂದಿ ರಾತ್ರಿಗಸ್ತು ನಡೆಸುತ್ತಿದ್ದ ಸಂದರ್ಭದಲ್ಲಿ, ಆರು ಮಂದಿ ಆರೋಪಿಗಳು ನಾಡ ಬಂದೂಕಿನಿಂದ ಜಿಂಕೆಯನ್ನು ಬೇಟೆಯಾಡಿ ಮಾಂಸವನ್ನಾಗಿ ಪರಿವರ್ತಿಸುತ್ತಿರುವುದು ಪತ್ತೆಯಾಗಿದೆ. ತಕ್ಷಣ ಕಾರ್ಯಾಚರಣೆ ನಡೆಸಿದ ಅರಣ್ಯ ಸಿಬ್ಬಂದಿಗಳು ಇಬ್ಬರು ಬೇಟೆಗಾರರನ್ನು ಬಂಧಿಸಿದ್ದಾರೆ, ಉಳಿದ ನಾಲ್ವರು ಆರೋಪಿಗಳು ಪರಾರಿಯಾಗಿದ್ದಾರೆ.

ಬಂಧಿತ ಆರೋಪಿಗಳನ್ನು ಅರಬಗೆರೆ -75 ಗ್ರಾಮದ ಮಾದೇವ ಹಾಗೂ ಪೊನ್ನಾಚಿ ಗ್ರಾಮದ ಬಸವರಾಜು ಎಂದು ಗುರುತಿಸಲಾಗಿದೆ. ಇನ್ನುಳಿದ ನಾಲ್ವರು ಆರೋಪಿಗಳಿಗಾಗಿ ಅರಣ್ಯ ಇಲಾಖೆ ಶೋಧ ಕಾರ್ಯ ಮುಂದುವರೆಸಿದೆ. ಕಾರ್ಯಾಚರಣೆ ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಂದ್ರ, ಎಂ.ಸಿ. ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಂ. ಮರಿಸ್ವಾಮಿ ಅವರ ಮಾರ್ಗದರ್ಶನದಲ್ಲಿ ನಡೆದಿದ್ದು, ವಲಯ ಅರಣ್ಯಾಧಿಕಾರಿ ವಾಗೀಶ್ ಬಿ.ಜೆ. ನೇತೃತ್ವದಲ್ಲಿ ಅರಣ್ಯ ಸಿಬ್ಬಂದಿ ದಾಳಿ ನಡೆಸಿದರು.

## ಕಾಡಾನೆ ದಾಳಿಗೆ ಫಸಲು ನಾಶ: ಬೆಟ್ಟದಮಾದಹಳ್ಳಿಯಲ್ಲಿ ಘಟನೆ

• ಉದಯವಾಹಿನಿ, ಗುಂಡ್ಲುಪೇಟೆ


ಆಹಾರ ಅರಸಿ ಬಂದ ಕಾಡಾನೆ ದಾಳಿಗೆ ಸೋಲಾರ್ ವಿದ್ಯುತ್ ತಂತಿ ಬೇಲಿ, ತೆಂಗು ಮತ್ತು ಮುಸುಕಿನ ಜೋಳದ ಬೆಳೆ ನಾಶವಾಗಿರುವ ಘಟನೆ ತಾಲ್ಲೂಕಿನ ಬೆಟ್ಟದಮಾದಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ನಡೆದಿದೆ. ಬೆಟ್ಟದಮಾದಹಳ್ಳಿ ಗ್ರಾಮದ ಶಾಂತಪ್ಪ ಎಂಬುವವರಿಗೆ ಸೇರಿದ ಸ.ನಂ:173/2ರ ಜಮೀನಿಗೆ ನುಗ್ಗಿದ ಕಾಡಾನೆ ಸೋಲಾರ್ ವಿದ್ಯುತ್ ತಂತಿ ಬೇಲಿಯನ್ನು ಮುರಿದು ನಾಶಗೊಳಿಸಿದೆ. ನಂತರ ಒಳನುಗ್ಗಿ ಜಮೀನಿನಲ್ಲಿ ಬೆಳವಣಿಗೆ ಹಂತದಲ್ಲಿದ್ದ ತೆಂಗಿನ ಮರಗಳನ್ನು ಮುರಿದು ತಿಂದಿದೆ. ಬಹು ಸಮಯದವರೆಗೆ ಮುಸುಕಿನ ಜೋಳದ ಬೆಳೆ ನಡುವೆ ಓಡಾಡಿರುವ ಕಾರಣ ಬೆಳೆ ಸಂಪೂರ್ಣ ನಾಶವಾಗಿದೆ.



ಉದಯವಾಹಿನಿ ಚಿತ್ರ

ಗ್ರಾಮ ವ್ಯಾಪ್ತಿಯಲ್ಲಿ ಸಲಗದ ಹಾವಳಿ ಮಿತಿ ಮೀರಿದೆ. ಪ್ರತಿ ದಿನ ಒಂದಲ್ಲ ಒಂದು ಜಮೀನಿಗೆ ನುಗ್ಗುವ ಸಲಗ ಬೆಳೆ ನಾಶ ಮಾಡುತ್ತಿದೆ. ನಿಯಂತ್ರಣಕ್ಕೆ ಕ್ರಮ ವಹಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ಬೆಳೆ ನಾಶದ ಬಗ್ಗೆ ಮಾಹಿತಿ ನೀಡಿದರೂ ಸಕಾಲದಲ್ಲಿ ಬಂದು ಸ್ಥಳ ಮಹಜರು ನಡೆಸುವುದಿಲ್ಲ. ನಂತರ ಪರಿಹಾರದ ಹಣಕ್ಕಾಗಿ ವರ್ಷಗಟ್ಟಲೇ ಕಾಯಬೇಕಿದೆ. ಆದ್ದರಿಂದ ಸಂಬಂಧಪಟ್ಟವರು ಸಲಗದ ಹಾವಳಿ ನಿಯಂತ್ರಿಸಲು ಕ್ರಮ ವಹಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಜಿ.ಟಿ.ದೇವೇಗೌಡ್ರು ತಪ್ಪನ್ನು ತಿದ್ದಿಕೊಂಡು ಪಕ್ಷದಲ್ಲೇ ಉಳಿದರೆ ನಮ್ಮ ಅಭ್ಯಂತರವಿಲ್ಲ



• ಉದಯವಾಹಿನಿ, ಮೈಸೂರು

ಜಿ.ಟಿ.ದೇವೇಗೌಡರು ತಮ್ಮ ತಪ್ಪನ್ನು ತಿದ್ದಿಕೊಂಡು ಪಕ್ಷದಲ್ಲೇ ಮುಂದುವರೆಯಲು ನಿರ್ಧರಿಸಿದರೆ ಅದಕ್ಕೆ ಯಾವುದೇ ಅಭ್ಯಂತರವಿಲ್ಲ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಟಾಂಗ್ ಕೊಟ್ಟಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಪಕ್ಷದ ವರಿಷ್ಠರಿಗೆ ಜಿ.ಟಿ.ದೇವೇಗೌಡರ ಮೇಲೆ ಮತ್ತೆ ನಂಬಿಕೆ ಬಂದು ಅವರನ್ನು ಪಕ್ಷದಲ್ಲೇ ಉಳಿಸಿಕೊಳ್ಳಲು ತೀರ್ಮಾನಿಸಿದರೆ ಅದಕ್ಕೂ ನಮ್ಮ ವಿರೋಧ ಇಲ್ಲ ಎಂದು ಸ್ಪಷ್ಟಪಡಿಸಿದರು.

ಜಿ.ಟಿ.ದೇವೇಗೌಡರಿಂದ ಪಕ್ಷಕ್ಕೆ ಬಹಳ ದೊಡ್ಡ ನಷ್ಟವಾಗಿದೆ. ಅವರು ಪ್ರತಿ ಚುನಾವಣೆಗೆ ಒಂದೊಂದು ರೀತಿಯ ತೀರ್ಮಾನ ಮಾಡುತ್ತಾರೆ. ಅವರ ನಿರ್ಧಾರಗಳಿಂದ ಪಕ್ಷದ ಕಾರ್ಯಕರ್ತರಿಗೆ ನೋವಾಗಿದೆ ಎಂದು ಅವರು ಆರೋಪಿಸಿದರು.

ಪಕ್ಷಕ್ಕಿಂತ ನಮಗೆ ಯಾರೂ ದೊಡ್ಡವರಲ್ಲ. ಪಕ್ಷಕ್ಕೆ ನಿಷ್ಠಾವಂತ ಕಾರ್ಯಕರ್ತರ ಅವಶ್ಯಕತೆ ಇದೆ ಹೊರತು, ಇಂತಹ ನಾಯಕರ ಅನಿವಾರ್ಯತೆ ಇಲ್ಲ ಎಂದು ಅವರು ಕಟುವಾಗಿ ಪ್ರತಿಕ್ರಿಯಿಸಿದರು. ಪಕ್ಷ ಜಿ.ಟಿ.ದೇವೇಗೌಡರಿಗೆ ಎಲ್ಲಾ ರೀತಿಯ ಅಧಿಕಾರ ಕೊಟ್ಟಿತ್ತು. ಆದರೆ ಅವರು ಪಕ್ಷಕ್ಕೆ ಮೋಸ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಈ ಭಾಗದಲ್ಲಿ ಸಾಮೂಹಿಕ ನಾಯಕತ್ವ ಕಟ್ಟಿಕೊಂಡಿದ್ದೇವೆ ಎಂದರು. ಇಂದು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಮಾವೇಶ ಇದೆ. ಈ ಕಾರಣ ದೊಡ್ಡಗೌಡರಿಗೆ ಹುಟ್ಟುಹಬ್ಬಕ್ಕೂ ಮುಂಚೆಯೇ ಶುಭಾಶಯ ತಿಳಿಸಿದ್ದಾರೆ. ಈ ಎಲ್ಲಾ ತಂತ್ರಗಳು ನಮಗೆ ಅರ್ಥವಾಗುತ್ತವೆ ಎಂದು ವ್ಯಂಗ್ಯವಾಡಿದರು.

ಅಂತರಾಳದಿಂದ... EDITORIAL

# ಮರೀಚಿಕೆಯಾದ ಜಿಬಿಎ ಚುನಾವಣೆ- ಆತಂಕ ಹುಟ್ಟಿಸುವ ಆಯೋಗದ ನಡೆ


ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ನಗರಪಾಲಿಕೆಗಳಿಗೆ ನಡೆಯಬೇಕಾದ ಚುನಾವಣೆಯು ಕಣ್ಣಿಗೆ ಕಂಡರೂ ಕೈಗೆ ನಿಲುಕದ ಮರೀಚಿಕೆಯಂತಾಗಿದೆ. 5 ವರ್ಷಗಳಿಗೂ ಹೆಚ್ಚು ಅವಧಿಯಿಂದ ಮುಂದಕ್ಕೆ ಹೋಗುತ್ತಲೇ ಇರುವ ಚುನಾವಣೆಯು, ಪ್ರಸ್ತುತ ಇನ್ನೇನು ದಿನ ನಿಗದಿಯಾಯಿತು ಎಂದು ಸಾರ್ವಜನಿಕರು ನಿರೀಕ್ಷಿಸುತ್ತಿದ್ದ ಸಂದರ್ಭದಲ್ಲಿ ಮತ್ತೆ ಮುಂದಕ್ಕೆ ಹೋಗುವ ಎಲ್ಲಾ ಸಾಧ್ಯತೆಗಳು ದಟ್ಟವಾಗಿದೆ. ಇದು ಗಂಭೀರ ಚುನಾವಣಾ ವೈಫಲ್ಯವಾಗಿದ್ದು, ಅದರ ಹೊಣೆಯನ್ನು ರಾಜ್ಯ ಚುನಾವಣಾ ಆಯೋಗವೇ (ಎಸ್‌ಇಸಿ) ಹೊರಬೇಕಾಗಿದೆ. ಆಯೋಗವೇ ನೀಡಿದ್ದ ಭರವಸೆಯನ್ನು ಆಧರಿಸಿ, ಪಾಲಿಕೆ ಚುನಾವಣೆ ನಡೆಸಲು ಅನೇಕ ಬಾರಿ ಕಾಲಾವಕಾಶ ನೀಡಿದ್ದ ಸುಪ್ರೀಂ ಕೋರ್ಟ್, ಜೂನ್ ತಿಂಗಳೊಳಗೆ ಚುನಾವಣೆ ನಡೆಸುವಂತೆ ಅಂತಿಮ ಗಡುವು ಗೊತ್ತುಪಡಿಸಿತ್ತು. ಇತ್ತೀಚಿನ ಪ್ರಮಾಣಪತ್ರದಲ್ಲಿ ಆಯೋಗವು, ಚುನಾವಣೆ ನಡೆಸಲು ತಾನು ಸಿದ್ಧವಾಗಿದ್ದು, ರಾಜ್ಯ ಸರ್ಕಾರವೇ ಹೆಚ್ಚಿನ ಕಾಲಾವಕಾಶ ಕೇಳುತ್ತಿದೆ ಎಂದು ಕೋರ್ಟ್‌ಗೆ ತಿಳಿಸಿತ್ತು. ಆದರೂ, ಜೂನ್ ಕೊನೆಯ ವೇಳೆಗೆ ಚುನಾವಣೆ ನಡೆಸುವುದಾಗಿ ಹೇಳಿತ್ತು. ಮತದಾರರ ಅಂತಿಮಪಟ್ಟಿ ಪ್ರಕಟಗೊಂಡಿದ್ದು, ವಾರ್ಡ್‌ಗಳ ಮರುವಿಂಗಡಣೆಯೂ ಪೂರ್ಣಗೊಂಡಿರುವುದರಿಂದ ಚುನಾವಣೆ ನಡೆಸಲು ಯಾವ ಗಂಭೀರ ಅಡೆತಡೆಯೂ ಇಲ್ಲ ಎಂದು ಸಾರ್ವಜನಿಕರು ಭಾವಿಸಿದ್ದರು.




ಆದರೆ, ಆತಂಕಕಾರಿ ಹಾಗೂ ಅಚ್ಚರಿಯ ಬೆಳವಣಿಗೆಯಲ್ಲಿ ರಾಜ್ಯ ಸರ್ಕಾರದೊಂದಿಗೆ 'ಎಸ್‌ಸಿಎ' ಕೂಡ ಚುನಾವಣೆಗಾಗಿ ಹೆಚ್ಚುವರಿ ಸಮಯ ನೀಡುವಂತೆ ನ್ಯಾಯಾಲಯವನ್ನು ಕೇಳುತ್ತಿದೆ. ಜನಗಣತಿ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ಸಿಬ್ಬಂದಿಯ ಕೊರತೆಯನ್ನು ವಿಳಂಬಕ್ಕೆ ಕಾರಣಗಳನ್ನಾಗಿ ನೀಡಲಾಗಿದೆ. ಚುನಾವಣೆ ನಡೆಸುವ ಬದ್ಧತೆಗೆ ವಿರುದ್ಧವಾದ ಹಿಮ್ಮುಖ ಚಲನೆಯು, ಸ್ವಾಯತ್ತತೆ, ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸುವುದಕ್ಕಾಗಿ ಸಂವಿಧಾನದಿಂದ ನಿರ್ದೇಶನಗೊಂಡ ಸಂಸ್ಥೆಯ ವಿಶ್ವಾಸಾರ್ಹತೆಗೆ ತೀವ್ರ ಧಕ್ಕೆ ತರುವಂತಿದೆ. ಸರ್ಕಾರದ ಒತ್ತಡಕ್ಕೆ ಮಣಿಯುವಂತೆ ಕಾಣಿಸುವ ಆಯೋಗ ಸ್ವಾಯತ್ತ ಸಂಸ್ಥೆಯಂತೆಯೂ ಭಾಸವಾಗುತ್ತಿಲ್ಲ. ಚುನಾವಣೆ ನಡೆಸಲು ಸಿದ್ಧತೆ ಆಗಿದೆಯೋ ಇಲ್ಲವೋ ಎಂದು ನ್ಯಾಯಾಲಯಕ್ಕೆ ತಿಳಿಸುವುದು ಆಯೋಗದ ಕರ್ತವ್ಯವಾಗಿದೆಯೇ ಹೊರತು, ಸರ್ಕಾರದ ಅನುಕೂಲ ಅನನುಕೂಲದೊಂದಿಗೆ ಅದಕ್ಕೆ ಯಾವುದೇ ಸಂಬಂಧವಿಲ್ಲ. ಸರ್ಕಾರದ ನಿಲುವನ್ನು ಗಿಳಿಪಾಠದಂತೆ ಒಪ್ಪಿಸುವುದು ಆಯೋಗದ ನೈತಿಕತೆ ಮತ್ತು ಪ್ರಾಮಾಣಿಕತೆಯನ್ನು ಅನುಮಾನದಿಂದ ನೋಡಲು ಆಸ್ಪದ ಕಲ್ಪಿಸುತ್ತದೆ. ರಾಜ್ಯದಲ್ಲಿ ಮೇ 20ರಿಂದ 'ಎಸ್‌ಐಆರ್' ಆರಂಭಗೊಳ್ಳುತ್ತಿರುವುದು, ಸರ್ಕಾರ ಹಾಗೂ ಆಯೋಗಕ್ಕೆ ಚುನಾವಣೆ ಮುಂದೂಡಲು ದೊರಕಿರುವ ನೆಪವಾಗಿದೆ. ಆದರೆ, ಜಿಬಿಎ ಚುನಾವಣೆ ಮುಂದೂಡಿಕೆಗೆ 'ಎಸ್‌ಐಆರ್' ಪ್ರಕ್ರಿಯೆಯನ್ನು ಕಾರಣವಾಗಿ ನೀಡುವುದು ಸಮರ್ಥನೀಯವಲ್ಲ. ಮತದಾರರ ಪಟ್ಟಿ ಪರಿಷ್ಕರಣೆ ಎನ್ನುವುದು ನಿರಂತರವಾದ ಆಡಳಿತಾತ್ಮಕ ಪ್ರಕ್ರಿಯೆಯಾಗಿದ್ದು, ಅದು ಪೂರ್ಣಗೊಳ್ಳುವುದನ್ನು ಚುನಾವಣೆ ನಡೆಸಲು ಪೂರ್ವ ಷರತ್ತನ್ನಾಗಿ ವಿಧಿಸಿದರೆ, ಜಿಬಿಎ ಚುನಾವಣೆ ಅನಿರ್ದಿಷ್ಟಾವಧಿಗೆ ಮುಂದಕ್ಕೆ ಹೋಗುತ್ತದೆ.

ದೀರ್ಘ ಕಾಲದಿಂದ ಪಾಲಿಕೆಗಳಿಗೆ ಚುನಾವಣೆ ನಡೆಯದಿರುವುದರ ಪರಿಣಾಮವನ್ನು ಬೆಂಗಳೂರು ಅನುಭವಿಸುತ್ತಿದೆ. ಚುನಾಯಿತ ಸ್ಥಳೀಯ ಪ್ರತಿನಿಧಿಗಳಿಲ್ಲದೆ 'ಅಧಿಕಾರಿಗಳ ಆಡಳಿತ' (ಆಫೀಸರ್ ರಾಜ್) ಮುಂದುವರಿದಿದೆ. ಜನರಿಗೆ ಉತ್ತರದಾಯಿಯಾದ ಸ್ಥಳೀಯ ಆಡಳಿತ ಇಲ್ಲದ ಪರಿಸ್ಥಿತಿ, ಬೇಜವಾಬ್ದಾರಿತನದ ಹಾಗೂ ಪಾರದರ್ಶಕತೆಯ ಕೊರತೆಯಿಂದ ಕೂಡಿದ ಆಡಳಿತಕ್ಕೆ ಹಾಗೂ ನಾಗರಿಕರ ಸಮಸ್ಯೆಗಳು ಉಲ್ಬಣಗೊಳ್ಳಲು ಕಾರಣವಾಗಿದೆ. ರಸ್ತೆ–ಒಳಚರಂಡಿ ನಿರ್ವಹಣೆ, ಕಸ ವಿಲೇವಾರಿ, ನಗರ ಯೋಜನೆ ಮುಂತಾದ ದೈನಂದಿನ ಜೀವನಕ್ಕೆ ಸಂಬಂಧಿಸಿದ ನಿರ್ಧಾರಗಳಲ್ಲಿ ನಾಗರಿಕರ ಪ್ರಜಾಸತ್ತಾತ್ಮಕ ಧ್ವನಿಯೇ ಇಲ್ಲದಂತಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಅವಧಿಗೆ ಸರಿಯಾಗಿ ನಡೆಸುವುದು ಚುನಾವಣಾ ಆಯೋಗದ ಕರ್ತವ್ಯವೆಂದು ಸುಪ್ರೀಂ ಕೋರ್ಟ್ ಮತ್ತೆ ಮತ್ತೆ ಸ್ಪಷ್ಟಪಡಿಸಿದೆ. ತನ್ನ ಕರ್ತವ್ಯ ನಿರ್ವಹಿಸುವಲ್ಲಿ ಆಯೋಗ ವಿಫಲವಾದಲ್ಲಿ, ಪ್ರಜಾಪ್ರಭುತ್ವದ ಬೇರುಗಳು ದುರ್ಬಲಗೊಳ್ಳುತ್ತವೆ. ಆಯೋಗದ ಹೊಂದಾಣಿಕೆ ಮನೋಭಾವವನ್ನು ಕೋರ್ಟ್ ಗಂಭೀರವಾಗಿ ಪರಿಗಣಿಸಬೇಕು. ಆಡಳಿತದ ಅನುಕೂಲ, ರಾಜಕೀಯ ಲೆಕ್ಕಾಚಾರಗಳಿಗೆ ಸಂವಿಧಾನಾತ್ಮಕ ಬದ್ಧತೆಗಳು ಬಲಿಯಾಗಲು ಅವಕಾಶ ನೀಡಬಾರದು. ಚುನಾವಣಾ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕಾದ ಸಂಸ್ಥೆಯೇ ಅದು ದುರ್ಬಲಗೊಳ್ಳಲು ಕಾರಣ ಆಗುತ್ತಿರುವುದು ಹೆಚ್ಚು ಆತಂಕ ಹುಟ್ಟಿಸುವ ಸಂಗತಿಯಾಗಿದೆ.

## ರಾಮಾಯಣ



**ಸೀತೆಯನ್ನು ಒಲಿಸಿಕೊಳ್ಳಲು ರಾವಣನು ಅನುನಯದ ನುಡಿಗಳನ್ನಾಡಿದುದು**

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಬಿರುಗಾಳಿಯಿಂದ ಬಾಳೆಯ ಮರವು ಬಳುಕುವ ಹಾಗೆ, ಮಲಿನವಸ್ತ್ರಗಳಲ್ಲಿ ಸರ್ವಾಂಗವನ್ನು ಮರೆಮಾಚಿಕೊಂಡು ಮರುಗುತ್ತ ಕೆಸರಿನಲ್ಲಿನ ತಾವರೆಯಂತೆ ಕಂಡೂ ಕಾಣಿಸದ ಹಾಗಿರುವ ಸೀತೆಯನ್ನು ನೋಡಿ ಅನುರಾಗದ ಅವಿವೇಕತೆಯಿಂದ ಕೂಡಿ ಒಲುಮೆಯ ಮಾತುಗಳನ್ನಾಡಲು ರಾವಣನು ಬಯಸಿದ. ಕಾಮನ ಬಲುಹು ಅದೆಂತಹುದು! ಮಾನಹಾನಿಯನ್ನು ಲೇಶವಾದರೂ ಗಣನೆಗೆ ತೆಗೆದುಕೊಳ್ಳದೆ, ಕಾಮೋತ್ಕಂಠದ ದುರ್ಮತಿಯಿಂದ ದಶಮೌಳಿಯು ಪರಿಪರಿಯ ಒಡವೆವಸ್ತ್ರಗಳನ್ನು ತರಿಸಿ ಸೀತೆಯ ಮುಂದಿಟ್ಟು, ಮಧುರವೂ ಖಂಡಿತವೂ ಆದ ನುಡಿಗಳಿಂದ, ಸಾವನ್ನು ಆಕೆಯನ್ನು ಪ್ರಯತ್ನಿಸಿದ. ಪ್ರೇಮವಿಹ್ವಲತೆಯಿಂದ ರಾವಣನು 24 ಆಕರ ಆಜ ರಾಣಿಯನ್ನು ಮೋಹನಗೊಳಿಸುವ ಉದ್ದೇಶದಿಂದ ಲಲ್ಲಗರೆಯಲು ಉದ್ದೇಶಿಸಿದ.

**9. ತನ್ನ ಉದ್ದೇಶದಲ್ಲಿ ವಿಫಲನಾದ ರಾವಣನು ರಕ್ಕಸಿಯರಿಗೆ ಸೂಚನೆಯಿತ್ತು ವಾಪಸಾದುದು**

ಅದ್ರಿಜಾತೆಯೇ, ಗಂಡನಲ್ಲಿ ಮನಸನ್ನಿಟ್ಟು ಮಮತೆ ಮುಂತಾದುವನ್ನು ಸುಟ್ಟು, ನೆನಹನ್ನಷ್ಟೇ ಅವಲಂಬಿಸಿ ನಿರಶನದಿಂದ ದೇಹದಂಡನೆಗೈಯುತ್ತ ಆತನ ಪಾದಸರಸಿಜಗಳಲ್ಲಿ ಸರ್ವಸ್ವವನ್ನೂ ಅರ್ಪಿಸಿ ದಿನಗಳೆಯುತ್ತಿದ್ದ ಸಾಧ್ವೀಶಿಖಾಮಣಿಯನ್ನು ದಾನವರೆರೆಯನು ವೌತಕಾಡಿಸುವ ಸಡಗರವನ್ನು ತೋರಿಸಿದ. ಚಂದ್ರಲೇಖೆ, ಮಾಲತೀಲತೆ, ಶಿರೀಷಪುಷ್ಪಗಳ ಕೋಮಲತೆಯನ್ನು ಮೀರಿಸುವ ಸೀತೆಯ ಸುಕುಮಾರ ದೇಹವು ಸುಖಲೇಶವನ್ನೂ ತಿಳಿಯದೆ ಕಂದಿ ಹಸಿವುನೀರಡಿಕೆಗಳಿಂದ ಬಳಲಿದರೂ ಆಕೆಯು ಹೇಗೋ ಜೀವವನ್ನಿರಿಸಿಕೊಂಡಿದ್ದಳು. ಆಕೆಯನ್ನು ಕುರಿತು ರಾವಣನು, ''ತಾವರೆಗಣ್ಣವಳೇ, ಕಾರಣವಿಲ್ಲದ ನಿನ್ನ ಚಿಂತೆಯನ್ನು ಬಿಟ್ಟುಬಿಡು. ನನ್ನ ಮಾತನ್ನು ಕೇಳು, ನಿನ್ನ ಯೌವನ, ಸೊಬಗು, ಸುಕುಮಾರತೆ, ಚಾತುರ್ಯ, ಮಾಧುರ್ಯ, ಸುರಸತಿಯರನ್ನು ಹೀಗಳೆಯುವ ಲಾವಣ್ಯಗಳು ಮಿಕ್ಕ ಯಾರಿಗುಂಟು ನೀನು ಎಲ್ಲೆಡೆಯೂ ಸರ್ವಜನಮಾನ್ಯಳು. ಆನಂದದಾಯಿಯಾದ ಯೌವನಲಕ್ಷ್ಮಿಯು ನಿನ್ನ ಅಂಗಗಳನ್ನು ಅಪ್ಪಿಕೊಂಡು ಪ್ರಾರ್ಥಿಸುತ್ತಿರಬೇಕಾದರೆ ಅದನ್ನು ತಿರಸ್ಕರಿಸುವುದು ಬುದ್ಧಿವಂತರ ಲಕ್ಷಣವಲ್ಲ; ಇವೆಲ್ಲ ಹೋದ ಮೇಲೆ ಮತ್ತೆ ಬರಲಾರವು. ಹಾಗಾಗಿ ಸ್ಮರಶಾಸ್ತ್ರ ಸ್ವಗೀತೆಯಾದ 'ಧರಾಜಾತೆಯೇ, ಇವೆಲ್ಲವೂ ಇರುವಾಗಲೇ ಸುಖವನ್ನು ಅನುಭವಿಸಬೇಕು. ಮನೋಹರವಾದ ಈ ಕಣ್ಣಾವರೆಗಳು, ಚಂದ್ರಮುಖ, ಸ್ವರ್ಣವರ್ಣ.ತಾವರೆದಂಟಿನಂತಹ ನಳಿತೋಳು, ಚಕ್ರಕುಚ, ದುಂಬಿಯಂತಹ ಮಧುರಧ್ವನಿ ಮೊದಲಾದವು ಈ ಧರೆಯಲ್ಲಿ ಬೇರೆಯವರಿಗಿದೆಯೇ? ಅಂತಹುದರಲ್ಲಿ ನಿನಗೆ ಕಷ್ಟಜನದ ಸಹವಾಸವೇಕೆ? ಈ ಕೋರೈಸುವ ಈ ಆಭರಣಗಳು, ಹೊಸ ಚೇನಾಂಬರಗಳು, ದಿವ್ಯಪಾನಗಳು, ಬೇಡಿದುದನ್ನು ಕೊಡುವ ಸುರಧೇನು ಕಲ್ಪತರು ಚಿಂತಾಮಣಿಗಳು, ದೇವಾಂಗನೆಯರೇ ನಿನ್ನ ಸೇವಕರಾಗಿರಲು ಲವಲವಿಕೆಯಿಂದ ಸುಖವನ್ನು ಅನುಭವಿಸು. ದೇವಾನುದೇವತೆಗಳು ನಿನ್ನ ಸೇವಕರಾಗಿರುತ್ತಾರೆ, ಗಾಂಧರ್ವತುಂಬುರಾದಿಗಳು ನಿತ್ಯವೂ ಬಂದು ಹಾಡಿ ಹೊಗಳುತ್ತಾರೆ. ಸುದತಿಯೇ, ದೇಹವಿರುವಾಗಲೇ ಸಕಲ ಭೋಗಗಳನ್ನು ಹೊಂದಿ ಜೀವನಪರ್ಯಂತ ಸಂತೋಷದಿಂದಿರು. ಕುಬೇರನ ಪುಷ್ಪಕವಿಮಾನದಲ್ಲಿ ಕುಳಿತು ಸಮುದ್ರದಂಡೆಯ ಮನೋಹರ ಉದ್ಯಾನಗಳಲ್ಲಿ ವಿಹರಿಸುತ್ತ, ದೇವತೆಗಳು ಮಾಡುವ ಪರಿಪರಿಯ ಉಪಚಾರಗಳನ್ನು ಸ್ವೀಕರಿಸುತ್ತ, ಸುಖವನ್ನು ಹೊಂದಿ, ಇದಕ್ಕೆ ಕಾರಣರಾದವರನ್ನು ಮುದಗೊಳಿಸಿ ಆಮರಣಪರ್ಯಂತ ಸಂತಸದಿಂದಿರು.

''ನೀನೇನಾದರೂ ನನ್ನ ಮಾತಿಗೊಡಂಬಟ್ಟರೆ, ನಿನ್ನ ತಂದೆಗೆ ಬೇಕಾದಂತೆ ರಾಜ್ಯವನ್ನೂ, ಮಣಿಧೇನುಗಳನ್ನೂ ಕನಕಾಂಬರಗಳನ್ನೂ ನೀಡುತ್ತೇನೆ.

ಮುಂದುವರಿಯುವುದು...

### ಮೊಬೈಲ್ ಲೋಕದ ನಡುವೆ ಸಾಹಿತ್ಯದ ಬೆಳಕು ಹರಿಸಿದ 14ರ ಹರೆಯದ ಪ್ರತಿಭೆ

# ಕಲ್ಪನೆಗೆ ರೆಕ್ಕೆ ಕಟ್ಟಿದ ಬಾಲಲೇಖಕಿ ಮಾನ್ಯತಾ



ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಇಂದಿನ ದಿನಗಳಲ್ಲಿ ಬಹುತೇಕ ಮಕ್ಕಳು ರಜಾದಿನಗಳಲ್ಲಿ ಮೊಬೈಲ್ ಫೋನ್‌ಗಳಲ್ಲಿ ಸಮಯ ಕಳೆಯುತ್ತಿರುವಾಗ, ವಿಜಯಪುರದ 14 ವರ್ಷದ ಬಾಲಕಿ ಮಾನ್ಯತಾ ಝಾ ಮಾತ್ರ ತನ್ನ ಕಲ್ಪನೆಗಳಿಗೆ ರೆಕ್ಕೆಗಳನ್ನು ಕಟ್ಟುತ್ತಾ ಸಾಹಿತ್ಯ ಲೋಕದಲ್ಲಿ ತನ್ನದೇ ಆದ ಹೆಜ್ಜೆ ಗುರುತು ಮೂಡಿಸಿದ್ದಾಳೆ. ತನ್ನ ವಯಸ್ಸಿನ ಮಕ್ಕಳಿಗಿಂತ ವಿಭಿನ್ನವಾಗಿ ಯೋಚಿಸಿದ ಈ ಬಾಲಕಿ, ಕೇವಲ ಹತ್ತನೇ ತರಗತಿಯಲ್ಲಿ ಓದುತ್ತಿರುವಾಗಲೇ 'ದಿ ಮಿಸ್ಟ್ರಿ ಆಫ್ ದ ಲಾಸ್ಟ್ ಬ್ಯಾಗ್' ಎಂಬ ಇಂಗ್ಲಿಷ್ ಕಾದಂಬರಿಯನ್ನು ಬರೆದು ಪ್ರಕಟಿಸಿರುವುದು ವಿಶೇಷ ಸಾಧನೆಯಾಗಿದೆ. ಮಾನ್ಯತಾ ಕೇವಲ ಕಥೆ ಬರೆದಷ್ಟೇ ಅಲ್ಲ, ಅದನ್ನು ಪ್ರಕಟಿಸುವುದರಿಂದ ಹಿಡಿದು ಆನ್‌ಲೈನ್ ಪಬ್ಲಿಷರ್ ಹುಡುಕುವುದು ಹಾಗೂ ಅಮೆಜಾನ್, ಫ್ಲಿಪ್‌ಕಾರ್ಟ್‌ಗಳಂತಹ ವೇದಿಕೆಗಳಲ್ಲಿ ತನ್ನ ಪುಸ್ತಕ ಲಭ್ಯವಾಗುವಂತೆ ಮಾಡುವುದನ್ನೂ ಸಂಪೂರ್ಣವಾಗಿ ಸ್ವತಃ ನಿರ್ವಹಿಸಿದ್ದಾಳೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಂತಹ ಆತ್ಮವಿಶ್ವಾಸ ಮತ್ತು ಸೃಜನಶೀಲತೆ ತೋರಿರುವುದು ನಿಜಕ್ಕೂ ಪ್ರಶಂಸನೀಯ. ಮಾನ್ಯತಾಳ ಸಾಹಿತ್ಯ ಪಯಣ ಆರಂಭವಾಗಿದ್ದು ಕೋವಿಡ್ ಸಮಯದಲ್ಲಿ. ಶಾಲೆಗಳು ಮುಚ್ಚಿದ್ದಾಗ ಮತ್ತು ಮಕ್ಕಳು ಮನೆಯಲ್ಲೇ ಸೀಮಿತರಾಗಿದ್ದಾಗ, ಅವಳು ಹೆಚ್ಚಿನ ಸಮಯವನ್ನು ಪುಸ್ತಕಗಳ ಜೊತೆ ಕಳೆದಳು. ವಿಶೇಷವಾಗಿ ಪೌರಾಣಿಕ ಕಥೆಗಳ ಪುಸ್ತಕಗಳು ಅವಳ ಮೇಲೆ ದೊಡ್ಡ ಪ್ರಭಾವ ಬೀರಿದವು. ಆ ಕಥೆಗಳ ಶೈಲಿ ಮತ್ತು ಕಲ್ಪನೆಗಳು ಅವಳ ಮನಸ್ಸಿನಲ್ಲಿ ಹೊಸ ಚಿಂತನೆಗಳನ್ನು ಹುಟ್ಟಿಸಿದವು. ''ನಾನೂ ಕಥೆಗಳನ್ನು ಬರೆಯಬಹುದಲ್ಲವೇ?'' ಎಂಬ ಆಲೋಚನೆಯೇ ಅವಳ ಬರವಣಿಗೆಯ ಮೊದಲ ಹೆಜ್ಜೆಯಾಯಿತು. ಮೊದಲಿಗೆ ಅವಳು ಚಿಕ್ಕ ಕಥೆಗಳನ್ನು ಬರೆಯಲು ಆರಂಭಿಸಿದಳು. ಅವಳ ಮೊದಲ ಕಥೆ 'ಎ ವೈರ್ಡ್ ರೋಡ್' ಎಂಬುದು. ಅದರಲ್ಲಿ ಒಂದು ಹುಡುಗಿ ಅಪರೂಪದ ಗುಹೆಯೊಳಗೆ ಹೋಗಿ ವಿಚಿತ್ರ ಘಟನೆಗಳನ್ನು ಅನುಭವಿಸುವ ಕಥೆಯನ್ನು ಹೇಳಲಾಗಿದೆ. ಕೊನೆಯಲ್ಲಿ ಅದು ಕೇವಲ ಕನಸು ಎಂದು ತಿಳಿಯುತ್ತದೆ.




ಈ ಕಥೆ ಅವಳ ಕಲ್ಪನಾ ಶಕ್ತಿಯ ಪ್ರತಿಬಿಂಬವಾಗಿತ್ತು. ಇದುವರೆಗೆ ಮಾನ್ಯತಾ ಸುಮಾರು 15 ಚಿಕ್ಕ ಕಥೆಗಳನ್ನು ಬರೆದಿದ್ದಾಳೆ. ಅವಳ ಕುಟುಂಬದವರು ಮತ್ತು ಸ್ನೇಹಿತರು ಅವಳ ಕಥೆಗಳನ್ನು ಓದಿ ಸಲಹೆಗಳನ್ನು ನೀಡುತ್ತಿದ್ದರು. ವಿಶೇಷವಾಗಿ ಅವಳ ತಾಯಿ ಪ್ರತಿಯೊಂದು ಕಥೆಯನ್ನೂ ಓದಿ ತಿದ್ದುಪಡಿ ಸಲಹೆಗಳನ್ನು ನೀಡುತ್ತಿದ್ದರಂತೆ. ಈ ಪ್ರೋತ್ಸಾಹವೇ ಮಾನ್ಯತಾಳ ಆತ್ಮವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿತು.

ಅವಳಿಗೆ ದೊಡ್ಡ ಕಥೆ ಬರೆಯಬೇಕೆಂಬ ಕನಸು ಮೂಡಿದ್ದು ಇದೇ ಸಂದರ್ಭದಲ್ಲಿ. ರೈಲ್ವೆ ಕಾಲೋನಿಯಲ್ಲಿ ವಾಸವಾಗಿದ್ದ ಕಾರಣ, ರೈಲ್ವೆ ನಿಲ್ದಾಣದಲ್ಲಿ ಜನರು ತಮ್ಮ ಬ್ಯಾಗ್‌ಗಳೊಂದಿಗೆ ಓಡಾಡುವುದನ್ನು ಅವಳು ಪ್ರತಿದಿನ ಗಮನಿಸುತ್ತಿದ್ದಳು. ಅಲ್ಲಿಯೇ ಅವಳ ಮನಸ್ಸಿನಲ್ಲಿ ''ಒಬ್ಬ ಹುಡುಗಿಯ ಬ್ಯಾಗ್ ಕಳೆದುಹೋದರೆ ಏನಾಗಬಹುದು?'' ಎಂಬ ಪ್ರಶ್ನೆ ಮೂಡಿತು. ಈ ಚಿಂತನೆಯೇ 'ದಿ ಮಿಸ್ಟ್ರಿ ಆಫ್ ದ ಲಾಸ್ಟ್ ಬ್ಯಾಗ್' ಕಾದಂಬರಿಯ ಮೂಲವಾಗಿತು. ಕಾದಂಬರಿಯ 20 ಶೇಕಡಾ ಭಾಗ ಪೂರ್ಣಗೊಂಡಾಗಲೇ ಅವಳು ಅದನ್ನು ತನ್ನ ಕುಟುಂಬದವರು ಮತ್ತು ಸ್ನೇಹಿತರೊಂದಿಗೆ ಹಂಚಿಕೊಂಡಳು. ಅವರಿಂದ ಬಂದ ಮೆಚ್ಚುಗೆ ಮತ್ತು ಸಲಹೆಗಳು ಅವಳಿಗೆ ಮತ್ತಷ್ಟು ಉತ್ಸಾಹ ನೀಡಿದವು. ಕೆಲವೇ ತಿಂಗಳಲ್ಲಿ ಕಾದಂಬರಿ ಪೂರ್ಣಗೊಂಡಿತು. ಮಾನ್ಯತಾಳ ಕಥೆಗಳಲ್ಲಿ ಮುಖ್ಯವಾಗಿ ಹುಡುಗಿಯರ ಬದುಕು, ಅವರ ಹೋರಾಟ ಮತ್ತು ಆತ್ಮವಿಶ್ವಾಸವನ್ನು ಚಿತ್ರಿಸಲಾಗಿದೆ. ''ಹುಡುಗಿಯರು ದುರ್ಬಲರಲ್ಲ. ಅವರು ಯಾವ ಸವಾಲನ್ನಾದರೂ ಎದುರಿಸಿ ಗೆಲ್ಲಬಲ್ಲರು'' ಎಂಬ ಸಂದೇಶವನ್ನು ತನ್ನ ಕಥೆಗಳ ಮೂಲಕ ಹೇಳಲು ಅವಳು ಬಯಸುತ್ತಾಳೆ.

ಮಾನ್ಯತಾಳ ತಂದೆ ಚಂದನ್ ಕುಮಾರ್ ಝಾ ಅವರು ರೈಲ್ವೆ ಇಲಾಖೆಯಲ್ಲಿ ಹಿರಿಯ ಉದ್ಯೋಗಿಯಾಗಿದ್ದಾರೆ. ''ನಮ್ಮ ಮಗಳಿಗೆ ಇಷ್ಟೊಂದು ಪ್ರತಿಭೆ ಇದೆ ಎಂದು ನಮಗೆ ಗೊತ್ತಿರಲಿಲ್ಲ. ಒಂದು ದಿನ ಅವಳು ತನ್ನ ಪುಸ್ತಕ ಪ್ರಕಟಿಸಲು ಸಿದ್ಧವಾಗಿದ್ದಾಳೆ ಎಂದು ಹೇಳಿದಾಗ ನಮಗೆ ಆಶ್ಚರ್ಯವೂ ಸಂತೋಷವೂ ಆಯಿತು,'' ಎಂದು ಅವರು ಹೆಮ್ಮೆಯಿಂದ ಹೇಳಿದ್ದಾರೆ. ಮಾನ್ಯತಾಳ ಯಶಸ್ಸಿನ ಹಿಂದೆ ಮನೆಯಲ್ಲಿದ್ದ ಓದುವ ವಾತಾವರಣವೂ ಒಂದು ಪ್ರಮುಖ ಕಾರಣವಾಗಿದೆ. ತಂದೆ ಪುಸ್ತಕ ಓದುವ ಹವ್ಯಾಸ ಹೊಂದಿದ್ದರೆ, ತಾಯಿಗೂ ಓದಿನ ಆಸಕ್ತಿ ಇತ್ತು. ಇದೇ ಸಾಹಿತ್ಯ ವಾತಾವರಣ ಮಾನ್ಯತಾಳಲ್ಲಿ ಓದು ಮತ್ತು ಬರವಣಿಗೆಯ ಪ್ರೀತಿ ಬೆಳೆಸಿತು. ಇಂದಿನ ಯುವಪೀಳಿಗೆಗೆ ಮಾನ್ಯತಾ ನೀಡುವ ಸಂದೇಶವೂ ಅರ್ಥಪೂರ್ಣವಾಗಿದೆ. ''ಮೊಬೈಲ್ ಫೋನ್‌ಗಳು ಇಂದಿನ ಜೀವನದಲ್ಲಿ ಅಗತ್ಯವಾಗಿರಬಹುದು. ಆದರೆ ಅದರ ಅತಿಯಾದ ಬಳಕೆ ಮಕ್ಕಳ ಓದು ಮತ್ತು ವ್ಯಕ್ತಿತ್ವ ಬೆಳವಣಿಗೆಯನ್ನು ಹಾಳು ಮಾಡುತ್ತದೆ. ಮೊಬೈಲ್ ಅನ್ನು ಹೊಸ ವಿಷಯಗಳನ್ನು ಕಲಿಯಲು ಮತ್ತು ಜ್ಞಾನ ಹೆಚ್ಚಿಸಿಕೊಳ್ಳಲು ಬಳಸಬೇಕು,'' ಎಂದು ಅವಳು ಹೇಳುತ್ತಾಳೆ. ಸಣ್ಣ ವಯಸ್ಸಿನಲ್ಲೇ ದೊಡ್ಡ ಕನಸು ಕಂಡು, ಅದನ್ನು ಸಾಧನೆಗೆ ತಂದುಕೊಂಡ ಮಾನ್ಯತಾ ಝಾ ಇಂದಿನ ಯುವಜನತೆಗೆ ಸ್ಫೂರ್ತಿದಾಯಕ ಮಾದರಿಯಾಗಿದ್ದಾಳೆ. ಅವಳ ಕಥೆ ಕೇವಲ ಒಬ್ಬ ಬಾಲಲೇಖಕಿಯ ಸಾಧನೆಯಲ್ಲ; ಅದು ಕಲ್ಪನೆ, ಪರಿಶ್ರಮ ಮತ್ತು ಆತ್ಮವಿಶ್ವಾಸದಿಂದ ಏನನ್ನಾದರೂ ಸಾಧಿಸಬಹುದು ಎಂಬ ನಂಬಿಕೆಯ ಜೀವಂತ ಉದಾಹರಣೆಯಾಗಿದೆ.

## ಸಿಲ್ಕಿ ಮತ್ತು ಶೈನಿಂಗ್ ಕೂದಲಿಗೆ ಬೀಟ್ರೂಟ್‌ನ ಈ ಹೇರ್ ಕೇರ್ ಟಿಪ್ಸ್ ಪ್ರಯತ್ನಿಸಿ

ಬೀಟ್ರೂಟ್ ಕೇವಲ ಆರೋಗ್ಯಕ್ಕೆ ಮಾತ್ರವಲ್ಲ, ಸೌಂದರ್ಯ ವರ್ಧಕವಾಗಿಯೂ ಅಂದರೆ ತ್ವಚೆಯ ಆರೈಕೆ ಹಾಗೂ ಕೂದಲಿನ ಆರೈಕೆಯಲ್ಲಿಯೂ ಕೂಡ ಈ ತರಕಾರಿ ಅದ್ಭುತವಾಗಿ ಕೆಲಸ ಮಾಡುತ್ತದೆ. ಪ್ರಮುಖವಾಗಿ ಈ ತರಕಾರಿಯಲ್ಲಿ ಕಂಡು ಬರುವ ಪೋಷಕಾಂಶಗಳಾದ ವಿಟಮಿನ್ ಸಿ ವಿಟಮಿನ್ ಬಿ 6, ಪೊಟ್ಯಾಸಿಯಮ್ ಕಬ್ಬಿಣಾಂಶ ಹಾಗೂ ಪ್ರಬಲ ಆಂಟಿ ಆಕ್ಸಿಡೆಂಟ್ ಅಂಶಗಳು ಕೂದಲಿನ ಆರೋಗ್ಯವನ್ನು ನೈಸರ್ಗಿಕವಾಗಿ ಹೆಚ್ಚಿಸಲು ನೆರವಿಗೆ ಬರುತ್ತದೆ.



**ಹೇರ್ ಪ್ಯಾಕ್ ಮಾಡುವ ವಿಧಾನ:** ಮನೆಯಲ್ಲಿ ಈ ಹೇರ್ ಪ್ಯಾಕ್ ಮಾಡಲು, ನಿಮಗೆ ಒಂದು ಕಪ್ ಬೀಟ್ರೂಟ್ ರಸ ಮತ್ತು ಒಂದು ಚಮಚ ಆಲಿವ್ ಎಣ್ಣೆ ಬೇಕಾಗುತ್ತದೆ. ಮೊದಲು, ಒಂದು ಮಧ್ಯಮ ಗಾತ್ರದ ಬೀಟ್ರೂಟ್ ನ ಸಿಪ್ಪೆ ಸುಲಿದು ಸಣ್ಣಗ ಕತ್ತರಿಸಿ,ಅದರ ರಸವನ್ನು ಹಿಂಡಿ ತೆಗೆಯಿರಿ. ಇನ್ನು ಈ ರಸಕ್ಕೆ ಒಂದು ಚಮಚ ಆಲಿವ್ ಎಣ್ಣೆಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ನಯವಾದ ಪೇಸ್ಟ್ ರೂಪಿಸಲು ಈ ಎರಡು ರಾಸಾಯನಿಕ ಮುಕ್ತ ಪದಾರ್ಥ ಗಳನ್ನು ಮಿಶ್ರಣ ಮಾಡಿ.

**ಹಚ್ಚುವುದು ಹೇಗೆ?:** ಈ ಮಿಶ್ರಣವನ್ನು ಹೇರ್ ಪ್ಯಾಕ್ ಆಗಿ ನಿಮ್ಮ ತಲೆಯ ನೆತ್ತಿಯಿಂದ ಹಿಡಿದು ಕೂದಲಿನ ಬುಡದಿಂದ ತುದಿಯವರೆಗೆ ಚೆನ್ನಾಗಿ ಹಚ್ಚಿ, ಎರಡೂ ಕೈಗಳಿಂದ ಹೆಚ್ಚಾಗಿ ಮಸಾಜ್ ಮಾಡಿಕೊಳ್ಳಿ. ಆ ಬಳಿಕ ಸುಮಾರು ಒಂದು ಗಂಟೆ ಹಾಗೆಯೇ ಬಿಡಿ. ಆಮೇಲೆ ನೈಸರ್ಗಿಕ ಅಥವಾ ಸೌಮ್ಯವಾದ ಶಾಂಪೂ ಬಳಸಿ ಕೂದಲನ್ನು ತೊಳೆಯಿರಿ. ಉತ್ತಮ ಫಲಿತಾಂಶಕ್ಕೆ ಈ ಹೇರ್ ಪ್ಯಾಕ್ ಅನ್ನು ವಾರಕ್ಕೆ ಎರಡು ಬಾರಿ ಬಳಸಬಹುದು.

ಪ್ರಮುಖವಾಗಿ ಈ ತರಕಾರಿ ರಕ್ತ ಪರಿಚಲನೆಯನ್ನು ಹೆಚ್ಚಿಸುವ ಮೂಲಕ ಕೂದಲಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ನಿವಾರಿಸಲು ನೆರವಿಗೆ ಬರುತ್ತದೆ. ಇನ್ನು ಬೀಟ್ರೂಟ್ ಬಣ್ಣ ಕೂದಲಿಗೆ ಹಿಡಿಯುತ್ತದೆಯೋ ಎನ್ನುವ ಚಿಂತೆ ಬೇಡ. ಶಾಂಪೂ ಬಳಸಿ ಚೆನ್ನಾಗಿ ನೀರಿನಿಂದ ಕೂದಲು ತೊಳೆದರೆ ಆ ಬಣ್ಣ ಹೋಗುತ್ತದೆ. ಬೀಟ್ರೂಟ್ ರಸವನ್ನು ನಿಯಮಿತವಾಗಿ ಹಚ್ಚುವುದರಿಂದ ಕೂದಲು ಉದುರುವ ಸಮಸ್ಯೆ ನಿಯಂತ್ರಣಕ್ಕೆ ಬರುತ್ತದೆ.



**ಬೀಟ್‌ರೂಟ್ ಬಗ್ಗೆ ಅಧ್ಯಾಯನದ ವರದಿಯ ಪ್ರಕಾರ** ಪಬ್‌ಮೆಡ್ ಸೆಂಟ್ರಲ್‌ನಲ್ಲಿ ಲಭ್ಯವಿರುವ ಅಧ್ಯಯನಗಳ ಆಧಾರದ ಮೇಲೆ, ಬೀಟ್‌ರೂಟ್ ಅನ್ನು ಪೋಷಕಾಂಶ-ದಟ್ಟವಾದ, ಉತ್ಕರ್ಷಣ ನಿರೋಧಕ-ಸಮೃದ್ಧ ಮತ್ತು ಆಂಟಿಮೈಕ್ರೊಬಿಯಲ್ ಏಜೆಂಟ್ ಎಂದು ಗುರುತಿಸಲಾಗಿದೆ, ಇದನ್ನು ಕೂದಲಿನ ಆರೈಕೆ ಮತ್ತು ನೆತ್ತಿಯ ಆರೋಗ್ಯ ಎರಡಕ್ಕೂ ಬಳಸಬಹುದು. ಕೂದಲಿಗೆ ಇದರ ಪ್ರಯೋಜನಕಾರಿ ಗುಣಗಳು ಹೆಚ್ಚಾಗಿ ಕಬ್ಬಿಣ, ಪೊಟ್ಯಾಸಿ ಯಮ್, ಮೆಗ್ನೀಸಿಯಮ್, ನೈಟ್ರೇಟ್‌ಗಳ ಹೆಚ್ಚಿನ ಅಂಶದಿಂದಾಗಿ, ಇದು ಸೆಲ್ಯುಲಾರ್ ಕಾರ್ಯ ಮತ್ತು ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ.

**ಕೂದಲಿಗೆ ಪ್ರಯೋಜನಕಾರಿ:** ಒಣಗಿದ ಮತ್ತು ನಿರ್ಜೀವ ಕೂದಲನ್ನು ರೇಷ್ಮೆಯಂತೆ ಮಾಡಲು ಬೀಟ್‌ರೂಟ್‌ಹೇರ್ ಪ್ಯಾಕ್ ಅನ್ನು ನಿಮ್ಮ ಕೂದಲ ಆರೈಕೆಯ ದಿನಚರಿಯಲ್ಲಿ ಸೇರಿಸಿಕೊಳ್ಳ ಬಹುದು. ಬೀಟ್‌ರೂಟ್, ಆಲಿವ್ ಎಣ್ಣೆಯಲ್ಲಿರುವ ಹಲವಾರು ಪೋಷಕಾಂಶಗಳು ಕೂದಲಿನ ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಪರಿಣಾಮಕಾರಿಯಾಗಬಹುದು.ಕೂದಲು ಉದುರುವಿಕೆಯನ್ನು ನಿಯಂತ್ರಿಸಲು ಈ ಹೇರ್ ಪ್ಯಾಕ್ ಅನ್ನು ಶಿಫಾರಸು ಮಾಡಲಾಗಿದೆ. ಈ ಹೇರ್ ಪ್ಯಾಕ್ ಕೂದಲಿನ ಹೊಳಪನ್ನು ಹೆಚ್ಚಿಸುತ್ತದೆ.

**ಕೂದಲು ಉದುರುವುದನ್ನು ತಡೆಯುತ್ತದೆ:** ಇಂದಿನ ದಿನಗಳಲ್ಲಿ ತೀವ್ರವಾದ ಮಾನಸಿಕ ಅಥವಾ ದೈಹಿಕ ಒತ್ತಡದ ಕಾರಣಗ ಳಿಂದಾಗಿಯೂ ಕೂಡ ಕೂದಲು ಉದುರುವಿಕೆ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳು ತ್ತಿದೆ. ಆದರೆ ಅತಿಯಾದ ಕೂದಲು ಉದುರುವಿಕೆಯನ್ನು ತಡೆಯಲು ಮತ್ತು ಕೂದಲಿನ ಆರೋಗ್ಯವನ್ನು ಸುಧಾರಿಸಲು ಈ ತರಕಾರಿಯ ರಸ ನೆರವಿಗೆ ಬರುತ್ತದೆ. ಬೀಟ್ರೂಟ್ ರಸವನ್ನು ನೆತ್ತಿಯ ಭಾಗಕ್ಕೆ ಹಚ್ಚುವುದರಿಂದ ಕೂದಲಿನ ಬೇರುಗಳು ಬಲಗೊಳ್ಳುತ್ತವೆ ಹಾಗೂ ಕೂದಲಿನ ಬೆಳವಣಿಗೆಗೆ ಉತ್ತೇಜನ ನೀಡುತ್ತವೆ.

ಇನ್ನೂ ಮುಖ್ಯವಾಗಿ ಈ ತರಕಾರಿಯಲ್ಲಿ ಕಂಡುಬರುವ ಪೊಟ್ಯಾಸಿಯಮ್, ಕಬ್ಬಿಣದ ಅಂಶವು ಕೂದಲು ಉದುರುವಿಕೆಯನ್ನು ತಡೆಗಟ್ಟಿ ಕೂದಲು ತೆಳುವಾ ಗುವುದನ್ನು ಮತ್ತು ದುರ್ಬಲಗೊಳ್ಳುವುದನ್ನು ತಡೆಯಲು ಸಹಾಯ ಮಾಡುತ್ತದೆ.

**ನೆಲ್ಲಕಾಯಿಯ ಬಗ್ಗೆ ಅಧ್ಯಯನ ವರದಿ:** ಪಬ್‌ಮೆಡ್ ಅಧ್ಯಯನಗಳು ಆಮ್ಲಾ ಅಥವಾ ನೆಲ್ಲಿಕಾಯಿ ಕೂದಲಿನ ಬೆಳವಣಿಗೆಗೆ ಮತ್ತು ಕೂದಲು ಉದುರುವಿಕೆಯನ್ನು ಎದುರಿಸಲು ಭರವಸೆಯ ಸಾಮರ್ಥ್ಯವನ್ನು ಹೊಂದಿದೆ ಎಂದು ಸೂಚಿಸುತ್ತವೆ.

ಕ್ಲಿನಿಕಲ್ ಮತ್ತು ಪ್ರಿಕ್ಲಿನಿಕಲ್ ಡೇಟಾವು ಇದು ಕೂದಲಿನ ಕಿರುಚೀಲಗಳನ್ನು ಬಲಪಡಿಸುತ್ತದೆ, ಬೆಳವಣಿಗೆಯ ಹಂತವನ್ನು ಹೆಚ್ಚಿಸುತ್ತದೆ ಎಂದು ಸೂಚಿಸುತ್ತದೆ.


**ಹೀಗೆ ಮಾಡಿ:** ಮೊದಲು ಬೀಟ್ರೂಟ್ ತೆಗೆದುಕೊಂಡು ಅದರ ರಸವನ್ನು ತಯಾರಿಸಿ. ಈಗ ಅದಕ್ಕೆ 1 ಟೀಚಮಚ ಬಾದಾಮಿ ಎಣ್ಣೆ, ಅರ್ಧ ಕಪ್ ಆಮ್ಲಾ ಜ್ಯೂಸ್ ಮತ್ತು 3 ಟೀ ಚಮಚ ವಿಟಮಿನ್ ಇ ರಸವನ್ನು ಸೇರಿಸಿ. ಈ ಪೇಸ್ಟ್ ಅನ್ನು ಚೆನ್ನಾಗಿ ಮಿಶ್ರಣ ಮಾಡಿ. ಈಗ ಅದನ್ನು ನಿಮ್ಮ ಕೂದಲಿಗೆ ಹಚ್ಚಿ. ಅದು ಒಣಗಿದ ನಂತರ, ಸೌಮ್ಯವಾದ ಶಾಂಪೂ ಬಳಸಿ ನಿಮ್ಮ ಕೂದಲನ್ನು ತೊಳೆಯಿರಿ. ಈ ಪೇಸ್ಟ್ ಅನ್ನು ವಾರಕ್ಕೆ ಎರಡು ಬಾರಿ ಹಚ್ಚಿ. ಇದು ನಿಮ್ಮ ಕೂದಲಿಗೆ ನೈಸರ್ಗಿಕ ಬಣ್ಣವನ್ನು ನೀಡುತ್ತದೆ ಮತ್ತು ನಿಮ್ಮ ಕೂದಲನ್ನು ಬೇರುಗಳಿಂದ ಬಲಪಡಿಸುತ್ತದೆ.

# ಮಲ್ಲರ ಉಕ್ಕಿನ ಸ್ನಾಯುಗಳಿಗೆ ಕೊಬ್ಬರಿ ಎಣ್ಣೆಯ ಮರ್ದನ



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಕರ್ನಾಟಕದ ಪಾರಂಪರಿಕ ಗರಡಿ ಮನೆಗಳಲ್ಲಿ ಮಲ್ಲರ ದಿನಚರಿ ಆರಂಭವಾಗುವುದೇ ಕೆಮಣ್ಣಿನ ಭಕ್ತಿ ಮತ್ತು ದೇಹದ ಅಭ್ಯಂಗದೊಂದಿಗೆ. ಒಬ್ಬ ಪೈಲ್ವಾನನ ದೈಹಿಕ ಸೌಂದರ್ಯ,ಚರ್ಮದ ಕಾಂತಿ. ಅಪ್ರತಿಮ ಶಕ್ತಿಯ ಹಿಂದೆ ಕೇವಲ ಕಠಿಣ ಕಸರತ್ತುಗಳಷ್ಟೇ ಅಲ್ಲದೆ, ತೈಲ ಮಾಲೀಶಿನ ವಿಶಿಷ್ಟ ಪ್ರಕ್ರಿಯೆಯಿದೆ. ದಕ್ಷಿಣ ಭಾರತದ ಗರಡಿಗಳಲ್ಲಿ ಶುದ್ಧ ಗಾಣದ ಕೊಬ್ಬರಿ ಎಣ್ಣೆಯನ್ನು ಮರ್ದನಕ್ಕೆ ಬಳಸುವ ಪದ್ಧತಿ ಅನಾದಿ ಕಾಲದಿಂದಲೂ ನಡೆದುಬಂದಿದೆ. ಇದು ಸ್ನಾಯುಗಳನ್ನು ಉಕ್ಕಿನಂತೆ ಬಲಪಡಿಸುವ ಮತ್ತು ಶಾರೀರಿಕ ದಣಿವನ್ನಾರಿಸುವ ಒಂದು ಅತ್ಯುನ್ನತ ವೈಜ್ಞಾನಿಕ ಚಿಕಿತ್ಸೆಯಾಗಿದೆ. ಪೈಲ್ವಾನರ ಮಾಲೀಶು ಪದ್ಧತಿಯು ಸಾಮಾನ್ಯ ಮೈದಡವಿಕೆಗಿಂತ ಭಿನ್ನವಾದ ತಾಂತ್ರಿಕತೆಯನ್ನು ಹೊಂದಿದೆ. ಇಲ್ಲಿ ಮರ್ದನವು ಕೇವಲ ಚರ್ಮಕ್ಕೆ ಸೀಮಿತವಾಗಿರದೆ, ಸ್ನಾಯುಗಳ ಆಳವನ್ನು ತಲುಪುತ್ತದೆ. ಲಘುವಾಗಿ ಬಿಸಿ ಮಾಡಿದ ಕೊಬ್ಬರಿ ಎಣ್ಣೆಯನ್ನು ಶರೀರಕ್ಕೆ ಲೇಪಿಸಿ, ನುರಿತ ಮರ್ದನಕಾರರು ಸ್ನಾಯುಗಳನ್ನು ಹೃದಯದ ದಿಕ್ಕಿಗೆ ಬಲವಾಗಿ ತಳ್ಳುತ್ತಾರೆ.



ಈ ಕ್ರಿಯೆಯು ರಕ್ತದ ಓಟವನ್ನು ಸುಗಮಗೊಳಿಸಿ, ಎಣ್ಣೆಯಲ್ಲಿರುವ ಪೌಷ್ಟಿಕಾಂಶಗಳು ಚರ್ಮದ ರಂಧ್ರಗಳ ಮೂಲಕ ಆಸ್ನಾಯುಕೋಶಗಳನ್ನು ತಲುಪುವಂತೆ ಮಾಡುತ್ತದೆ. ಇದು ತಾಲೀಮಿನ ನಂತರ ಸ್ನಾಯುಗಳಲ್ಲಿ ಉಂಟಾಗುವ ಆಂತರಿಕ ಉರಿಯೂತವನ್ನು ನಿವಾರಿಸಿ, ಮರುದಿನದ ಕಸರತ್ತಿಗೆ ಹೊಸ ಚೈತನ್ಯ ನೀಡುತ್ತದೆ. ಕೊಬ್ಬರಿ ಎಣ್ಣೆಯ ಮರ್ದನವು ದೇಹದ ಸೂಕ್ಷ್ಮ ರಕ್ತನಾಳಗಳನ್ನು ಚುರುಕುಗೊಳಿಸುತ್ತದೆ. ಇದರಿಂದ ಸ್ನಾಯುಗಳಿಗೆ ಹೆಚ್ಚಿನ ಆಮ್ಲಜನಕ ಲಭ್ಯವಾಗಿ, ಶರೀರದ ಬಾಗುವಿಕೆ ಅಥವಾ ನಮ್ಯತೆ ಹೆಚ್ಚುತ್ತದೆ. ಕುಸ್ತಿ ಅಖಾಡದಲ್ಲಿ ಎದುರಾಳಿಯ ಬಿಗಿಪಟ್ಟುಗಳಿಂದ ತಪ್ಪಿಸಿಕೊಳ್ಳಲು ಬೇಕಾದ ಜಿಗುಟುತನವು ಈ ತೈಲ ಚಿಕಿತ್ಸೆಯಿಂದ ಸಿದ್ಧಿಸುತ್ತದೆ. ಅಲ್ಲದೆ, ಅಖಾಡದ ಮಣ್ಣಿನಲ್ಲಿ ಹಗಲಿರುಳು ಶ್ರಮಿಸುವ ಮಲ್ಲರ ಚರ್ಮಕ್ಕೆ ಕೊಬ್ಬರಿ ಎಣ್ಣೆಯು ನೈಸರ್ಗಿಕ ಕ್ರಿಮಿನಾಶಕವಾಗಿ ರಕ್ಷಣೆ ನೀಡುತ್ತದೆ. ದೇಹದ ಆಂತರಿಕ ಉಷ್ಣತೆ ಹೆಚ್ಚಿದ್ದಾಗ, ಇದು ತಂಪು ನೀಡಿ ಪಿತ್ತದ ಪ್ರಕೋಪವನ್ನು ಶಾಂತಗೊಳಿಸುವ ನೈಸರ್ಗಿಕ ಶೀತಕವಾಗಿಯೂ ಕಾರ್ಯನಿರ್ವಹಿಸುತ್ತದೆ. ಈ ಚಿಕಿತ್ಸೆಯ ಪೂರ್ಣ ಲಾಭ ಪಡೆಯಲು ನಮ್ಮ ಹಿರಿಯರು ಕೆಲವು ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಿದ್ದರು. ಮಾರುಕಟ್ಟೆಯ ಸಂಸ್ಕರಿತ ಎಣ್ಣೆಗಿಂತ,ಗಾಣದಲ್ಲಿ ಆಡಿಸಿದ ಅಪ್ಪಟ ಕೊಬ್ಬರಿ ಎಣ್ಣೆಯೇ ಶ್ರೇಷ್ಠ. ತೀವ್ರ ವ್ಯಾಯಾಮದ ನಂತರ ದೇಹದ ಉಷ್ಣತೆ ಸಹಜ ಸ್ಥಿತಿಗೆ ಬಂದ ಮೇಲೆಯೇ ಮಾಲೀಶು ಮಾಡಬೇಕು. ಮಾಲೀಶಿನ ನಂತರ ಕನಿಷ್ಠ ಅರ್ಧ ಗಂಟೆ ವಿಶ್ರಾಂತಿ ಪಡೆದು, ಉಗುರು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡುವುದರಿಂದ ಎಣ್ಣೆಯ ಸಾರವು ಶರೀರಕ್ಕೆ ಸಂಪೂರ್ಣವಾಗಿ ಹೀರಲ್ಪಡುತ್ತದೆ. ಇಂದು ಜಾಗತಿಕ ಕ್ರೀಡಾ ಲೋಕವು ರಾಸಾಯನಿಕ ತೈಲಗಳ ಮೊರೆ ಹೋಗುತ್ತಿರುವಾಗ,ಗರಡಿ ಮನೆಯ ಈ ತೈಲ ಸಂಸ್ಕೃತಿಯು ಒಂದು ಶ್ರೇಷ್ಠ ಚಿಕಿತ್ಸಕ ಮಾದರಿಯಾಗಿ ನಿಲ್ಲುತ್ತದೆ. ಈ ಪಾರಂಪರಿಕ ಜ್ಞಾನವನ್ನು ಜಾಗತಿಕ ವೇದಿಕೆಯಲ್ಲಿ ಪ್ರಚುರಪಡಿಸುವುದು ನಮ್ಮೆಲ್ಲರ ಹೆಮ್ಮೆಯ ಕಾಯಕವಾಗಿದೆ.

# ಚಿಕ್ಕ ಮಕ್ಕಳಿಗೆ ಕಡಲೆಕಾಯಿಯನ್ನು ಆರಂಭದಲ್ಲೇ ನೀಡುವುದು ಉತ್ತಮವೇ?

ಪೋಷಕರು ಚಿಕ್ಕ ಮಕ್ಕಳಿಗೆ ಕಡಲೆಕಾಯಿ ಅಥವಾ ಕಡಲೆಕಾಯಿ ಆಧಾರಿತ ಉತ್ಪನ್ನಗಳನ್ನು ನೀಡುವುದರಿಂದ ದೂರವಿರುತ್ತಾರೆ, ಏಕೆಂದರೆ ಅವರಿಗೆ ಅಲರ್ಜಿ ಉಂಟಾಗಬಹುದು ಎಂಬ ಭಯ ಅವರಲ್ಲಿರುತ್ತದೆ. ಆದರೆ ಹೊಸ ಅಧ್ಯಯನವು ಈ ಮನಸ್ಥಿತಿಯ ಬಗ್ಗೆ ಹೊಸ ದೃಷ್ಟಿಕೋನವನ್ನು ನೀಡಬಹುದು. ವಾಸ್ತವವಾಗಿ, ಇತ್ತೀಚಿನ ಸಂಶೋಧನೆಯು ನಿಮ್ಮ ಮಗುವಿಗೆ ಕಡಲೆಕಾಯಿಯನ್ನು ಸುರಕ್ಷಿತ ಮತ್ತು ಸೀಮಿತ ಪ್ರಮಾಣದಲ್ಲಿ ಪರಿಚಯಿಸಿದರೆ, ಕಡಲೆಕಾಯಿ ಅಲರ್ಜಿ ಬರುವ ಅಪಾಯವನ್ನು ಗಮನಾರ್ಹವಾಗಿ ಕಡಿಮೆ ಮಾಡಬಹುದು ಎನ್ನಲಾಗುತ್ತದೆ.

**ಅಧ್ಯಯನವು ಏನು ಹೇಳುತ್ತದೆ?:** ಇತ್ತೀಚಿನ ಅಧ್ಯಯನವೊಂದರಲ್ಲಿ, ಮಗುವಿಗೆ ಬಾಲ್ಯದಲ್ಲಿಯೇ ಸಣ್ಣ ಪ್ರಮಾಣದಲ್ಲಿ ಕಡಲೆಕಾಯಿ ನೀಡಿದರೆ ಮಗುವಿನ ರೋಗನಿರೋಧಕ ವ್ಯವಸ್ಥೆಯು ಕ್ರಮೇಣ ಕಡಲೆಕಾಯಿಯನ್ನು ಸ್ವೀಕರಿಸಲು ಕಲಿಯಬಹುದು. ಕಡಲೆಕಾಯಿಯನ್ನು ಸೂಕ್ತ ಪ್ರಮಾಣದಲ್ಲಿ ಮತ್ತು ವೈದ್ಯರ ಮಾರ್ಗದರ್ಶನದಲ್ಲಿ ನೀಡಿದರೆ ಅದು ಮಗುವಿನ ದೇಹವು ಸಹಿಷ್ಣುತೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಅಧ್ಯಯನಗಳು ಸೂಚಿಸಿವೆ. ಈ ಸಹಿಷ್ಣುತೆಯು ಭವಿಷ್ಯದಲ್ಲಿ ಅಲರ್ಜಿಯನ್ನು ಬೆಳೆಸುವ ಅಪಾಯವನ್ನು ಕಡಿಮೆ ಮಾಡಬಹುದು.



**ಕಡಲೆಕಾಯಿಯಲ್ಲಿರುವ ಪೌಷ್ಟಿಕಾಂಶಗಳು:** ಕಡಲೆಕಾಯಿಗಳು ಸಸ್ಯ ಪ್ರೋಟೀನ್, ಆರೋಗ್ಯಕರ ಕೊಬ್ಬುಗಳು, ವಿಟಮಿನ್ ಇ ಮತ್ತು ಮಗುವಿನ ಬೆಳವಣಿಗೆ ಮತ್ತು ಮೆದುಳಿನ ಬೆಳವಣಿಗೆಯನ್ನು ಬೆಂಬಲಿಸುವ ಅಗತ್ಯ ಪೋಷಕಾಂಶಗಳ ಸಮೃದ್ಧ ಮೂಲವಾಗಿದೆ. ಆದಾಗ್ಯೂ, ಉಸಿರುಗಟ್ಟಿಸುವ ಅಪಾಯವಿರುವುದರಿಂದ ಶಿಶುಗಳಿಗೆ ಸಂಪೂರ್ಣ ಕಡಲೆಕಾಯಿಯನ್ನು ಎಂದಿಗೂ ನೀಡಬಾರದು.



ಮಗುವು ಪೂರಕ ಆಹಾರಕ್ಕೆ ಅಭಿವೃದ್ಧಿ ಹೊಂದಲು ಸಿದ್ಧವಾಗಿದೆ ಎಂದು ಖಚಿತಪಡಿಸಿಕೊಂಡ ನಂತರ ಪೋಷಕರು ಎದೆ ಹಾಲು, ಸೂತ್ರ ಅಥವಾ ಪ್ಯೂರೀಗಳೊಂದಿಗೆ ಬೆರೆಸಿದ ನಯವಾದ ಕಡಲೆಕಾಯಿ ಬೆಣ್ಣೆಯನ್ನು ಪರಿಚಯಿಸಬಹುದು. ತೀವ್ರವಾದ ಎಸ್ಜಿಮಾ, ಮೊಟ್ಟೆಯ ಅಲರ್ಜಿ, ಅಲರ್ಜಿಯ ಬಲವಾದ ಕುಟುಂಬದ ಇತಿಹಾಸ ಹೊಂದಿರುವ ಮಕ್ಕಳು ಪರಿಚಯಿಸುವ ಮೊದಲು ಮಕ್ಕಳ ವೈದ್ಯರನ್ನು ಸಂಪರ್ಕಿಸಬೇಕು.

**ಯಾವ ಮಕ್ಕಳಿಗೆ ಎಚ್ಚರಿಕೆ ಅಗತ್ಯ?:** ಈ ವಿಧಾನವು ಪ್ರತಿ ಮಗುವಿಗೂ ಅನ್ವಯಿಸುವುದಿಲ್ಲ. ಮಗುವಿಗೆ ಎಸ್ಜಿಮಾ, ಆಹಾರ ಅಲರ್ಜಿಯಂತಹ ಮೊದಲೇ ಇರುವ ಸ್ಥಿತಿ ಇದ್ದಾಗ, ಅಲರ್ಜಿಯ ಕುಟುಂಬದ ಇತಿಹಾಸ ಇದ್ದಾಗ ಹೆಚ್ಚುವರಿ ಎಚ್ಚರಿಕೆ ಅಗತ್ಯ. ಅಂತಹ ಮಕ್ಕಳಿಗೆ, ವೈದ್ಯರನ್ನು ಸಂಪರ್ಕಿಸದೆ ಕಡಲೆಕಾಯಿ ಆಧಾರಿತ ಉತ್ಪನ್ನಗಳನ್ನು ಪರಿಚಯಿಸುವುದರಿಂದ ಅವರ ಆರೋಗ್ಯ ಸಮಸ್ಯೆಗಳು ಉಲ್ಬಣಗೊಳ್ಳಬಹುದು. ಆದ್ದರಿಂದ, ಈ ಮಕ್ಕಳಿಗೆ ಕಡಲೆಕಾಯಿ ನೀಡುವುದನ್ನು ತಡೆಯುವುದು ಒಳ್ಳೆಯದು.

**ಈ ವಿಧಾನ ಹೇಗೆ ಕೆಲಸ ಮಾಡುತ್ತದೆ?:** ಮಗುವಿನ ದೇಹಕ್ಕೆ ಆಹಾರ ಪದಾರ್ಥವನ್ನು ಕ್ರಮೇಣ ಮತ್ತು ನಿಯಂತ್ರಿತ ರೀತಿಯಲ್ಲಿ ಪರಿಚಯಿಸಿದಾಗ, ಪ್ರತಿರಕ್ಷಣಾ ವ್ಯವಸ್ಥೆಯು ಅದನ್ನು ಬೆದರಿಕೆಯಾಗಿ ಗ್ರಹಿಸುವುದನ್ನು ನಿಲ್ಲಿಸಬಹುದು ಎಂದು ತಜ್ಞರು ನಂಬುತ್ತಾರೆ. ಈ ಪ್ರಕ್ರಿಯೆಯನ್ನು ಮೌಖಿಕ ಸಹಿಷ್ಣುತೆ ಎಂದು ಕರೆಯಲಾಗುತ್ತದೆ. ಅದಕ್ಕಾಗಿಯೇ, ಕಡಲೆಕಾಯಿಯಂತಹ ಅಲರ್ಜಿಕ್ ಆಹಾರಗಳನ್ನು ಸರಿಯಾದ ಸಮಯದಲ್ಲಿ ಮತ್ತು ಸರಿಯಾದ ಪ್ರಮಾಣದಲ್ಲಿ ಪರಿಚಯಿಸಿದಾಗ, ದೇಹವು ಅವುಗಳಿಗೆ ಒಗ್ಗಿಕೊಳ್ಳಬಹುದು.

ಕಡಲೆಕಾಯಿಯನ್ನು ಪರಿಚಯಿಸಲು ಸರಿಯಾದ ಮಾರ್ಗ ಯಾವುದು? ಚಿಕ್ಕ ಮಕ್ಕಳಿಗೆ ಸಂಪೂರ್ಣ ಕಡಲೆಕಾಯಿ ನೀಡಬಾರದು ಎಂದು ವೈದ್ಯರು ಸಲಹೆ ನೀಡುತ್ತಾರೆ. ಏಕೆಂದರೆ ಇದು ಮಗುವಿಗೆ ಉಸಿರುಗಟ್ಟಿಸುವ ಅಪಾಯವನ್ನುಂಟುಮಾಡುತ್ತದೆ. ಪರ್ಯಾಯವಾಗಿ, ನೀವು ಮಗುವಿಗೆ ವಿವಿಧ ರೀತಿಯಲ್ಲಿ ಕಡಲೆಕಾಯಿಯನ್ನು ನೀಡಬಹುದು. ಕಡಲೆಕಾಯಿ ಬೆಣ್ಣೆಯ ತೆಳುವಾದ ಆವೃತ್ತಿಯನ್ನು ತಯಾರಿಸಿ. ಕಡಲೆಕಾಯಿ ಪುಡಿಯನ್ನು ತಯಾರಿಸಿ ವಿವಿಧ ಆಹಾರ ಪದಾರ್ಥಗಳಲ್ಲಿ ಮಿಶ್ರಣ ಮಾಡಿ.

ಮಗುವಿನ ವಯಸ್ಸಿಗೆ ಅನುಗುಣವಾಗಿ, ನೀವು ಸ್ವಲ್ಪ ಪ್ರಮಾಣದಲ್ಲಿ ಮೃದುವಾದ ಆಹಾರಗಳಲ್ಲಿ ಬೆರೆಸಬಹುದು. ಸೂಕ್ತ ವಯಸ್ಸಿನಲ್ಲಿ, ಸರಿಯಾದ ಪ್ರಮಾಣದಲ್ಲಿ ಮತ್ತು ತಜ್ಞರ ಮಾರ್ಗದರ್ಶನದಲ್ಲಿ ನಿಯಂತ್ರಿತ ಸೇವನೆಯು ಮಕ್ಕಳಲ್ಲಿ ಅಲರ್ಜಿಯ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಪ್ರತಿ ಮಗುವಿನ ಪರಿಸ್ಥಿತಿ ವಿಶಿಷ್ಟವಾಗಿದೆ, ಆದ್ದರಿಂದ ಯಾವುದೇ ಹೊಸ ಆಹಾರವನ್ನು ಪರಿಚಯಿಸುವ ಮೊದಲು ಮಕ್ಕಳ ವೈದ್ಯರನ್ನು ಸಂಪರ್ಕಿಸುವುದು ಅತ್ಯಗತ್ಯ.

# ಜಾತ್ಯತೀತತೆ ಕಾಪಾಡಿಕೊಳ್ಳಲು ಮುಸ್ಲಿಂ ಲೀಗ್ ಅತ್ಯಗತ್ಯ: ಸತೀಶನ್

**ತಿರುವನಂತಪುರ:** ಯುಡಿಎಫ್ ಮೈತ್ರಿಕೂಟದ ಮಿತ್ರಪಕ್ಷವಾಗಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಒಂದು ಸಹೋದರ ಪಕ್ಷ ಇದ್ದಂತೆ. ಕೇರಳಂನ ಜಾತ್ಯತೀತ ಸ್ವರೂಪವನ್ನು ರಕ್ಷಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಕೇರಳಂ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ವಿ.ಡಿ ಸತೀಶನ್ ಹೇಳಿದ್ದಾರೆ. ಐಯುಎಂಎಲ್‌ನ ಒತ್ತಡಕ್ಕೆ ಮಣಿದು ಕಾಂಗ್ರೆಸ್ ಹೈಕಮಾಂಡ್ ವಿ.ಡಿ.ಸತೀಶನ್ ಅವರನ್ನು ಕೇರಳಂನ ಮುಂದಿನ ಸಿಎಂ ಆಗಿ ಘೋಷಿಸಿದೆ ಎಂದು ಬಿಜೆಪಿ ಸೇರಿದಂತೆ ವಿಪಕ್ಷಗಳು ಟೀಕಿಸುತ್ತಿರುವ ನಡುವೆಯೇ, ಸತೀಶನ್ ಈ ಹೇಳಿಕೆ ನೀಡಿದ್ದಾರೆ.

ಐಯುಎಂಎಲ್ ಯುಡಿಎಫ್ ಮೈತ್ರಿಕೂಟದ ಪ್ರಮುಖ ಶಕ್ತಿ ಕೇಂದ್ರಗಳಲ್ಲಿ ಒಂದಾಗಿದೆ. ನಾವು ಹಿಂದೆಂದೂ ಕಾಣದ ರೀತಿಯಲ್ಲಿ 'ಟೀಮ್ ಯುಡಿಎಫ್ ಆಗಿ ಕೆಲಸ ಮಾಡಿದ್ದೇವೆ. ಐಯುಎಂಎಲ್ ರಾಜ್ಯ ಅಧ್ಯಕ್ಷ ಸಯ್ಯದ್ ಸಾದಿಕ್ ಅಲಿ ಶಿಹಾಬ್ ತಂಗಳ್ ಅವರ ಬೆಂಬಲದೊಂದಿಗೆ ನಾವು ಸದನದ ಒಳಗೆ ಮತ್ತು ಹೊರಗೆ ಒಗ್ಗಟ್ಟಾಗಿ ಹೋರಾಟ ನಡೆಸಿದ್ದೇವೆ' ಎಂದಿದ್ದಾರೆ.

ಯುಡಿಎಫ್ ಮೈತ್ರಿಕೂಟ ಪ್ರಬಲ ಜಾತ್ಯತೀತ ನಿಲುವನ್ನು ತಳೆದಿದ್ದು, ಅದನ್ನು ರಾಜ್ಯದ ಜನರು ಅನುಮೋದಿಸಿದ್ದಾರೆ. ಆ ನಿಲುವಿನ ಹಿಂದೆ ತಂಗಳ್ ಅವರ ಶಕ್ತಿಯಿತ್ತು. ಕೋಮು ಪ್ರಚೋದನೆ ಮೂಲಕ ಜನರನ್ನು ವಿಭಜಿಸಲು ಹಲವು ಶಕ್ತಿಗಳು ಯತ್ನಿಸಿದವು. ಆದರೆ, ಐಯುಎಂಎಲ್ ಮತ್ತು ತಂಗಳ್ ತಳೆದ ನಿಲುವು ನನಗೆ ಆಶ್ಚರ್ಯ ಮೂಡಿಸಿತು' ಎಂದು ಸತೀಶನ್ ವಿವರಿಸಿದ್ದಾರೆ.

ಬಾಬರಿ ಮಸೀದಿ ಧ್ವಂಸದ ಅವಧಿಯಲ್ಲೂ ಐಯುಎಂಎಲ್ ನಾಯಕತ್ವವು ಇಂತಹುದೇ ಜಾತ್ಯತೀತ ನಿಲುವನ್ನು ತಳೆದಿತ್ತು.



ಐಯುಎಂಎಲ್ ಸದಾ ಯುಡಿಎಫ್‌ನ ಜಾತ್ಯತೀತ ನಿಲುವನ್ನು ಬೆಂಬಲಿಸುತ್ತಾ ಬಂದಿದೆ. ಆ ಪಕ್ಷದ ಯಾವುದೇ ನಾಯಕರು ಕೋಮು ಸೌಹಾರ್ದತೆಗೆ ಧಕ್ಕೆ ತರುವಂತಹ ಹೇಳಿಕೆಗಳನ್ನು ನೀಡಿಲ್ಲ ಎಂದು ಅವರು ಹೇಳಿದ್ದಾರೆ. ತನ್ನ ಪ್ರಭಾವ ಹೆಚ್ಚಿರುವ ಕ್ಷೇತ್ರಗಳಲ್ಲಿ ಹಲವು ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವನ್ನು ಖಚಿತ ಪಡಿಸಿಕೊಳ್ಳುವಲ್ಲಿ ಐಯುಎಂಎಲ್ ಪ್ರಮುಖ ಪಾತ್ರ ವಹಿಸಿದೆ. ಜತೆಗೆ, ಇತರ ಮಿತ್ರಪಕ್ಷಗಳು ಸಹ ಯುಡಿಎಫ್‌ನಾದ್ಯಂತ ಪರಸ್ಪರ ಬೆಂಬಲಿಸಿಕೊಂಡಿವೆ ಎಂದಿದ್ದಾರೆ. ಸರ್ಕಾರದಲ್ಲೂ ಐಯುಎಂಎಲ್ ಜತೆ ಇಂತಹದೇ ಸಮನ್ವಯ ಮುಂದುವರಿಯಲಿದ್ದು, ರಾಜ್ಯದ ಅಭಿವೃದ್ಧಿಗಾಗಿ ಒಟ್ಟಾಗಿ ಶ್ರಮಿಸುತ್ತೇವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಖಾತೆ ಹಂಚಿಕೆ ಕುರಿತು ಮಾತನಾಡಿದ ಸತೀಶನ್, ಪ್ರಾಥಮಿಕ ಹಂತದ ಚರ್ಚೆಗಳು ಪೂರ್ಣಗೊಂಡಿವೆ. ವಿಧಾನಸಭಾ ಚುನಾವಣೆಯ ಸೀಟು ಹಂಚಿಕೆ ವೇಳೆ ಇದ್ದಂತಹ ಸೌಹಾರ್ದಯುತ ಮನೋಭಾವ ಖಾತೆ ಹಂಚಿಕೆಯಲ್ಲೂ ಇರಲಿದೆ ಎಂದಿದ್ದಾರೆ.

## ನೆದರ್ಲೆಂಡ್ಸ್‌ಗೆ ಪ್ರಧಾನಿ ಮೋದಿ ಭೇಟಿ



**ಆಮ್ಸ್ಟರ್‌ಡ್ಯಾಮ್:** ಮಧ್ಯಪ್ರಾಚ್ಯದಲ್ಲಿನ ಬಿಕ್ಕಟ್ಟು ತೀವ್ರಗೊಳ್ಳುತ್ತಿರುವ ನಡುವೆ ಪ್ರಧಾನಿ ನರೇಂದ್ರ ಮೋದಿಯವರು ಐದು ರಾಷ್ಟ್ರಗಳ ಪ್ರವಾಸ ಕೈಗೊಂಡಿದ್ದಾರೆ. ಪ್ರವಾಸದ ಭಾಗವಾಗಿ ಅವರು ನೆದರ್ಲೆಂಡ್ಸ್ ಭೇಟಿ ನೀಡಿದ್ದಾರೆ. ಈ ವೇಳೆ ಮೋದಿಯವರು ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಉಂಟಾಗಿರುವ ಅಡೆತಡೆಗಳನ್ನು ನಿವಾರಿಸುವ ಕುರಿತು ನೆದರ್ಲೆಂಡ್‌ನ ಪ್ರಧಾನಿ ರಾಬ್ ಜೆಟ್ಟನ್ ಅವರೊಂದಿಗೆ ಚರ್ಚಿಸಿದ್ದಾರೆ. ವ್ಯಾಪಾರ, ತಂತ್ರಜ್ಞಾನ, ರಕ್ಷಣೆ , ನವೀಕರಿಸಬಹುದಾದ ಇಂಧನದ ವಿಷಯಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ಹೆಚ್ಚಿಸುವ ಕುರಿತು ಅವರು ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ.

ಮೇ 15 ರಿಂದ 17 ರವರೆಗಿನ ಮೋದಿಯವರ ಈ ಯುರೋಪ್ ರಾಷ್ಟ್ರಗಳ ಭೇಟಿ 2017ರ ನಂತರ ಎರಡನೇ ಭೇಟಿಯಾಗಿದೆ. ಈ ಭೇಟಿಯನ್ನು ಅಧಿಕಾರಿಗಳು ಭಾರತ ಹಾಗೂ ನೆದರ್ಲೆಂಡ್ಸ್ ನಡುವಿನ ದ್ವಿಪಕ್ಷೀಯ ಸಂಬಂಧದ ಮಹತ್ವದ ಘಟ್ಟ ಎಂದು ಬಣ್ಣಿಸಿದ್ದಾರೆ. ಮೋದಿ ಭೇಟಿ ಕುರಿತು ಮಾತನಾಡಿರುವ ವಿದೇಶಾಂಗ ಸಚಿವಾಲಯವು, ಈ ಭೇಟಿ ಮಹತ್ವದ ಕಾರ್ಯಸೂಚಿ ಹೊಂದಿದೆ. ಪಶ್ಚಿಮ ಏಷ್ಯಾದ ಉದ್ವಿಗ್ನತೆ ಹೆಚ್ಚುತ್ತಿರುವ ನಡುವೆ, ಉಭಯ ದೇಶಗಳ ನಡುವಿನ ಪಾಲುದಾರಿಕೆ ಹಾಗೂ ಕಾರ್ಯತಂತ್ರದ ಕುರಿತು ಮಾತುಕತೆ ನಡೆಸುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ. ಭಾರತ ಮತ್ತು ನೆದರ್ಲಾಂಡ್ಸ್ ನಡುವೆ ಇತ್ತೀಚಿನ ವರ್ಷಗಳಲ್ಲಿ ವ್ಯಾಪಾರ, ಹೂಡಿಕೆ ವಿಜ್ಞಾನ, ತಂತ್ರಜ್ಞಾನ, ನಾವೀನ್ಯತೆ, ರಕ್ಷಣೆ, ಭದ್ರತೆ, ಅರೆವಾಹಕಗಳು, ನವೀಕರಿಸಬಹುದಾದ ಇಂಧನ, ಶಿಕ್ಷಣ ಮತ್ತು ಆರೋಗ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕಾರ್ಯತಂತ್ರದ ಪಾಲುದಾರಿಕೆ ಹೆಚ್ಚು ಬೆಳೆದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

2024-25ರಲ್ಲಿ ದ್ವಿಪಕ್ಷೀಯ ವ್ಯಾಪಾರದ ಒಟ್ಟು ಮೌಲ್ಯ 27.8 ಶತಕೋಟಿ ಡಾಲರ್ ಆಗಿದ್ದು, ಯುರೋಪ್ ರಾಷ್ಟ್ರಗಳಲ್ಲಿ ನೆದರ್ಲೆಂಡ್ಸ್ ಭಾರತದ ಅತಿದೊಡ್ಡ ಪಾಲುದಾರಿಕೆ ಹೊಂದಿರುವ ದೇಶವಾಗಿದೆ. ಹೂಡಿಕೆಯಲ್ಲೂ ಕೂಡ ನೆದರ್ಲೆಂಡ್ಸ್ ಭಾರತದ ನಾಲ್ಕನೇ ಅತಿದೊಡ್ಡ ಹೂಡಿಕೆದಾರನಾಗಿದ್ದು, ಒಟ್ಟು ವಿದೇಶಿ ನೇರ ಹೂಡಿಕೆ 55.6 ಶತಕೋಟಿ ಡಾಲರ್‌ಗೆ ತಲುಪಿದೆ ಎಂದಿದ್ದಾರೆ.

### ಉಡುಗೊರೆಗಳಲ್ಲಿ ಹ್ಯಾಕಿಂಗ್ ಪ್ರಯತ್ನಗಳು, ಡೇಟಾ ಹೊರತೆಗೆಯುವಿಕೆ, ಎಲೆಕ್ಟ್ರಾನಿಕ್ ಕಣ್ಗಾವಲಿನಂತಹ ಸಮಸ್ಯೆ

# ಚೀನಾ ಕೊಟ್ಟ ಗಿಫ್ಟ್‌ನ್ನು ಕಸದ ಬುಟ್ಟಿಗೆ ಎಸೆದ ಟ್ರಂಪ್

**ಬಿಜೀಂಗ್:** ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದಲ್ಲಿ ಸುಮಾರು 16ಕ್ಕೂ ಹೆಚ್ಚು ಉದ್ಯಮಿಗಳು ಹಾಗೂ ಯುಎಸ್ ಅಧಿಕಾರಿಗಳ ನಿಯೋಗ ಚೀನಾ ಪ್ರವಾಸ ಬೆಳೆಸಿದ್ದು, ಇದು ಮುಖ್ಯವಾಗಿ ಉಭಯದೇಶಗಳ ನಡುವಿನ ಸಂಬಂಧವನ್ನು ವೃದ್ದಿಗೊಳಿಸುವ ಉದ್ದೇಶಹೊಂದಿತ್ತು. ಈ ಭೇಟಿ ವೇಳೆ, ಹಲವು ಮಾತುಕತೆಗಳು ಹಾಗೂ ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆ. ಆದರೆ, ಇವೆಲ್ಲವುಕ್ಕಿಂತ ಹೆಚ್ಚಾಗಿ ಇದೀಗ ಚೀನಾ ಪ್ರವಾಸ ಮುಗಿಸಿ ಅಮೆರಿಕಾಗೆ ಹೋಗುವ ಸಮಯದಲ್ಲಿ ಟೀಂ ಟ್ರಂಪ್ ಚೀನಾದಿಂದ ತಮಗೆ ಸಿಕ್ಕ ಎಲ್ಲಾ ಉಡುಗೊರೆಗಳನ್ನು ಏರ್ ಫೋರ್ಸ್ ವಿಮಾನ ಹತ್ತುವ ಮೊದಲೇ ಕಸದಬುಟ್ಟಿಯಲ್ಲಿ ಬೀಸಾಡಿರುವುದು ಜಗತ್ತಿನ ಹುಬ್ಬೇರಿಸುವಂತೆ ಮಾಡಿದೆ.

ಡೊನಾಲ್ಡ್ ಟ್ರಂಪ್ ಈ ಚೀನಾ ಪ್ರವಾಸದ ಮೂಲಕ ಉಭಯದೇಶಗಳ ನಡುವಿನ ಸಂಬಂಧ ವೃದ್ದಿಗೊಳಿಸುವ ಜೊತೆಗೆ ಯುಎಸ್ -ಚೀನಾ ಪ್ರತಿಸ್ಪರ್ಧಿಗಳಾಗಿರದೆ, ಪಾಲುದಾರರಾಗಬೇಕು ಎಂಬುದಾಗಿ ಹೇಳಿಕೊಂಡು ಉಭಯರ ನಡುವೆ ಬೆಟ್ಟದಷ್ಟು ನಂಬಿಕೆಯಿದೆ ಎಂದು ಬಿಂಬಿಸಿಕೊಳ್ಳಲು ಪ್ರಯತ್ನಿಸಿದರೂ ವಾಸ್ತವವಾಗಿ ಅದು ಎಳ್ಳಷ್ಟು ಸಹ ಇಲ್ಲ ಎಂಬುದು ಪ್ರಪಂಚವೇ ತಿಳಿದಿರುವ ವಿಚಾರ. ಇದು ಮತ್ತೊಮ್ಮೆ ಕ್ರಿಯಾರೂಪವಾಗಿ ಸಾಬೀತಾಗಿದೆ.

**ಚೀನಾ ಕೊಟ್ಟ ಗಿಫ್ಟ್ ವಿಮಾನ ಹತ್ತೋಕು ಮೊದಲೇ ಕಸದ ಬುಟ್ಟಿಗೆ ಹಾಕಿದ ಟೀಂ ಟ್ರಂಪ್:** ಚೀನಾ ಪ್ರವಾಸ ಮುಗಿಸಿ ಅಮೆರಿಕಾಗೆ ಹಿಂದಿರುಗುವಾಗ ಏರ್ ಫೋರ್ಸ್ ವಿಮಾನದಲ್ಲಿ ಚೀನಾದಿಂದ ಬಂದ ಯಾವುದೇ ವಸ್ತುಗಳಿಗೆ ಅವಕಾಶವಿಲ್ಲ.

- **ಚೀನಾ ಪ್ರವಾಸ ಮುಗಿಸಿ ಯುಎಸ್‌ಗೆ ಹೋಗುವ ಮೊದಲು ವಿಮಾನದ ಬಳಿಯೇ ಬೀಜಿಂಗ್ ಕೊಟ್ಟ ಎಲ್ಲಾ ಗಿಫ್ಟ್, ಬರ್ನರ್ ಫೋನ್‌ಗಳನ್ನು ಕಸದ ಬುಟ್ಟಿಗೆ ಎಸೆದುಬಿಟ್ಟ ಟ್ರಂಪ್ ನಿಯೋಗ**
- **ಏರ್ ಫೋರ್ಸ್ ಒನ್ ವಿಮಾನದಲ್ಲಿ ಚೀನಾದ ಯಾವುದೇ ವಸ್ತುಗಳನ್ನು ಅನುಮತಿಸದ ಗುಪ್ತ ಅಧಿಕಾರಿಗಳು**
- **ಕ್ಸಿ ಜಿನ್‌ಪಿಂಗ್ ಕೊಟ್ಟ ಉಡುಗೊರೆಗಳ ಕುರಿತು ಅಮೆರಿಕಾಗೆ ಭಯಕ್ಕೆ ಇರುವ ಕಾರಣಗಳೇನು?**


ಎಂಬ ಸ್ಪಷ್ಟ ಸಂದೇಶ ಟ್ರಂಪ್ ನಿಯೋಗ ಹಾಗೂ ಮಾಧ್ಯಮ ಸಿಬ್ಬಂದಿಗಳಿಗೆ ರವಾನೆಯಾಗಿದ್ದು, ವಿಮಾನದ ಕೆಳಭಾಗದಲ್ಲೇ ಇದ್ದ ಕಸದ ಬುಟ್ಟಿಯಲ್ಲಿ ಚೀನಾದ ಪ್ರೆಸ್ ಪಾಸ್‌ಗಳಿಂದ ಹಿಡಿದು ಬರ್ನರ್ ಫೋನ್ ಗಳವರೆಗೆ ಚೀನಾ ನೀಡಿದ ಎಲ್ಲಾ ಸಾಮಗ್ರಿಗಳನ್ನು ಹಾಕಲಾಗಿದೆ. ಈ ಕುರಿತು ಟ್ರಂಪ್‌ನೊಂದಿಗೆ ವಿಮಾನದಲ್ಲಿ ಮಾಧ್ಯಮ ಸಿಬ್ಬಂದಿಗಳೊಂದಿಗೆ ಭಾಗಿಯಾಗಿರುವುದಾಗಿ ಉಲ್ಲೇಖಿಸಿರುವ ನ್ಯೂಯಾರ್ಕ್ ಪೋಸ್ಟ್ ಸಂಸ್ಥೆಯ ವೈಟ್ ಹೌಸ್ ವರದಿಗಾರ್ತಿ ಎಮಿಲಿ ಗುಡಿನ್ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಎಮಿಲಿ ಗುಡಿನ್ ಪೋಸ್ಟ್ ನಲ್ಲಿ ಚೀನೀ ಅಧಿಕಾರಿಗಳು ಯುಎಸ್ ಸಿಬ್ಬಂದಿಗೆ ನೀಡಿದ ರುಜುವಾತುಗಳು, ಬರ್ನರ್ ಫೋನ್‌ಗಳು, ಪಿನ್‌ಗಳು ಸೇರಿದಂತೆ ಎಲ್ಲವನ್ನೂ ಅಮೇರಿಕನ್ ಸಿಬ್ಬಂದಿ ತೆಗೆದುಕೊಂಡಿದ್ದು, ನಾವು ಮೊದಲು ಅವುಗಳನ್ನು ಸಂಗ್ರಹಿಸಿ ಮೆಟ್ಟಿಲುಗಳ ಕೆಳಗಿನ ಕಸದ ಬುಟ್ಟಿಗೆ ಎಸೆದರು. ವಿಮಾನದಲ್ಲಿ ಚೀನಾದಿಂದ ಬರುವ ಯಾವುದನ್ನೂ ಅನುಮತಿಸಲಾಗುವುದಿಲ್ಲ. ಇದೀಗ ನಾವು ಅಮೆರಿಕಾಗೆ ಹೊರಟ್ಟಿದ್ದೇವೆ ಎಂದು ಬರೆದುಕೊಂಡಿದ್ದಾರೆ.



**ಚೀನಾ ಉಡುಗೊರೆಯನ್ನು ಯುಎಸ್ ಕಸದ ಬುಟ್ಟಿಗೆ ಹಾಕಲು ಕಾರಣವೇನು?**

**ಕೆಲವು ದೇಶಗಳಿಗೆ ಸಾಗಿಸುವ ಎಲೆಕ್ಟ್ರಾನಿಕ್ ಸಾಧನಗಳು ಈ ಕೆಳಗಿನವುಗಳಿಗೆ ಗುರಿಯಾಗಬಹುದು ಎಂದು ಅಮೆರಿಕದ ಗುಪ್ತಚರ ಸಂಸ್ಥೆಗಳು ಬಹಳ ಹಿಂದಿನಿಂದಲೂ ಎಚ್ಚರಿಸಿದೆ. ಅದರಲ್ಲೂ ಇಂತಹ ಉಡುಗೊರೆಗಳಲ್ಲಿ ಸಂಭಾವ್ಯ ಹ್ಯಾಕಿಂಗ್ ಪ್ರಯತ್ನಗಳು, ಮಾಲ್‌ವೇರ್ ಸ್ಥಾಪನೆ, ಡೇಟಾ ಹೊರತೆಗೆಯುವಿಕೆ, ಎಲೆಕ್ಟ್ರಾನಿಕ್ ಕಣ್ಗಾವಲಿನಂತಹ ಸಮಸ್ಯೆಗಳಿದ್ದು, ಈ ಸಾಧನಗಳು ಸ್ವಿಚ್ ಆಫ್ ಆಗಿದ್ದರೂ ಸಹ ಅತ್ಯಾಧುನಿಕ ಸೈಬರ್ ಕಾರ್ಯಾಚರಣೆಗಳಿಗೆ ಗುರಿಯಾಗಬಹುದು. ಹಾಗಾಗಿ ಅಧಿಕೃತ ಪ್ರಯಾಣದ ನಂತರ ತಾತ್ಕಾಲಿಕ ಸಾಧನಗಳನ್ನು ನಾಶಪಡಿಸುವುದರಿಂದ ಸಂವಹನ ತೊಂದರೆಗಳು ಅಥವಾ ದೀರ್ಘಕಾಲೀನ ಮೇಲ್ವಿಚಾರಣೆಯ ಅಪಾಯಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಭದ್ರತಾ ತಜ್ಞರು ಹೇಳುತ್ತಾರೆ.**

## ಐಸಿಸ್ ರಾಕ್ಷಸ ಅಬು ಬಿಲಾಲ್ ಹತ್ಯೆ: ನೈಜೀರಿಯಾದಲ್ಲಿ ಅಡಗಿದ್ದ ಇಲಿ



- **ಐಸಿಸ್ ಟಾಪ್ ಕಮಾಂಡರ್ ಅಬು-ಬಿಲಾಲ್-ಅಲ್-ಮಿನುಕಿ ಮಟಾಶ್.**
- **ನೈಜೀರಿಯಾದಲ್ಲಿ ಅಮೆರಿಕನ್ ಪಡೆಗಳಿಂದ ಹತ್ಯೆಗೀಡಾದ ಅಬು-ಬಿಲಾಲ್.**
- **ಅಬು-ಬಿಲಾಲ್ ಹತ್ಯೆ ಖಚಿತಪಡಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್.**

**ವಾಷಿಂಗ್ಟನ್ ಡಿಸಿ:** ಅಮೆರಿಕ ಮತ್ತು ನೈಜೀರಿಯಾ ಪಡೆಗಳು ಕುಖ್ಯಾತ ಇಸ್ಲಾಮಿಕ್ ಸ್ಟೇಟ್ ಗುಂಪಿನ ನಾಯಕ ಅಬು-ಬಿಲಾಲ್-ಅಲ್-ಮಿನುಕಿಯನ್ನು ಹತ್ಯೆ ಮಾಡಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಈ ಕುರಿತು ತಮ್ಮ ಟ್ರೂತ್ ಸೋಶಿಯಲ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ಮತ್ತೊರ್ವ ಐಸಿಸ್ ರಾಕ್ಷಸನನ್ನು ಹೊಡೆದುರುಳಿಸುವಲ್ಲಿ ಯಶಸ್ವಿಯಾಗಿದ್ದಾಗಿ ಹೇಳಿದ್ದಾರೆ.

ಆಫ್ರಿಕಾದಲ್ಲಿ ಅಬು-ಬಿಲಾಲ್ ಅಡಗಿರುವ ಖಚಿತ ಮಾಹಿತಿ ಪಡೆದ ಅಮೆರಿಕನ್ ಪಡೆಗಳು, ನೈಜೀರಿಯಾ ಸೇನೆಯ ನೆರವಿನೊಂದಿಗೆ ಆತನ ಅಡಗುತಾಣದ ಮೇಲೆ ದಾಳಿ ಮಾಡಿದವು. ಐಸಿಸ್ ಭಯೋತ್ಪಾದಕರು ಅಬು-ಬಿಲಾಲ್‌ನನ್ನು ರಕ್ಷಿಸಲು ನಡೆಸಿದ ಪ್ರಯತ್ನಗಳೆಲ್ಲವೂ ವಿಫಲವಾದವು. 2022ರಲ್ಲಿ ಐಸಿಸ್ ಮುಖ್ಯಸ್ಥ ಅಬು-ಅಲ್-ಹಸನ್ ಹತ್ಯೆ ಮಾಡಲಾಗಿತ್ತು. ರಾತ್ರಿ, ನನ್ನ ನಿರ್ದೇಶನದ ಮೇರೆಗೆ, ಧೈರ್ಯಶಾಲಿ ಅಮೆರಿಕನ್ ಪಡೆಗಳು ಮತ್ತು ನೈಜೀರಿಯಾದ ಸಶಸ್ತ್ರ ಪಡೆಗಳು, ವಿಶ್ವದ ಅತ್ಯಂತ ಸಕ್ರಿಯ ಭಯೋತ್ಪಾದಕನನ್ನು ನಿರ್ಮೂಲನೆ ಮಾಡಲು, ನಿಖರವಾಗಿ ಯೋಜಿಸಲಾದ ಮತ್ತು ಅತ್ಯಂತ ಸಂಕೀರ್ಣವಾದ ಕಾರ್ಯಾಚರಣೆಯನ್ನು ದೋಷರಹಿತವಾಗಿ ಕಾರ್ಯಗತಗೊಳಿಸಿದವು ಎಂದು ಡೊನಾಲ್ಡ್ ಟ್ರಂಪ್ ಸ್ಪಷ್ಟಪಡಿಸಿದ್ದಾರೆ.

ಜಾಗತಿಕವಾಗಿ ಐಸಿಸ್‌ನ ಎರಡನೇ ಕಮಾಂಡರ್ ಅಬು-ಬಿಲಾಲ್ ಅಲ್-ಮಿನುಕಿ ಆಫ್ರಿಕಾದಲ್ಲಿ ಅಡಗಿಕೊಳ್ಳಬಹುದೆಂದು ಭಾವಿಸಿದ್ದ. ಆದರೆ ಆತನ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದ ನಮಗೆ, ಅಂತಿಮವಾಗಿ ಆತನ ಅಡಗುತಾಣ ಗೊತ್ತಾಗಿ ಕರಾರುವಕ್ಕು ಕಾರ್ಯಾಚರಣೆ ನಡೆಸಿದೆವು ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಪಶ್ಚಿಮ ಆಫ್ರಿಕಾದ ಕೆಲವು ಭಾಗಗಳಲ್ಲಿ ಪ್ರಮುಖ ಉಪಸ್ಥಿತಿಯನ್ನು ಹೊಂದಿರುವ ಇಸ್ಲಾಮಿಕ್ ಸ್ಟೇಟ್ ಗುಂಪಿನೊಂದಿಗಿನ ಸಂಬಂಧಕ್ಕಾಗಿ, 2023ರಲ್ಲಿ ಅಲ್-ಮಿನುಕಿಯನ್ನು ಅಮೆರಿಕದ ನಿರ್ಬಂಧಗಳ ಅಡಿಯಲ್ಲಿ ಇರಿಸಲಾಗಿತ್ತು. ಇದೀಗ ಆತನ ಹತ್ಯೆಯಿಂದ ಐಸಿಸ್‌ನ ಜಾಗತಿಕ ಕಾರ್ಯಾಚರಣೆಗೆ ಭಾರೀ ಪೆಟ್ಟು ಬಿದಿದೆ. 2019ರಲ್ಲಿ ಐಸಿಸ್ ಮುಖ್ಯಸ್ಥ ಅಬು-ಅಲ್-ಬಕ್ರ್-ಬಾಗ್ದಾದಿ ಹತ್ಯೆ ನಡೆದಿತ್ತು.

## ದಳಪತಿ ವಿಜಯ್‌ಗೂ ನನಗೂ ಹೋಲಿಕೆ ಮಾಡಬೇಡಿ

**ಹೈದರಾಬಾದ್:** ನಾನು ದಳಪತಿ ವಿಜಯ್ ಮಾದರಿಯಲ್ಲೇ ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಬೇಕು ಎಂದು ಅಭಿಮಾನಿಗಳು ಇಚ್ಚಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಹೇಳಿದ್ದಾರೆ.

ಮಂಗಳಗಿರಿಯಲ್ಲಿರುವ ಜನಸೇನೆಯ ಪ್ರಧಾನ ಕಚೇರಿಯಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಪವನ್, ವಿಜಯ್ ಅವರ ಹೆಸರನ್ನು ಉಲ್ಲೇಖಿಸದೆ, ತಮಿಳುನಾಡು ಚುನಾವಣೆಗಳು ಮತ್ತು ಅವರು ಮುಖ್ಯಮಂತ್ರಿಯಾದಾಗಿನಿಂದ ಜನರು ನನ್ನ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ಹೇಳಿದರು.

ನಮ್ಮ ನೆರೆಯ ರಾಜ್ಯದಲ್ಲಿ, ಒಬ್ಬ ನಟ ಪಕ್ಷವನ್ನು ಸ್ಥಾಪಿಸಿ ಮುಖ್ಯಮಂತ್ರಿಯಾದರು. ಆಂಧ್ರಪ್ರದೇಶದಲ್ಲಿಯೂ ನಾನು ಅದೇ ರೀತಿ ಮಾಡಬೇಕಾಗಿತ್ತು ಎಂದು ಬಹಳಷ್ಟು ಜನರು ನನಗೆ ಸಂದೇಶ ಕಳುಹಿಸಿದ್ದಾರೆ ಎಂದು ಅವರು ಹೇಳಿದರು.

ಪರಿಸ್ಥಿತಿಯನ್ನು ವಿವರಿಸಲು ಅವರು ತೆಲುಗು ಭಾಷಾವೈಶಿಷ್ಟ್ಯವನ್ನು ಬಳಸಿದರು, ಉರು ಲೋ ಪೆಲ್ಲಿ ಕಿ ಇದೋ ಹಡವಿಡಿ ಅಂತರು ಕಡ (ನೆರೆಯವರ ಮದುವೆಗೆ ಅನಗತ್ಯ ಉತ್ಸಾಹದಂತೆ). ಇದು ಅವರ




ಕುಟುಂಬದ ಮದುವೆ ಅಲ್ಲ ಎಂದು ತಿಳಿಯದೆ ಚಿಕ್ಕ ಮಕ್ಕಳು ಓಡಾಡುವಂತಿದೆ.

ಆಂಧ್ರಪ್ರದೇಶದ ಪರಿಸ್ಥಿತಿ ವಿಭಿನ್ನವಾಗಿದೆ. ಅವರು ಹೇಳಿದಂತೆ, ನಾನು 2019 ರ ಚುನಾವಣೆಯಲ್ಲಿ ಸ್ಪರ್ಧಿಸಿದೆ. ಅವರು ಏನು ಮಾಡಿದರು? ಮಂತ್ರಿಗಳು ಸಹ ನನ್ನೊಂದಿಗೆ ಅಂಟಿಕೊಳ್ಳಲಿಲ್ಲ. ಆದ್ದರಿಂದ, ಹೋಲಿಕೆ ಮಾಡಬೇಡಿ ಎಂದಿದ್ದಾರೆ. ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ವಿಜಯ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ: ಜೀವಶಾಸ್ತ್ರ ಉಪನ್ಯಾಸಕಿ ಬಂಧನ

**ನವದೆಹಲಿ:** ಕಳೆದ ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ಜೀವಶಾಸ್ತ್ರ ಉಪನ್ಯಾಸಕಿಯನ್ನು ಸಿಬಿಐ ಬಂಧಿಸಿದೆ. ಬಂಧಿತೆಯನ್ನು ಮನೀಷಾ ಮಂಧಾರೆ ಎಂದು ಗುರುತಿಸಲಾಗಿದ್ದು, ಅವರು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಸಮಿತಿಯಲ್ಲಿ ತಜ್ಞರಾಗಿ ನೇಮಕಗೊಂಡಿದ್ದರು ಎಂದು ತಿಳಿದುಬಂದಿದೆ.

ಅಧಿಕಾರಿಗಳ ಪ್ರಕಾರ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ಪ್ರೊಫೆಸರ್ ಪಿ.ವಿ. ಕುಲಕರ್ಣಿ ಹಾಗೂ ಇತರ ಆರೋಪಿಗಳ ವಿಚಾರಣೆ ಆಧರಿಸಿ ಈ ಬಂಧನ ನಡೆದಿದೆ. ಸಿಬಿಐ ಮುಖ್ಯ ಕಚೇರಿಯಲ್ಲಿ ವಿಚಾರಣೆ ನಡೆಸಿದ ಬಳಿಕ ಮನೀಷಾ ಮಂಧಾರೆ ಅವರನ್ನು ಬಂಧಿಸಲಾಗಿದೆ. ಪ್ರಾಥಮಿಕ ತನಿಖೆಯ ಪ್ರಕಾರ, ಅವರಿಗೆ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಪ್ರಶ್ನೆಪತ್ರಿಕೆಗಳ ಸಂಪೂರ್ಣ ಪ್ರವೇಶಾಧಿಕಾರವಿತ್ತು. ಸಿಬಿಐ ಆರೋಪದ ಪ್ರಕಾರ, ಮನೀಷಾ ಮಂಧಾರೆ ಅವರು 2026ರ ಏಪ್ರಿಲ್ ತಿಂಗಳಲ್ಲಿ ಪುಣೆಯ ಮನೀಷಾ ವಾಘ್ಮಾರೆ ಸಹಾಯದಿಂದ ಅಭ್ಯರ್ಥಿಗಳನ್ನು ಸಂಪರ್ಕಿಸಿ, ತಮ ಪುಣೆ ನಿವಾಸದಲ್ಲಿ ವಿಶೇಷ ತರಬೇತಿ ತರಗತಿಗಳನ್ನು ನಡೆಸಿದ್ದರು. ಮನೀಷಾ ವ್ಮಾರೆ ಅವರನ್ನು ಮೇ 14ರಂದು ಸಿಬಿಐ ಈಗಾಗಲೇ ಬಂಧಿಸಿದೆ. ಆರೋಪಗಳ ಪ್ರಕಾರ, ಮಂಧಾರೆ ಆಯ್ದ ವಿದ್ಯಾರ್ಥಿಗಳಿಗೆ ಸೋರಿಕೆಯಾದ ಪ್ರಶ್ನೆಗಳು ಮತ್ತು ಉತ್ತರಗಳನ್ನು ಹೇಳಿಕೊಟ್ಟಿದ್ದು, ಅದಕ್ಕಾಗಿ ಲಕ್ಷಾಂತರ ರೂಪಾಯಿ ಶುಲ್ಕ ಪಡೆದಿದ್ದರು. ಈ ಪ್ರಶ್ನೆಗಳಲ್ಲಿ ಬಹುತೇಕವು ಮೇ 3ರಂದು ನಡೆದ ನೈಜ ಪರೀಕ್ಷೆಯ ಪ್ರಶ್ನೆಗಳೊಂದಿಗೆ




ಹೊಂದಿಕೆಯಾಗಿದ್ದವು ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಇದಕ್ಕೂ ಮೊದಲು ಸಿಬಿಐ ಲಾತೂರ್‌ನ ರಸಾಯನಶಾಸ್ತ್ರ ತಜ್ಞ ಪ್ರೊಫೆಸರ್ ಅವರನ್ನು ಬಂಧಿಸಿತ್ತು. ಅವರು ಹಲವು ವರ್ಷಗಳಿಂದ ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಸಿಬಿಐ ಪ್ರಕಾರ, ಕುಲಕರ್ಣಿ ಕೂಡ ಏಪ್ರಿಲ್ ಕೊನೆಯ ವಾರದಲ್ಲಿ ತಮ್ಮ ನಿವಾಸದಲ್ಲಿ ವಿಶೇಷ ತರಗತಿಗಳನ್ನು ನಡೆಸಿ, ವಿದ್ಯಾರ್ಥಿಗಳಿಗೆ ಪ್ರಶ್ನೆಗಳು, ಆಯ್ಕೆಗಳು ಮತ್ತು ಉತ್ತರಗಳನ್ನು ಹೇಳಿಕೊಟ್ಟಿದ್ದರು ಎನ್ನಲಾಗಿದೆ.

ಮೇ 3ರಂದು ನಡೆದಿದ್ದ ಪರೀಕ್ಷೆಯಲ್ಲಿ ಸುಮಾರು 23 ಲಕ್ಷ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರು. ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದುಪಡಿಸಲಾಗಿದ್ದು, ಪ್ರಕರಣದ ಕುರಿತು ಸಿಬಿಐ ತನಿಖೆ ಮುಂದುವರಿದಿದೆ.

# ಮೇಡ್ ಇನ್ ಇಂಡಿಯಾ ಸಿ295 ಯುದ್ಧವಿಮಾನ ಶೀಘ್ರ ಹಾರಾಟ

### 2021 ರಲ್ಲಿ ಕೇಂದ್ರ ಸರ್ಕಾರವು ಏರ್‌ಬಸ್ ಸಂಸ್ಥೆಯೊಂದಿಗೆ ಸುಮಾರು 21,935 ಕೋಟಿ ವೆಚ್ಚದ ಒಪ್ಪಂದಕ್ಕೆ ಸಹಿ ಹಾಕಿತ್ತು

**ನವದೆಹಲಿ:** ಭಾರತದ ರಕ್ಷಣಾ ಉತ್ಪಾದನಾ ವಲಯದಲ್ಲಿ ಶೀಘ್ರದಲ್ಲೇ ಒಂದು ಮಹತ್ತರ ಮೈಲಿಗಲ್ಲು ಸ್ಥಾಪನೆಯಾಗಲಿದೆ. ಗುಜರಾತ್‌ನ ವಡೋದರಾದಲ್ಲಿರುವ 'ಟಾಟಾ ಅಡ್ವಾನ್ಸ್‌ಡ್ ಸಿಸ್ಟಮ್ಸ್ ಲಿಮಿಟೆಡ್' ಘಟಕದಲ್ಲಿ ದೇಶೀಯವಾಗಿ ಜೋಡಿಸಲಾದ ಮೊದಲ 'ಮೇಡ್ ಇನ್ ಇಂಡಿಯಾ' ಸಿ295 ಮಿಲಿಟರಿ ಸಾರಿಗೆ ವಿಮಾನವು ಶೀಘ್ರದಲ್ಲೇ ರೋಲ್-ಔಟ್ (ಹೊರತರಲು) ಆಗಲು ಸಿದ್ಧವಾಗಿದೆ.

ಈ ಮೂಲಕ ದಶಕಗಳಿಂದ ರಕ್ಷಣಾ ವಿಮಾನ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಸಂಸ್ಥೆಯ ಏಕಸ್ವಾಮ್ಯಕ್ಕೆ ಬ್ರೇಕ್ ಬಿದ್ದಂತಾಗಿದ್ದು, ಖಾಸಗಿ ವಲಯದ ಬೃಹತ್ ಹೆಜ್ಜೆಗೆ ನಾಂದಿ ಹಾಡಿದೆ.

ಇತ್ತೀಚೆಗೆ ಈ ವಿಮಾನವನ್ನು ಹ್ಯಾಂಗರ್‌ನಿಂದ ಹೊರಗೆ ತರುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ನಿಗದಿತ ಸಮಯಕ್ಕಿಂತ ಮುಂಚಿತವಾಗಿಯೇ ಯೋಜನೆ ಪ್ರಗತಿ ಸಾಧಿಸಿರುವುದನ್ನು ಸೂಚಿಸುತ್ತಿದೆ. ಶುಕ್ರವಾರವಷ್ಟೇ ಏರ್ ಮಾರ್ಷಲ್ ಎ.ಕೆ. ಭಾರತಿ ಅವರು ವಡೋದರಾ ಘಟಕಕ್ಕೆ ಭೇಟಿ ನೀಡಿ, ವಿಮಾನದ ಮೊದಲ ಹಾರಾಟದ ಸಿದ್ಧತೆಗಳನ್ನು ಪರಿಶೀಲಿಸಿದ್ದಾರೆ.

**ಏನಿದು ಯೋಜನೆ?:** ಪ್ರಸ್ತುತ ವಾಯುಪಡೆಯಲ್ಲಿರುವ ಹಳೆಯದಾದ ಅವೇರೋ-748' ವಿಮಾನಗಳ ಜಾಗವನ್ನು ಈ ಆಧುನಿಕ ಟ್ವಿನ್-ಟರ್ಬೋಪ್ರೊಪ್ ತಂತ್ರಜ್ಞಾನದ ಸಿ295



ವಿಮಾನಗಳು ತುಂಬಲಿವೆ. ಇದು ವಾಯುಪಡೆಯ ಸಾಮರ್ಥ್ಯವನ್ನು ದುಪ್ಪಟ್ಟುಗೊಳಿಸಲಿದೆ, ರನ್‌ವೇ ಮಿತಿ ಇಲ್ಲ ಕೇವಲ 320 ರಿಂದ 670 ಮೀಟರ್‌ನಷ್ಟು ಚಿಕ್ಕದಾದ ಮತ್ತು ಕಚ್ಚಾ ರನ್‌ವೇಗಳಲ್ಲೂ ಇದು ಸುಲಭವಾಗಿ ಟೇಕ್-ಆಫ್ ಮತ್ತು ಲ್ಯಾಂಡಿಂಗ್ ಮಾಡಬಲ್ಲದು. ಭಾರ ಹೊರುವ ಸಾಮರ್ಥ್ಯ ಇದು 9.5 ಟನ್ ಸರಕು, 70 ಸೈನಿಕರು ಅಥವಾ 48 ಪ್ಯಾರಾಟ್ರೂಪರ್‌ಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಹಿಂಭಾಗದ ರಾಂಪ್ ಸೌಲಭ್ಯ, ಹಳೆಯ ಆವ್ರೊ ವಿಮಾನಗಳಂತೆ ಬದಿಯ ಬಾಗಿಲುಗಳ ಬದಲಿಗೆ, ಇದರ ಹಿಂಭಾಗದಲ್ಲಿ ದೊಡ್ಡ ರಾಂಪ್ ಇದ್ದು, ಸಣ್ಣ ಫಿರಂಗಿಗಳು ಮತ್ತು ಲಘು ವಾಹನಗಳನ್ನು ಸುಲಭವಾಗಿ ಲೋಡ್-ಅನ್‌ಲೋಡ್ ಮಾಡಬಹುದು.

ಜಮ್ಮು-ಕಾಶ್ಮೀರ, ಲಡಾಖ್‌ನ ದೌಲತ್ ಬೇಗ್ ಓಲ್ಡಿ (16,700 ಅಡಿ ಎತ್ತರ) ಹಾಗೂ ಈಶಾನ್ಯ ಭಾರತದ ಅತ್ಯಂತ ಕಠಿಣ ಗಡಿ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಲು ಇದು ಅತ್ಯಂತ ಸೂಕ್ತವಾಗಿದೆ. ಅಮೆರಿಕದ ವಾಯುಪಡೆಯು ಇರಾನ್‌ನಿಂದ ತನ್ನ ಪೈಲಟ್‌ಗಳನ್ನು ರಕ್ಷಿಸುವಂತಹ ಅತ್ಯಂತ ಕಠಿಣ ಕಾರ್ಯಾಚರಣೆಗಳಲ್ಲಿ ಇದೇ ಮಾದರಿಯ ವಿಮಾನವನ್ನು ಬಳಸಿತ್ತು. ಜಗತ್ತಿನಾದ್ಯಂತ 36 ಕ್ಕೂ ಹೆಚ್ಚು ದೇಶಗಳು ಇದನ್ನು ಬಳಸುತ್ತಿದ್ದು, ಇದು ನಂಬಿಕಸ್ಥ ಯುದ್ಧವಿಮಾನವಾಗಿದೆ. ಭಾರತದಲ್ಲಿರುವ ಬೃಹತ್ 'ಅ-17 ಗ್ಲೋಬ್ ಮಾಸ್ಟರ್' ಆಯಕಟ್ಟಿನ ಮತ್ತು ದೊಡ್ಡ ಸರಕು ಸಾಗಣೆಗೆ ಬಳಕೆಯಾದರೆ, ಈ ಸಿ295 ವಿಮಾನವು ಕಿರಿದಾದ ಮತ್ತು ಕಠಿಣ ಗುಡ್ಡಗಾಡು ಪ್ರದೇಶಗಳಿಗೆ ಕ್ಷಿಪ್ರವಾಗಿ ಸೈನಿಕರನ್ನು ಹಾಗೂ ಸಾಮಗ್ರಿಗಳನ್ನು ತಲುಪಿಸಲು ಪೂರಕವಾಗಿ ಕೆಲಸ ಮಾಡಲಿದೆ.

**ನಂಬಿಕಸ್ಥ ಯುದ್ಧ ವಿಮಾನ**

ಈ ಯೋಜನೆಯು ನಮ್ಮ ರಕ್ಷಣಾ ಕೈಗಾರಿಕಾ ಸಹಭಾಗಿತ್ವದ ಆಳ ಮತ್ತು ಸ್ಥಿತಿಸ್ಥಾಪಕ ಉತ್ಪಾದನಾ ಸಾಮರ್ಥ್ಯವನ್ನು ನಿರ್ಮಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ವಿದೇಶಾಂಗ ಸಚಿವಎಸ್. ಜೈಶಂಕರ್ ತಿಳಿಸಿದ್ದಾರೆ.

**ಅಂತಿಮ ಜೋಡಣೆ ಭಾರತದಲ್ಲೇ ನಡೆಯುತ್ತಿರುವುದು ವಿಶೇಷ**

**2021 ರಲ್ಲಿ ಕೇಂದ್ರ ಸರ್ಕಾರವು ಏರ್‌ಬಸ್ ಸಂಸ್ಥೆಯೊಂದಿಗೆ ಸುಮಾರು 21,935 ಕೋಟಿ ವೆಚ್ಚದ ಒಪ್ಪಂದಕ್ಕೆ ಸಹಿ ಹಾಕಿತ್ತು. ಇದರ ಅನ್ವಯ ಒಟ್ಟು 56 ವಿಮಾನಗಳನ್ನು ಭಾರತೀಯ ವಾಯುಪಡೆಗೆ ಸೇರ್ಪಡೆಗೊಳಿಸಲಾಗುವುದು. ಮೊದಲ 16 ವಿಮಾನಗಳು ಸ್ಪೇನ್‌ನಿಂದ ನೇರವಾಗಿ ಹಾರಾಟದ ಸ್ಥಿತಿಯಲ್ಲಿ ಭಾರತಕ್ಕೆ ಬಂದಿಳಿದಿದ್ದು, ಉಳಿದ 40 ವಿಮಾನಗಳನ್ನು ಟಾಟಾ ಸಂಸ್ಥೆಯು ಭಾರತದಲ್ಲೇ ಸಂಪೂರ್ಣವಾಗಿ ತಯಾರಿಸುತ್ತಿದೆ. ಈ ವಿಮಾನದ ಶೇ. 85 ಕ್ಕಿಂತ ಹೆಚ್ಚು ಭಾಗ ಹಾಗೂ ಅಂತಿಮ ಜೋಡಣೆ ಭಾರತದಲ್ಲೇ ನಡೆಯುತ್ತಿರುವುದು ವಿಶೇಷ.**

## ಮಿನಿ ನ್ಯೂಸ್

### ಎನ್‌ಟಿಎ ವಿಸರ್ಜನೆ ಕೋರಿ ಸುಪ್ರೀಂಗೆ ಅರ್ಜಿ

**ನವದೆಹಲಿ:** ದೇಶದಲ್ಲಿ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ ತೀವ್ರಗೊಂಡಿರುವ ಸಂದರ್ಭದಲ್ಲೇ ಯುನೈಟೆಡ್ ಡಾಕ್ಟರ್ಸ್ ಫ್ರಂಟ್ ಸುಪ್ರೀಂ ಕೋರ್ಟ್‌ನಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ವಿಸರ್ಜನೆ ಕೋರಿ ಅರ್ಜಿ ಸಲ್ಲಿಸಿದೆ. 1860 ರ ಸೊಸೈಟೀಸ್ ನೋಂದಣಿ ಕಾಯ್ದೆಯಡಿಯಲ್ಲಿ ಸ್ಥಾಪಿಸಲಾದ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು ವಿಸರ್ಜಿಸಬೇಕೆಂದು ಮತ್ತು ಸಂಸತ್ತಿನ ಕಾಯ್ದೆಯ ಮೂಲಕ ಹೊಸ ಶಾಸನಬದ್ಧ ಚೌಕಟ್ಟನ್ನು ರಚಿಸಬೇಕೆಂದು ಅರ್ಜಿಯಲ್ಲಿ ಒತ್ತಾಯಿಸಲಾಗಿದೆ.

ಸ್ಪಷ್ಟ ಕಾನೂನು ಅಧಿಕಾರ, ಪಾರದರ್ಶಕತೆಯ ಮಾನದಂಡಗಳು ಮತ್ತು ಸಂಸತ್ತಿಗೆ ಹೊಣೆಗಾರಿಕೆಯನ್ನು ಹೊಂದಿರುವ ಶಾಸನಬದ್ಧ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು ಸ್ಥಾಪಿಸಲು ಸಂಸತ್ತಿನಲ್ಲಿ ಶಾಸನವನ್ನು ಜಾರಿಗೆ ತರಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಅರ್ಜಿಯು ಕೋರಿದೆ. 2026 ರ ನೀಟ್-ಯುಜಿ ಪರೀಕ್ಷೆಯನ್ನು ನಡೆಸುವಲ್ಲಿ ವ್ಯವಸ್ಥಿತ ಮತ್ತು ದುರಂತ ವೈಫಲ್ಯವನ್ನು ಆರೋಪಿಸಿ ಮತ್ತು ಪರೀಕ್ಷಾ ವ್ಯವಸ್ಥೆಯಲ್ಲಿ ರಚನಾತ್ಮಕ ಸುಧಾರಣೆಗಳನ್ನು ಕೋರಿ ಸಂವಿಧಾನದ 32 ನೇ ವಿಧಿಯ ಅಡಿಯಲ್ಲಿ ನೋಂದಾಯಿತ ಸಂಘಟನೆಯಾದ ಯುನೈಟೆಡ್ ಡಾಕ್ಟರ್ಸ್ ಫ್ರಂಟ್ (ಯುಡಿಎಫ್) ಅರ್ಜಿಯನ್ನು ಸಲ್ಲಿಸಿದೆ.

### ಹಾವು ಕಚ್ಚಿ ಗೋವಾ ಉಪಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸಾವು

**ಕಾರವಾರ:** ಇಲ್ಲಿನ ಅನಮೋಡ್ ಘಟ್ಟ ಭಾಗದ ಕಾಡಿನ ಹಾದಿಯಲ್ಲಿ ಕಾರು ನಿಲ್ಲಿಸಿ ಮೂತ್ರ ವಿಸರ್ಜನೆಗಾಗಿ ತೆರಳಿದಾಗ ನಾಗರಹಾವು ಕಡಿದು ಗೋವಾ ಮೂಲದ ವ್ಯಕ್ತಿ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ. ಗೋವಾ ಉಪಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕೇತನ್ ಭಾಟಿಕರ್ ಮೃತಪಟ್ಟ ವ್ಯಕ್ತಿ ಎಂದು ಗುರುತಿಸಲಾಗಿದೆ. ಇವರು ಗೋವಾದ ಪೊಂಡಾದಿಂದ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ರಾಮನಗರ ಬಳಿಯ ಅನಮೋಡ್ ಬಳಿ ಪಕ್ಷದ ಕಾರ್ಯ ನಿಮಿತ್ತ ಸ್ನೇಹಿತನೊಂದಿಗೆ ಬಂದಿದ್ದರು. ಮೂತ್ರ ವಿಸರ್ಜನೆಗಾಗಿ ಅನಮೋಡ್ ಘಟ್ಟ ಭಾಗದ ಕಾಡಿನಲ್ಲಿ ಕಾರು ನಿಲ್ಲಿಸಿ ತೆರಳಿದ್ದರು. ಮೂತ್ರ ವಿಸರ್ಜಿಸುವ ವೇಳೆ ನಾಗರಹಾವು ಕಡಿದಿದೆ ಎಂದು ತಿಳಿದುಬಂದಿದೆ. ತಕ್ಷಣ ಗೋವಾದ ಜಿಎಮ್‌ಸಿ ಮೆಡಿಕಲ್ ಕಾಲೇಜಿನ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದಿದ್ದಾರೆ. ಘಟನೆ ಸಂಬಂಧ ಕೋಲಮ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋವಾ ರಾಜ್ಯದ ಪೊಂಡಾ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಗೋವಾದ ಕೃಷಿ ಸಚಿವ ರವಿ ನಾಯ್ಕ ಅಕಾಲಿಕ ನಿಧನದಿಂದ ತೆರವಾಗಿದ್ದ ಪೊಂಡಾ ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆಯಲ್ಲಿ ಕಣಕ್ಕಿಳಿದಿದ್ದರು ಎಂದು ಗೊತ್ತಾಗಿದೆ.

### ಪಶ್ಚಿಮ ಏಷ್ಯಾ ಬಿಕ್ಕಟ್ಟು ಪರಿಹಾರಕ್ಕೆ ಭಾರತವೇ ಸೂಕ್ತ: ರಷ್ಯಾ ವಿದೇಶಾಂಗ ಸಚಿವ

**ಮಾಸ್ಕೋ:** ಇರಾನ್ ಮತ್ತು ಅಮೆರಿಕ ನಡುವಿನ ಸಂಘರ್ಷದಲ್ಲಿ ಭಾರತ ಸಮರ್ಥ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬಹುದು. ಭಾರತಕ್ಕೆ ಅಂತಹ ವಿಶಾಲ ರಾಜತಾಂತ್ರಿಕ ಸಾಮರ್ಥ್ಯ ಇದೆ ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ದೆಹಲಿಯಲ್ಲಿ ಹೇಳಿದ್ದಾರೆ. ಈ ಮಧ್ಯೆ, ಇರಾನ್ ವಿದೇಶಾಂಗ ಸಚಿವ ಅರಾಘ್ಚಿ ಕೂಡ ಹೊರ್ಮುಜ್ ಬಿಕ್ಕಟ್ಟು ಪರಿಹಾರಕ್ಕೆ ಭಾರತ ಪರಿಹಾರ ಒದಗಿಸಬಹುದು ಅಂತ ವಿದೇಶಾಂಗ ಸಚಿವ ಜೈಶಂಕರ್ ಜೊತೆಗಿನ ಮಾತುಕತೆ ವೇಳೆ ಹೇಳಿದ್ದಾರೆ. ತುರ್ತು ಸಮಸ್ಯೆಗಳನ್ನು ಪರಿಹರಿಸಲು ಅಮೆರಿಕ ಮತ್ತು ಇರಾನ್ ನಡುವೆ ಸಂವಾದಗಳನ್ನು ಸ್ಥಾಪಿಸಲು ಪಾಕಿಸ್ತಾನ ಸಹಾಯ ಮಾಡುತ್ತಿದೆ. ಇರಾನ್ ಮತ್ತು ಅದರ ಅರಬ್ ಸ್ನೇಹಿತರ ನಡುವೆ ದೀರ್ಘಾವಧಿಯ ಮಧ್ಯವರ್ತಿಯನ್ನು ಅವರು ಹುಡುಕಿದರೆ, ಭಾರತವು ತನ್ನ ಅಪಾರ ರಾಜತಾಂತ್ರಿಕ ಅನುಭವವನ್ನು ಪರಿಗಣಿಸಿ ಈ ಪಾತ್ರವನ್ನು ವಹಿಸಬಹುದು ಲಾವ್ರೋವ್ ತಿಳಿಸಿದ್ದಾರೆ.

### ಬಂಗಾಳ ಪಡೆಯಬಹುದಾದ ಅತ್ಯುತ್ತಮ ಸಿಎಂ ಸುವೇಂದು ಅಧಿಕಾರಿ: ಮಿಥುನ್ ಚಕ್ರವರ್ತಿ

**ಕೋಲ್ಕತ್ತ:** ಪಶ್ಚಿಮ ಬಂಗಾಳ ಪಡೆಯಬಹುದಾದ ಅತ್ಯುತ್ತಮ ಮುಖ್ಯಮಂತ್ರಿ ಸುವೇಂದು ಅಧಿಕಾರಿ. ಮುಂಬರುವ ದಿನಗಳಲ್ಲಿ ಅವರು ರಾಜ್ಯದಲ್ಲಿ ನಿಜವಾದ ಬದಲಾವಣೆಗಳನ್ನು ಮಾಡುತ್ತಾರೆ ಎಂಬ ವಿಶ್ವಾಸ ನನಗಿದೆ' ಎಂದು ಹಿರಿಯ ಬಿಜೆಪಿ ನಾಯಕ ಮಿಥುನ್ ಚಕ್ರವರ್ತಿ ಹೇಳಿದರು. ಸುವೇಂದು ಅಧಿಕಾರಿ ಅವರು ಮಿಥುನ್ ಚಕ್ರವರ್ತಿ ಅವರ ನಿವಾಸಕ್ಕೆ ಭೇಟಿ ನೀಡಿ ಒಂದು ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಸಿದರು. ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಚಕ್ರವರ್ತಿ, ಸುವೇಂದು ಅಧಿಕಾರಿ ಅವರಿಗಿಂತ ಉತ್ತಮ ಮುಖ್ಯಮಂತ್ರಿ ಇರಲು ಸಾಧ್ಯವಿಲ್ಲ ಎಂದು ನಾನು ಜನರಿಗೆ ಭರವಸೆ ನೀಡಬಲ್ಲೆ. ಅವರೇ ಅತ್ಯುತ್ತಮ. ಪ್ರಮಾಣವಚನ ಸ್ವೀಕರಿಸಿದ ದಿನದಿಂದಲೇ ಕೆಲಸ ಮಾಡಲು ಪ್ರಾರಂಭಿಸಿದ್ದಾರೆ ಎಂದು ತಿಳಿಸಿದರು. ಚಕ್ರವರ್ತಿ ಅವರು ಕಳೆದ ಐದಾರು ವರ್ಷಗಳಿಂದ ಪಕ್ಷಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ ಮತ್ತು ರಾಜ್ಯದಲ್ಲಿ ರಾಜಕೀಯ ಬದಲಾವಣೆಯನ್ನು ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಸುವೇಂದು ಅಧಿಕಾರಿ ಹೇಳಿದರು. ಚಕ್ರವರ್ತಿ ಅವರು ನನಗಿಂತ ಹಿರಿಯರು. ನಾನು ಅವರ ಆಶೀರ್ವಾದ ಪಡೆಯಲು ಬಂದಿದ್ದೆ. ಮಾಡಬೇಕಾದ ಅಭಿವೃದ್ಧಿ ಕೆಲಸಗಳ ಬಗ್ಗೆ ಚರ್ಚಿಸಿದ್ದೇವೆ. ಆದರೆ, ನಾವು ಚರ್ಚಿಸಿದ ಕಾರ್ಯಸೂಚಿ ವಿವರಗಳನ್ನು ಹಂಚಿಕೊಳ್ಳಲು ಸಾಧ್ಯವಿಲ್ಲ ಎಂದರು.

### 20 ಅಡಿ ಆಳದ ಕೊಳವೆಬಾವಿಗೆ ಬಿದ್ದಿದ್ದ 4 ವರ್ಷದ ಬಾಲಕನ ರಕ್ಷಣೆ

**ಪಂಜಾಬ್:** ಪಂಜಾಬ್‌ನ ಚಕ್ ಸಮಾನಾ ಗ್ರಾಮದಲ್ಲಿ 20 ಅಡಿ ಆಳದ ಕೊಳವೆಬಾವಿಗೆ ಬಿದ್ದ 4 ವರ್ಷದ ಬಾಲಕನನ್ನು 9 ಗಂಟೆಗಳ ಕಾರ್ಯಾಚರಣೆ ಬಳಿಕ ರಕ್ಷಿಸಲಾಗಿದೆ. ರಾತ್ರಿ ಈ ಘಟನೆ ಸಂಭವಿಸಿದ್ದು, ಗುರ್ಕರನ್ ಸಿಂಗ್ ಎಂಬ ಬಾಲಕ ತನ್ನ ಮನೆಯ ಸಮೀಪ ಆಟವಾಡುತ್ತಿದ್ದ ವೇಳೆ ಹೊಸದಾಗಿ ಕೊರೆದಿದ್ದ ಕೊಳವೆಬಾವಿಗೆ ಬಿದ್ದಿದ್ದ. ಬಾಲಕ ಸುಮಾರು 20ರಿಂದ 30 ಅಡಿ ಆಳದಲ್ಲಿ ಸಿಲುಕಿಕೊಂಡಿದ್ದ. ಮಾಹಿತಿ ತಿಳಿಯುತ್ತಿದ್ದಂತೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ನಿರ್ವಹಣಾ ಪಡೆ , ಪಂಜಾಬ್ ಪೊಲೀಸ್, ಅಗ್ನಿಶಾಮಕ ದಳ, ಜಿಲ್ಲಾಡಳಿತ ಹಾಗೂ ಸ್ಥಳೀಯ ಸ್ವಯಂ ಸೇವಕರು ಸ್ಥಳಕ್ಕೆ ದೌಡಾಯಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು. ಮಣ್ಣು ಸಡಿಲವಾಗಿ ನಿರಂತರ ಕುಸಿಯುತ್ತಿದ್ದ ಕಾರಣ ಕಾರ್ಯಾಚರಣೆ ಬಹಳ ಕಷ್ಟವಾಗಿತ್ತು. ಕೊನೆಗೂ 9 ಗಂಟೆಗಳ ಬಳಿಕ ಬಾಲಕನನ್ನು ಸುರಕ್ಷಿತವಾಗಿ ಹೊರತೆಗೆಯಲಾಗಿದೆ. ಬಾಲಕ ಆರೋಗ್ಯವಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.






# ಪಾಕಿಸ್ತಾನದಲ್ಲಿ 'ಧುರಂಧರ್ 2' ಅಬ್ಬರ

## ಮುಗಿಬಿದ್ದು ನೋಡಿದ ಜನ, ಸರ್ವರ್ ಕ್ರ್ಯಾಶ್

'ಧುರಂಧರ್ 2' ಸಿನಿಮಾ ಭಾರತ ಮಾತ್ರವಲ್ಲದೆ ವಿಶ್ವ ಬಾಕ್ಸ್ ಆಫೀಸ್‌ನಲ್ಲಿ ಅಬ್ಬರಿಸಿದೆ. 1800 ಕೋಟಿಗೂ ಹೆಚ್ಚು ಮೊತ್ತ ಗಳಿಕೆ ಮಾಡಿದೆ. ಆದರೆ ಈ ಸಿನಿಮಾ ಸೌದಿ ರಾಷ್ಟ್ರಗಳು, ಪಾಕಿಸ್ತಾನ ಇನ್ನೂ ಕೆಲವೆಡೆ ನಿಷೇಧಕ್ಕೆ ಒಳಗಾಗಿತ್ತು. ಅದರಲ್ಲೂ ಸಿನಿಮಾ ಕತೆಯೇ ಪಾಕಿಸ್ತಾನದ ಭಯೋತ್ಪಾದನೆಯ ವಿರುದ್ಧ ಇರುವಂಥಹದ್ದು. ಆದರೂ ಸಹ ಇದೀಗ ಪಾಕಿಸ್ತಾನದ ಜನ ಮುಗಿಬಿದ್ದು 'ಧುರಂಧರ್ 2' ಸಿನಿಮಾ ನೋಡಿದ್ದಾರೆ. ಈಗ ಮಾತ್ರವಲ್ಲ ಈ ಹಿಂದೆ 'ಧುರಂಧರ್' ಮೊದಲ ಭಾಗ ಬಿಡುಗಡೆ ಆದಾಗಲೂ ಸಹ ಪಾಕ್‌ನ ಜನ ಹುಚ್ಚೆದ್ದು ಆ ಸಿನಿಮಾ ವೀಕ್ಷಿಸಿದ್ದರು. ಈಗ ಮತ್ತೆ ಅದೇ ಕ್ರೇಜ್ ಪುನರಾವರ್ತನೆಗೊಂಡಿದೆ.

'ಧುರಂಧರ್ 2' ಸಿನಿಮಾ ಮೇ 14 ರಂದು ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆಯಾಗಿದ್ದು, ಪಾಕಿಸ್ತಾನದಲ್ಲಿ ಸಹ ನೆಟ್‌ಫ್ಲಿಕ್ಸ್‌ನಲ್ಲಿ ಈ ಸಿನಿಮಾ ವೀಕ್ಷಿಸಬಹುದಾಗಿದೆ. ಸಿನಿಮಾದ ಬಿಡುಗಡೆಗಾಗಿ ನಿರೀಕ್ಷೆಯಿಂದ ಕಾಯುತ್ತಿದ್ದ



ಪಾಕಿಸ್ತಾನದ ಸಿನಿಮಾ ಪ್ರೇಮಿಗಳು ಮೇ 13 ರ ಮಧ್ಯರಾತ್ರಿಯವರೆಗೆ ಎದ್ದಿದ್ದು, ಸಿನಿಮಾ ಸ್ಟ್ರೀಮಿಂಗ್ ಆರಂಭಿಸುತ್ತಿದ್ದಂತೆ ನೋಡಿದ್ದಾರೆ.

ಕೆಲವೇ ಗಂಟೆಗಳಲ್ಲಿ 'ಧುರಂಧರ್ 2' ಸಿನಿಮಾ ಪಾಕಿಸ್ತಾನದ ನೆಟ್‌ಫ್ಲಿಕ್ಸ್‌ನಲ್ಲಿ ನಂಬರ್ 1 ಟ್ರೆಂಡಿಂಗ್ ಆಗಿದೆ. ಅಷ್ಟೇ ಅಲ್ಲದೆ, ಮಾವಿಯಾ ಉಮರ್ ಫಾರೂಕಿ ಎಂಬ ಹೆಸರಿನ ಪಾಕಿಸ್ತಾನಿ ಕಂಟೆಂಟ್ ಕ್ರಿಯೇಟರ್ ಹೇಳಿರುವ ಪ್ರಕಾರ, 'ಧುರಂಧರ್ 2' ಕ್ರೇಜ್ ಎಷ್ಟಿತ್ತೆಂದರೆ, ಒಟ್ಟಿಗೆ ಜನ 'ಧುರಂಧರ್ 2' ನೋಡಿದ್ದರಿಂದ ಪಾಕಿಸ್ತಾನದಲ್ಲಿ ನೆಟ್‌ಫ್ಲಿಕ್ಸ್ ಸರ್ವರ್‌ಗಳು ಸ್ವಲ್ಪ ಸಮಯದವರೆಗೆ ಕ್ರ್ಯಾಶ್ ಆಗಿದ್ದವಂತೆ!

ಕಂಟೆಂಟ್ ಕ್ರಿಯೇಟರ್ ಹೇಳಿರುವಂತೆ 'ಪಾಕಿಸ್ತಾನದಲ್ಲಿ 'ಧುರಂಧರ್ 2' ಬಿಡುಗಡೆಯಾದ್ದರಿಂದ ಸರ್ವರ್ ಕ್ರ್ಯಾಶ್ ಆಗಿದೆ. 'ಧುರಂಧರ್ 2' ಯಾವಾಗ ಅಪ್‌ಲೋಡ್ ಆಗುತ್ತದೆ ಎಂದು ಜನ ಮೊಬೈಲ್ ಹಿಡಿದು ಕಾಯುತ್ತಿದ್ದರು. ರಾತ್ರಿ 12ಕ್ಕೆ ಸಿನಿಮಾ ಅಪ್‌ಲೋಡ್ ಆಗುತ್ತಿದ್ದಂತೆ ಒಟ್ಟಿಗೆ ಕ್ಲಿಕ್ ಮಾಡಿ ಸಿನಿಮಾ ನೋಡಲು ಆರಂಭಿಸಿದರು. ಇದರಿಂದ ಪಾಕ್‌ನಲ್ಲಿ ನೆಟ್‌ಫ್ಲಿಕ್ಸ್ ಸರ್ವರ್ ಕೆಲ ಹೊತ್ತು ಕ್ರ್ಯಾಶ್ ಆಯ್ತು' ಎಂದಿದ್ದಾರೆ. 2025ರಲ್ಲಿ 'ಧುರಂಧರ್' ಸಿನಿಮಾ ಬಿಡುಗಡೆ ಆದಾಗ ಆ ಸಿನಿಮಾ ಸಹ ಪಾಕ್‌ನಲ್ಲಿ ಕ್ರೇಜ್ ಹುಟ್ಟಿಸಿತ್ತು. ಸಿನಿಮಾದ ಪೈರಸಿ ಸಿಡಿಗಳು ಬಿಸಿ ಬಿರಿಯಾನಿಯಂತೆ ಬಿಕರಿ ಆಗಿದ್ದವು. ನೆಟ್‌ಫ್ಲಿಕ್ಸ್‌ನಲ್ಲಿ ಸಿನಿಮಾ ಬಿಡುಗಡೆ ಆದಾಗಲೂ ಸಹ ಜನ ಮುಗಿಬಿದ್ದು ಸಿನಿಮಾ ನೋಡಿದ್ದರು. ಪಾಕ್ ಸ ಸಂಸತ್‌ನಲ್ಲಿ ಸಹ ಸಿನಿಮಾದ ಬಗ್ಗೆ ಚರ್ಚೆ ಆಗಿತ್ತು. ಈಗ ಮತ್ತೆ 'ಧುರಂಧರ್ 2' ಮೂಲಕ ಅದೇ ಕ್ರೇಜ್ ಪುನರಾವರ್ತನೆ ಆಗಿದೆ. ಪ್ರಸ್ತುತ 'ಧುರಂಧರ್ 2' ಸಿನಿಮಾ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಆಗಿದೆ. ಆದರೆ ವಿದೇಶದಲ್ಲಿ ಮಾತ್ರವೇ ಬಿಡುಗಡೆ ಆಗಿದ್ದು, ಭಾರತದಲ್ಲಿ ಈ ಸಿನಿಮಾ ಜಿಯೋ ಹಾಟ್‌ಸ್ಟಾರ್‌ನಲ್ಲಿ ಬಿಡುಗಡೆ ಆಗಲಿದೆ. ಜೂನ್ 4 ರಂದು ಜಿಯೋ ಹಾಟ್‌ಸ್ಟಾರ್‌ನಲ್ಲಿ 'ಧುರಂಧರ್ 2' ಸಿನಿಮಾವನ್ನು ವೀಕ್ಷಿಸಬಹುದಾಗಿದೆ.



ಇದು ಎಸ್‌ಪಿಬಿ ಜೂಲಿ ಲಕ್ಷ್ಮಿ ಕೊನೆ ಸಿನಿಮಾ

# 14 ವರ್ಷದ ಬಳಿಕ ಮಿಥುನಂ ಕನ್ನಡದಲ್ಲಿ ರಿಲೀಸ್

**ಮಹಾನ್ ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಾಗೂ ಜೂಲಿ ಲಕ್ಷ್ಮಿ ಅವರ ಮಿಥುನಂ ಚಿತ್ರ ಬಿಡುಗಡೆ ಆಗಿ 14 ವರ್ಷ ಆಗಿದೆ. ಇದು ಎಸ್.ಪಿ.ಬಿ ಅವರ ಕೊನೆ ಚಿತ್ರವೂ ಆಗಿದೆ. ಆದರೆ, ಇಷ್ಟು ವರ್ಷ ಆದ್ಮೇಲೆ ಇದು ಈಗ ಕನ್ನಡದಲ್ಲಿ ಬರ್ತಿದೆ.**

ಜೂಲಿ ಲಕ್ಷ್ಮಿ ಮತ್ತು ಎಸ್.ಪಿ.ಬಾಲಸುಬ್ರಹ್ಮಣ್ಯಂ ಅಭಿನಯದ ಮಿಥುನಂ ಕನ್ನಡದಲ್ಲಿ ಬರ್ತಿದೆ. 14 ವರ್ಷ ಆದ್ಮೇಲೆ ಈ ಚಿತ್ರ ಕನ್ನಡದಲ್ಲಿ ರಿಲೀಸ್ ಆಗುತ್ತಿದೆ. ಅದಕ್ಕೂ ಮೊದಲು ಇದು 2012 ಡಿಸೆಂಬರ್-21 ರಂದು ತೆಲುಗು ಭಾಷೆಯಲ್ಲಿ ರಿಲೀಸ್ ಆಗಿತ್ತು. ಉತ್ತಮ ಅಭಿಪ್ರಾಯವನ್ನು ಈ ಚಿತ್ರ ಪಡೆದುಕೊಂಡಿತ್ತು. ಆದರೆ, ಕನ್ನಡದಲ್ಲಿ ಆಗ ಇದು ರಿಲೀಸ್ ಆಗಿರಲಿಲ್ಲ

ಜೂನ್-5, 2026 ರಂದು ಈ ಚಿತ್ರ ಈಗ ತೆರೆ ಕಾಣುತ್ತಿದೆ. ಮಿಥುನಂ ಒಂದು ಒಳ್ಳೆ ಚಿತ್ರವೇ ಆಗಿದೆ. ಅಪ್ಪ ಮತ್ತು ಅಮ್ಮನಿಗೆ ವಯಸ್ಸಾಗಿರುತ್ತದೆ. ಮಕ್ಕಳು ವಿದೇಶದಲ್ಲಿ ಇರುತ್ತಾರೆ. ಆದರೆ, ವಯಸ್ಸಾದ ಪೋಷಕರು ಮಕ್ಕಳು ಇಲ್ಲದೆ ಹೇಗೆಲ್ಲ ಜೀವನ ನಡೆಸುತ್ತಾರೆ ಅನ್ನೋದು ಈ ಚಿತ್ರದಲ್ಲಿದೆ. ಈ ಚಿತ್ರದಲ್ಲಿ ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಿರಿಯ ವ್ಯಕ್ತಿಯ ಪಾತ್ರ ಮಾಡಿದ್ದಾರೆ. ಜೂಲಿ ಲಕ್ಷ್ಮಿ ಅವರು ಎಸ್.ಪಿ.ಬಿ.ಅವರ ಪತ್ನಿಯ ರೋಲ್ ಮಾಡಿದ್ದಾರೆ. ಈ ಚಿತ್ರ ನಿಜಕ್ಕೂ ತುಂಬಾನೆ ಚೆನ್ನಾಗಿದೆ. 14 ವರ್ಷದ ಹಿಂದೆ ಈ ಚಿತ್ರ ತೆಲುಗು ಭಾಷೆಯಲ್ಲಿ ಬಂದಿತ್ತು. ಆದರೆ, ಕನ್ನಡದಲ್ಲಿ ಇಷ್ಟು ವರ್ಷದ ಬಳಿಕ ಬರ್ತಿದೆ. ಇದಕ್ಕೆ ಏನು ಕಾರಣ ಅನ್ನುವ ಕುತೂಹಲವು ಇದೆ.

# 'ಜನ ನಾಯಗನ್' ದೊಡ್ಡ ನಿರ್ಧಾರ ತೆಗೆದುಕೊಂಡ ದಳಪತಿ

'ಜನ ನಾಯಗನ್' ಸಿನಿಮಾ ಈಗಾಗಲೇ ಸೆನ್ಸಾರ್ ಮಂಡಳಿಯ ತೊಡಕುಗಳು ಹಾಗೂ ದೃಶ್ಯಗಳ ಸೋರಿಕೆಯಿಂದಾಗಿ ಸಾಕಷ್ಟು ವಿಳಂಬವಾಗಿದ್ದು, ಸದ್ಯದಲ್ಲೇ ಹೊಸ ಬಿಡುಗಡೆಯ ದಿನಾಂಕ ಘೋಷಣೆಯಾಗುವ ನಿರೀಕ್ಷೆಯಿದೆ. ಈ ಚಿತ್ರದ ಮೂಲಕ ತಮ್ಮ ಸಿನಿಮಾ ಕೆರಿಯರ್‌ಗೆ ವಿಜಯ್ ಅದ್ದೂರಿ ಮುಕ್ತಾಯ ಹಾಡಲಿದ್ದಾರೆ. ತಮಿಳು ಚಿತ್ರರಂಗದ ಖ್ಯಾತ ನಟ, ತಮಿಳು ನಾಡು ಸಿಎಂ ದಳಪತಿ ವಿಜಯ್ ಅಭಿನಯದ ಕೊನೆಯ ಸಿನಿಮಾ 'ಜನ ನಾಯಗನ್' ಸಂಚಲನ ಮೂಡಿಸುತ್ತಿದೆ.



ಈ ಸಿನಿಮಾದ ಮೂಲಕ ವಿಜಯ್ ತಮ್ಮ ಚಿತ್ರರಂಗದ ಸುದೀರ್ಘ ಪಯಣಕ್ಕೆ ವಿರಾಮ ಹಾಡಿ, ಪೂರ್ಣ ಪ್ರಮಾಣದಲ್ಲಿ ರಾಜಕೀಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಹೀಗಿರುವಾಗ, ಸಿನಿಮಾದ ಟೈಟಲ್ ಕಾರ್ಡ್ ವಿಷಯದಲ್ಲಿ ವಿಜಯ್ ತೆಗೆದುಕೊಂಡಿದ್ದಾರೆ ಎನ್ನಲಾದ ನಿರ್ಧಾರವೊಂದು ಈಗ ಸುದ್ದಿಯಲ್ಲಿದೆ.

ವರದಿಗಳ ಪ್ರಕಾರ, 'ಜನ ನಾಯಗನ್' ಚಿತ್ರದ ಆರಂಭದಲ್ಲಿ ವಿಜಯ್ ಅವರಿಗೆ 'ಹಾನರೆಬಲ್ ಚೀಫ್ ಮಿನಿಸ್ಟರ್ ದಳಪತಿ ವಿಜಯ್' ಎಂದು ಟೈಟಲ್ ಕಾರ್ಡ್ ಹಾಕಲು ಚಿತ್ರತಂಡ ಯೋಜಿಸಿತ್ತು. ವಿಜಯ್ ಅವರ ರಾಜಕೀಯ ಮಹತ್ವಾಕಾಂಕ್ಷೆಗೆ ಪೂರಕವಾಗಿ ಈ ಬಿರುದು ನೀಡಲು ಚಿತ್ರತಂಡ ಉತ್ಸುಕವಾಗಿತ್ತು. ಆದರೆ, ಈ ಪ್ರಸ್ತಾಪವನ್ನು ವಿಜಯ್ ನಯವಾಗಿ ತಿರಸ್ಕರಿಸಿದ್ದಾರೆ ಎಂದು ತಿಳಿದುಬಂದಿದೆ. ಬದಲಾಗಿ, ದಶಕಗಳಿಂದ ತಮ್ಮ ಅಭಿಮಾನಿಗಳು ಪ್ರೀತಿಯಿಂದ ಕರೆಯುವ 'ದಳಪತಿ' ಎಂಬ ಬಿರುದನ್ನೇ ಉಳಿಸಿಕೊಳ್ಳಲು ಅವರು ಸೂಚಿಸಿದ್ದಾರೆ ಎನ್ನಲಾಗಿದೆ. ತಮ್ಮ ಸಿನಿಮಾ ಬದುಕು ಮತ್ತು ರಾಜಕೀಯ ಬದುಕಿನ ನಡುವೆ ಸ್ಪಷ್ಟವಾದ ಗೆರೆ ಇರಲಿ ಎಂಬುದು ವಿಜಯ್ ಅವರ ಆಶಯ. ಸಿನಿಮಾ ಪ್ರೇಕ್ಷಕರು ತಮ್ಮನ್ನು ಯಾವ ರೂಪದಲ್ಲಿ ನೋಡಲು ಇಷ್ಟಪಡುತ್ತಾರೋ ಅದೇ ಶೈಲಿಯಲ್ಲಿ ತೆರೆಯ ಮೇಲೆ ಕಾಣಿಸಿಕೊಳ್ಳುವುದು ಅವರ ಉದ್ದೇಶ. 'ದಳಪತಿ' ಎಂಬ ಬಿರುದು ಕೇವಲ ಹೆಸರಲ್ಲ, ಅದು ಅಭಿಮಾನಿಗಳ ಭಾವನೆ. ಹಾಗಾಗಿ ತಮ್ಮ ಕೊನೆಯ ಸಿನಿಮಾದಲ್ಲೂ ಅದೇ ಹೆಸರಿನಿಂದ ಗುರುತಿಸಿಕೊಳ್ಳಲು ಅವರು ನಿರ್ಧರಿಸಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. 'ಜನ ನಾಯಗನ್' ಸಿನಿಮಾ ಈಗಾಗಲೇ ಸೆನ್ಸಾರ್ ಮಂಡಳಿಯ ತೊಡಕುಗಳು ಹಾಗೂ ದೃಶ್ಯಗಳ ಸೋರಿಕೆಯಿಂದಾಗಿ ಸಾಕಷ್ಟು ವಿಳಂಬವಾಗಿದ್ದು, ಸದ್ಯದಲ್ಲೇ ಹೊಸ ಬಿಡುಗಡೆಯ ದಿನಾಂಕ ಘೋಷಣೆಯಾಗುವ ನಿರೀಕ್ಷೆಯಿದೆ. ಈ ಚಿತ್ರದ ಮೂಲಕ ತಮ್ಮ ಸಿನಿಮಾ ಕೆರಿಯರ್‌ಗೆ ವಿಜಯ್ ಅದ್ದೂರಿ ಮುಕ್ತಾಯ ಹಾಡಲಿದ್ದಾರೆ.

# ವಿಚ್ಛೇದನ ಸಿಗುವವರೆಗೆ ನಟಿಸಲ್ಲ

ತಮಿಳು ನಟ ಜಯಂ ರವಿ ಅವರು ಸಿನಿಮಾಗಳ ಬದಲಿಗೆ ತಮ್ಮ ಖಾಸಗಿ ಬದುಕಿನಿಂದಾಗಿ ಹೆಚ್ಚು ಸುದ್ದಿಯಲ್ಲಿದ್ದಾರೆ. ಜಯಂ ರವಿ, ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದು, ಗಾಯಕಿ ಕೆನೀಶಾ ಫ್ರಾನ್ಸಿಸ್ ಜೊತೆ ಸಂಬಂಧದಲ್ಲಿದ್ದರು. ಇದೀಗ ರವಿ ಚೆನ್ನೈನಲ್ಲಿ ಸುದ್ದಿಗೋಷ್ಠಿ ನಡೆಸಿ ಪ್ರಮುಖ ಘೋಷಣೆ ಮಾಡಿದ್ದಾರೆ. 'ವಿಚ್ಛೇದನ ಸಿಗುವವರೆಗೆ ನಾನು ಸಿನಿಮಾಗಳಲ್ಲಿ ನಟಿಸುವುದಿಲ್ಲ' ಎಂದಿದ್ದಾರೆ. ಜಯಂ ರವಿ, ತಮಿಳು ಚಿತ್ರರಂಗದ ಜನಪ್ರಿಯ ನಟರಲ್ಲಿ ಒಬ್ಬರು. ತಮಿಳಿನ 'ಜಯಂ' ಸಿನಿಮಾ ಮೂಲಕ ನಟರಾದ ರವಿ ಮೋಹನ್, ಆ ನಂತರ ನಾಯಕರಾಗಿ ಹಲವಾರು ಸೂಪರ್ ಹಿಟ್ ಸಿನಿಮಾಗಳನ್ನು ನಿಡಿದ್ದಾರೆ. ಆದರೆ ಇತ್ತೀಚೆಗೆ ಜಯಂ ರವಿ ಅವರು ಸಿನಿಮಾಗಳ ಬದಲಿಗೆ ತಮ್ಮ ಖಾಸಗಿ ಬದುಕಿನಿಂದಾಗಿ ಹೆಚ್ಚು ಸುದ್ದಿಯಲ್ಲಿದ್ದಾರೆ. ಜಯಂ ರವಿ, ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದು, ಗಾಯಕಿ ಕೆನೀಶಾ ಫ್ರಾನ್ಸಿಸ್ ಜೊತೆ ಸಂಬಂಧದಲ್ಲಿದ್ದರು. ಇದೀಗ ರವಿ ಚೆನ್ನೈನಲ್ಲಿ ಸುದ್ದಿಗೋಷ್ಠಿ ನಡೆಸಿ ಪ್ರಮುಖ ಘೋಷಣೆ ಮಾಡಿದ್ದಾರೆ. 'ವಿಚ್ಛೇದನ ಸಿಗುವವರೆಗೆ ನಾನು ಸಿನಿಮಾಗಳಲ್ಲಿ ನಟಿಸುವುದಿಲ್ಲ' ಎಂದಿದ್ದಾರೆ. ರವಿ, ತಮ್ಮ ಪತ್ನಿ ಆರತಿ ಇಂದ ಪ್ರತ್ಯೇಕವಾಗಿದ್ದು, ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು.

ರವಿ, ತಮ್ಮ ಮನೆಯನ್ನು ಸಹ ಪತ್ನಿಗೆ ಬಿಟ್ಟು ಕೊಟ್ಟಿದ್ದರು. ಆದರೆ ಅವರಿಗೆ ಇನ್ನೂ ಅಧಿಕೃತವಾಗಿ ವಿಚ್ಛೇದನ ದೊರೆತಿಲ್ಲ. ಇದೀಗ ಸುದ್ದಿಗೋಷ್ಠಿ ನಡೆಸಿ ಭಾವುಕರಾಗಿ ಮಾತನಾಡಿದ ಅವರು, 'ನನ್ನನ್ನು ಗುಲಾನಂತೆ ಇರಿಸಿಕೊಳ್ಳಲಾಗಿತ್ತು' ಎಂದಿದ್ದಾರೆ.





# ಮಗಳು ಬೆಳೆದು ದೊಡ್ಡವಳಾದ ಮೇಲೆ ಬಾಯ್‌ಫ್ರೆಂಡ್ ಮಾಡಿಕೊಂಡ್ರೆ

ಮಕ್ಕಳು ತಮ್ಮ ಜೀವನದ ಹಾದಿಯಲ್ಲಿ ತಪ್ಪುಗಳನ್ನು ಮಾಡುವುದು ಸಹಜ. ಪೋಷಕರ ಅನುಭವದ ಕನ್ನಡಕದಿಂದ ಜೀವನವನ್ನು ನೋಡುವ ಬದಲು, ಮಗಳು ಸ್ವತಃ ಲೋಕವನ್ನು ನೋಡಿ ಕಲಿಯಬೇಕು ಎಂಬುದು ಕಿಯಾರಾ ಅವರ ಆಸೆ.

ಜೀವನವನ್ನು ಪೂರ್ಣ ಪ್ರಮಾಣದಲ್ಲಿ ಅನುಭವಿಸಿ, ಯಾವುದು ಸರಿ ಯಾವುದು ತಪ್ಪು ಎಂದು ಅವಳೇ ನಿರ್ಧರಿಸುವ ಸ್ವಾತಂತ್ರ್ಯ ನೀಡಲು ಇಚ್ಛಿಸುತ್ತಾರೆ. ಬಾಲಿವುಡ್‌ನ ಕ್ಯೂಟ್ ಜೋಡಿ ಕಿಯಾರಾ ಅಡ್ವಾಣಿ ಮತ್ತು ಸಿದ್ಧಾರ್ಥ್ ಮಲ್ಹೋತ್ರಾ, 2023ರಲ್ಲಿ ವಿವಾಹವಾದರು. 2025ರಲ್ಲಿ ಹೆಣ್ಣು ಮಗುವಿಗೆ ಜನ್ಮನೀಡಿದರು.


ಈ ಮುಗುವಿಗೆ ಸರಾಯಾ ಮಲ್ಹೋತ್ರಾ ಎಂದು ನಾಮಕರಣ ಮಾಡಿದ್ದಾರೆ. ಇತ್ತೀಚಿನ ಸಂದರ್ಶನ ಒಂದರಲ್ಲಿ ಕಿಯಾರಾ ತಮ್ಮ ಮಗಳ ಪಾಲನೆ ಮತ್ತು ಆಧುನಿಕ ಜಗತ್ತಿನಲ್ಲಿ ಅವಳು ಸಂಬಂಧಗಳನ್ನು ಹೇಗೆ ನಿಭಾಯಿಸಬೇಕು ಎಂಬ ಬಗ್ಗೆ ಆಸಕ್ತಿದಾಯಕ ವಿಷಯಗಳನ್ನು ಹಂಚಿಕೊಂಡಿದ್ದಾರೆ. 'ನನ್ನ ತಂದೆ ತಾಯಿ ಲವ್ ಮಾಡಿದ್ದರು. ನಂತರ ಮದುವೆ ಆದರು. ನಾನು ಕೂಡ ಅದೇ ನಂಬಿಕೆಯಲ್ಲಿ ಬೆಳೆದಿದ್ದೆ' ಎಂದು ಅವರು ಹೇಳಿದ್ದರು. 'ನನ್ನ ಮಗಳು ಮದುವೆ ಅಥವಾ ಪ್ರೀತಿಯ ಬಗ್ಗೆ ಯಾವುದೇ ಪೂರ್ವಗ್ರಹ ಪೀಡಿತ ಆಲೋಚನೆಗಳೊಂದಿಗೆ ಬೆಳೆಯುವುದು ನನಗೆ ಇಷ್ಟವಿಲ್ಲ. ಅವಳಿಗೆ ಇಷ್ಟವಿದ್ದರೆ ಮದುವೆಯಾಗಲಿ, ಇಲ್ಲದಿದ್ದರೆ ಬೇಡ. ಅವಳ ನಿರ್ಧಾರ ಅವಳದ್ದೇ ಆಗಿರಬೇಕು' ಎಂದು ಕಿಯಾರಾ ಹೇಳಿದ್ದಾರೆ.

# ಓಯ್ ಅಂಧೇರೇ ತಿಲಕ್‌ಗೆ ಅರ್ಷದೀಪ್ ನಿಂದನೆ!

ಅರ್ಷದೀಪ್ ಸಿಂಗ್ ತಮ್ಮದೇ ಆದ ಸ್ನ್ಯಾಪ್‌ಚಾಟ್ ಖಾತೆಯಲ್ಲಿ ವಿಡಿಯೋವೊಂದನ್ನು ಹಂಚಿಕೊಂಡಿದ್ದರು. ಅದರಲ್ಲಿ ತಿಲಕ್ ವರ್ಮಾ ಅವರನ್ನು ಉದ್ದೇಶಿಸಿ, ''ಓಯ್ ಅಂಧೇರೇ, ಸನ್‌ಸ್ಕ್ರೀನ್ ಹಚ್ಚಿಕೊಂಡಿದ್ದೀಯಾ'' ಎಂದು ಕೇಳಿದ್ದಾರೆ.

ಅಷ್ಟೇ ಅಲ್ಲದೆ ಕ್ಯಾಮೆರಾವನ್ನು ಸಹ ಆಟಗಾರ ನಮನ್ ಧೀರ್ ಕಡೆಗೆ ತಿರುಗಿಸಿ, ಅವರೇ ಪಂಜಾಬ್‌ನ ನಿಜವಾದ 'ನೂರ್' ಎಂದು ಹೊಗಳಿದ್ದಾರೆ. ಇಲ್ಲಿ ಅರ್ಷದೀಪ್ ಸಿಂಗ್ ಪಂಜಾಬಿ ಭಾಷೆಯಲ್ಲಿ ಅಂಧೇರೇ ಅಂದಿರುವುದು ಕರಿಯ ಎಂಬಾರ್ಥದಲ್ಲಿ. ಅಂದರೆ ಮೈ ಬಣ್ಣವನ್ನು ಪ್ರಸ್ತಾಪಿಸಿ ಹೀಯಾಳಿಸಿರುವುದು ಸ್ಪಷ್ಟ.

ಅರ್ಷದೀಪ್ ಸಿಂಗ್ ಅವರ ಈ ಮಾತಿನಿಂದ ತಿಲಕ್ ವರ್ಮಾ ಮುಜುಗರಕ್ಕೊಳಗಾದಂತೆ ಕಂಡರೂ, ಪರಿಸ್ಥಿತಿಯನ್ನು ಶಾಂತವಾಗಿ ನಿಭಾಯಿಸಿದ್ದಾರೆ.



''ನಾನು ಈಗಾಗಲೇ ಸನ್‌ಸ್ಕ್ರೀನ್ ಹಚ್ಚಿಕೊಂಡಿದ್ದೇನೆ, ನಾಳಿನ ಪಂದ್ಯದ ಕಡೆ ಗಮನ ಕೊಡೋಣ'' ಎಂದು ಹೇಳಿ ಅಲ್ಲಿಂದ ತೆರಳಿದ್ದಾರೆ. ಟ್ವಿಟರ್ ಮತ್ತು ಇನ್‌ಸ್ಟಾಗ್ರಾಮ್‌ನಲ್ಲಿ ಕ್ರಿಕೆಟ್ ಪ್ರೇಮಿಗಳು ಅರ್ಷದೀಪ್ ವರ್ತನೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಡ್ರೆಸ್ಸಿಂಗ್ ರೂಮ್ ತಮಾಷೆಯ ಹೆಸರಿನಲ್ಲಿ ಇಂತಹ ವರ್ಣಭೇದದ ಕಾಮೆಂಟ್‌ಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ನೆಟ್ಟಿಗರು ಕಿಡಿಕಾರಿದ್ದಾರೆ. ಇಂತಹ ಸೂಕ್ಷ್ಮ ವಿಷಯಗಳಲ್ಲಿ ಆಟಗಾರರಿಗೆ ಸಾಮಾಜಿಕ ಜಾಲತಾಣಗಳ ಬಳಕೆಯ ಬಗ್ಗೆ ತರಬೇತಿ ನೀಡಬೇಕು ಮತ್ತು ಬಿಸಿಸಿಐ ಅರ್ಷದೀಪ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಅಭಿಮಾನಿಗಳು ಆಗ್ರಹಿಸಿದ್ದಾರೆ. ಅರ್ಷದೀಪ್ ಸಿಂಗ್ ಮಾತುಗಳ ಮೂಲಕ ವಿವಾದ ಸೃಷ್ಟಿಸಿದರೆ, ತಿಲಕ್ ವರ್ಮಾ ತಮ್ಮ ಬ್ಯಾಟ್ ಮೂಲಕವೇ ತಕ್ಕ ಉತ್ತರ ನೀಡಿದ್ದಾರೆ. ಈ ಪಂದ್ಯದಲ್ಲಿ ಕೇವಲ 33 ಎಸೆತಗಳಲ್ಲಿ ಭರ್ಜರಿ 6 ಸಿಕ್ಸರ್‌ಗಳ ನೆರವಿನಿಂದ ಅಜೇಯ 75 ರನ್ ಚಚ್ಚಿದರು.

# ಬರೋಬ್ಬರಿ 63 ರನ್: ಐಪಿಎಲ್ ಇತಿಹಾಸದಲ್ಲೇ ಅತ್ಯಂತ ಕಳಪೆ ಬೌಲಿಂಗ್..!

ಐಪಿಎಲ್‌ನಲ್ಲಿ ಹೀರೋ ಆಗಿದ್ದವನು ಕೇವಲ 2.4 ಓವರ್‌ಗಳಲ್ಲಿ ಝೀರೋ ಆಗಬಹುದು ಎಂಬುದಕ್ಕೆ ಲಕ್ನೋದ ಏಕನಾ ಸ್ಟೇಡಿಯಂನಲ್ಲಿ ನಡೆದ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಲಕ್ನೋ ಸೂಪರ್ ಜೈಂಟ್ಸ್ ನಡುವಿನ ಪಂದ್ಯವೇ ಸಾಕ್ಷಿ. ಪಂದ್ಯದ ಆರಂಭದವರೆಗೂ ಸಿಎಸ್‌ಕೆ ತಂಡದ ಪ್ರಮುಖ ಅಸ್ತ್ರವಾಗಿದ್ದ ಅನ್ಶುಲ್ ಕಂಬೋಜ್, ಪಂದ್ಯ ಮುಗಿಯುವ ಹೊತ್ತಿಗೆ ಐಪಿಎಲ್ ಇತಿಹಾಸದ ಅತ್ಯಂತ ದುಬಾರಿ ಬೌಲರ್ ಆಗಿ ಹೊರಹೊಮ್ಮಿದ್ದರು.

ಈ ಪಂದ್ಯದಲ್ಲಿ ಅನ್ಶುಲ್ ಕಂಬೋಜ್ ಅವರ ಬೌಲಿಂಗ್ ಅನ್ನು ಲಕ್ನೋ ಸೂಪರ್ ಜೈಂಟ್ಸ್ ಬ್ಯಾಟರ್‌ಗಳು ಧೂಳೀಪಟ ಮಾಡಿದರು. ಈ ಮೂಲಕ ಐಪಿಎಲ್ ಇತಿಹಾಸದಲ್ಲಿ ಕನಿಷ್ಠ 2 ಓವರ್‌ಗಳಿಗಿಂತ ಹೆಚ್ಚು ಬೌಲಿಂಗ್ ಮಾಡಿದ ಬೌಲರ್‌ಗಳ ಪೈಕಿ ಅತ್ಯಧಿಕ ಎಕಾನಮಿ ರೇಟ್ ನೀಡಿದ ಬೌಲರ್ ಎಂಬ ಮುಜುಗರದ ದಾಖಲೆಯನ್ನು ತಮ್ಮದಾಗಿಸಿಕೊಂಡರು.

**ಓವರ್‌ಗಳು: 2.4**
**ರನ್‌ಗಳು: 63**
**ವಿಕೆಟ್: 0**
**ಎಕಾನಮಿ ರೇಟ್: 23.62**
**ನೀಡಿದ ಸಿಕ್ಸರ್‌ಗಳು: 8**

ಇದಕ್ಕೂ ಮುನ್ನ ಐಪಿಎಲ್ ಇತಿಹಾಸದಲ್ಲಿ ಅತ್ಯಂತ ಕಳಪೆ ಎಕಾನಮಿ ರೇಟ್ ಹೊಂದಿದ್ದ ದಾಖಲೆ ವಾಷಿಂಗ್ಟನ್ ಸುಂದರ್ ಹೆಸರಿನಲ್ಲಿತ್ತು. ಐಪಿಎಲ್ 2024 ರಲ್ಲಿ ಸುಂದರ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 2 ಓವರ್‌ಗಳಲ್ಲಿ 46 ರನ್ ನೀಡಿದ್ದರು ಅಂದರೆ 23ರ ಎಕಾನಮಿ ರೇಟ್‌ನಲ್ಲಿ ರನ್ ಬಿಟ್ಟು ಕೊಟ್ಟಿದ್ದರು. ಈ ಮೂಲಕ ಐಪಿಎಲ್‌ನಲ್ಲಿ 2 ಓವರ್‌ಗಳಲ್ಲಿ ಗರಿಷ್ಠ ಎಕಾನಮಿ ರೇಟ್‌ನಲ್ಲಿ ರನ್ ನೀಡಿದ ಹೀನಾಯ ದಾಖಲೆ ಬರೆದಿದ್ದರು. ಇದೀಗ ಈ ಹೀನಾಯ ದಾಖಲೆಯನ್ನು ಅನ್ಶುಲ್ ಕಂಬೋಜ್ (23.62 ಎಕಾನಮಿ) ತಮ್ಮದಾಗಿಸಿಕೊಂಡಿದ್ದಾರೆ. ಲಕ್ನೋ ಸೂಪರ್ ಜೈಂಟ್ಸ್ ಬ್ಯಾಟರ್‌ಗಳು ಅನ್ಶುಲ್ ಎಸೆದ 16 ಎಸೆತಗಳಲ್ಲಿ ಬರೋಬ್ಬರಿ 63 ರನ್ ಚಚ್ಚಿದ್ದಾರೆ.



ರನ್ ನೀಡಿದ ಹೀನಾಯ ದಾಖಲೆ

ಇನ್ನು ಈ 16 ಎಸೆತಗಳಲ್ಲಿ ಅನ್ಶುಲ್ ಕಂಬೋಜ್ ಬರೋಬ್ಬರಿ 8 ಸಿಕ್ಸರ್‌ಗಳನ್ನು ಹೊಡೆಸಿಕೊಂಡಿದ್ದಾರೆ. ಈ ಮೂಲಕ ಐಪಿಎಲ್ ಪಂದ್ಯವೊಂದರ ಒಂದೇ ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ಸಿಕ್ಸರ್ ನೀಡಿದ ಜಂಟಿ ಬೌಲರ್ ಎಂಬ ಹೀನಾಯ ದಾಖಲೆಯನ್ನು ಸಹ ತಮ್ಮದಾಗಿಸಿಕೊಂಡಿದ್ದಾರೆ.

ಇದಕ್ಕೂ ಮುನ್ನ 2023 ರಲ್ಲಿ ಯಶ್ ದಯಾಳ್ 8 ಸಿಕ್ಸರ್ ಹೊಡೆಸಿಕೊಂಡಿದ್ದರು. ಇದೀಗ ಕಂಬೋಜ್ ಕೂಡ 8 ಸಿಕ್ಸರ್ ಚಚ್ಚಿಸಿಕೊಂಡಿದ್ದಾರೆ.

**ಫಲಿತಾಂಶದ ಮೇಲೆ ಪರಿಣಾಮ:** ಅನ್ಶುಲ್ ಕಂಬೋಜ್ ಅವರ ಈ ಕಳಪೆ ಬೌಲಿಂಗ್ ಪ್ರದರ್ಶನದಿಂದಾಗಿ ಸಿಎಸ್‌ಕೆ ತಂಡವು ಆರಂಭದಲ್ಲೇ ಪಂದ್ಯವನ್ನು ಕೈಚೆಲ್ಲಿಕೊಂಡಿದ್ದರು.

ಏಕೆಂದರೆ ಸ್ಫೋಟಕ ಆರಂಭ ಪಡೆದ ಲಕ್ನೋ ಸೂಪರ್ ಜೈಂಟ್ಸ್ ಆ ಬಳಿಕ ಹಿಂತಿರುಗಿ ನೋಡಿರಲಿಲ್ಲ.

# ಟೆಸ್ಟ್ ನಿವೃತ್ತಿಗೆ ಕಾರಣ ಬಿಚ್ಚಿಟ್ಟ ವಿರಾಟ್

ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿ ಸರಿಯಾಗಿ ಒಂದು ವರ್ಷ ಕಳೆದಿದೆ. ಆದರೆ, ಅವರ ಆ ಹಠಾತ್ ನಿರ್ಧಾರದ ಹಿಂದಿನ ಅಸಲಿ ಕಾರಣ ಮಾತ್ರ ಇಂದಿಗೂ ನಿಗೂಢವಾಗಿತ್ತು. ಈಗ ಆರ್‌ಸಿಬಿ ಪಾಡ್‌ಕಾಸ್ಟ್‌ನ ಹೊಸ ಸಂಚಿಕೆಯಲ್ಲಿ ಸ್ವತಃ ಕೊಹ್ಲಿ ಅವರೇ ತಮ್ಮ ಮನದಾಳದ ಮಾತುಗಳನ್ನು ಬಿಚ್ಚಿಡುವ ಮೂಲಕ ಕ್ರಿಕೆಟ್ ಜಗತ್ತಿನಲ್ಲಿ ಹೊಸ ಚರ್ಚೆಯನ್ನು ಹುಟ್ಟುಹಾಕಿದ್ದಾರೆ. ಟೆಸ್ಟ್ ನಿವೃತ್ತಿಯ ಹಿಂದಿನ ಕಹಿ ಸತ್ಯಗಳು, ಪ್ರಸ್ತುತ ಮ್ಯಾನೇಜ್‌ಮೆಂಟ್ ವಿರುದ್ಧದ ಅಸಮಾಧಾನ ಮತ್ತು 2027ರ ಏಕದಿನ ವಿಶ್ವಕಪ್‌ನಲ್ಲಿ ಆಡುವ ಕುರಿತು ಅವರು ಹಾಕಿರುವ ಕಠಿಣ ಷರತ್ತುಗಳ ಸಂಪೂರ್ಣ ವಿವರ ಇಲ್ಲಿದೆ.

ಭಾರತೀಯ ಕ್ರಿಕೆಟ್ ಇತಿಹಾಸದ ಅತ್ಯಂತ ಯಶಸ್ವಿ ಟೆಸ್ಟ್ ನಾಯಕ ವಿರಾಟ್ ಕೊಹ್ಲಿ, ತಮ್ಮ ಹಠಾತ್ ನಿವೃತ್ತಿಯ ಹಿಂದಿನ ಅಸಲಿ ಕಾರಣವನ್ನು ಕೊನೆಗೂ ಬಹಿರಂಗಪಡಿಸಿದ್ದಾರೆ.

ಆರ್‌ಸಿಬಿ ಪಾಡ್‌ಕಾಸ್ಟ್‌ನಲ್ಲಿ ಕ್ರೀಡಾ ನಿರೂಪಕಿ ಮಯಾಂತಿ ಲ್ಯಾಂಗರ್ ಅವರೊಂದಿಗೆ ಮಾತನಾಡಿದ ಕೊಹ್ಲಿ, ತಂಡದ ಒಳಗಿನ ಗೊಂದಲಮಯ ವಾತಾವರಣ ಮತ್ತು ಗೌರವದ ಕೊರತೆಯೇ ತಮ್ಮ ನಿರ್ಧಾರಕ್ಕೆ ಮುಖ್ಯ ಕಾರಣ ಎಂದು ಪರೋಕ್ಷವಾಗಿ ಮ್ಯಾನೇಜ್‌ಮೆಂಟ್ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

**ನಿವೃತ್ತಿಯ ಹಿಂದಿನ ಕಹಿ ಸತ್ಯ**

2024-25ರ ಬಾರ್ಡರ್-ಗವಾಸ್ಕರ್ ಟ್ರೋಫಿ ಸರಣಿಯ ನಂತರ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ಹಠಾತ್ ವಿದಾಯ ಹೇಳಿದ್ದರು. ಆರ್‌ಸಿಬಿ ಪಾಡ್‌ಕಾಸ್ಟ್‌ನಲ್ಲಿ ಆ ದಿನಗಳನ್ನು ನೆನೆದ ಕೊಹ್ಲಿ, ''ನನ್ನ ಮೇಲೆ ಮತ್ತು ನನ್ನ ಆಟದ ಮೇಲೆ ನಂಬಿಕೆ ಇಲ್ಲದ ವಾತಾವರಣದಲ್ಲಿ ನನಗೆ ಮುಂದುವರಿಯಲು ಸಾಧ್ಯವಿರಲಿಲ್ಲ. ನನ್ನ ಸಾಮರ್ಥ್ಯ ಮತ್ತು ತಂಡಕ್ಕೆ ನಾನೇನು ಎಂಬ ಮೌಲ್ಯವನ್ನು ಪದೇ ಪದೇ ಸಾಬೀತುಪಡಿಸಬೇಕಾದ ಪರಿಸ್ಥಿತಿ ಬಂದರೆ, ನಾನು ಆ ಜಾಗದಲ್ಲಿ ಇರಲು ಇಷ್ಟಪಡುವುದಿಲ್ಲ. ಟೆಸ್ಟ್ ಕ್ರಿಕೆಟ್ ಬಿಡುವುದು ಸುಲಭವಾಗಿರಲಿಲ್ಲ,

ಆದರೆ ಆ ಸಮಯದಲ್ಲಿ ಆ ನಿರ್ಧಾರವೇ ಸರಿಯಾಗಿತ್ತು. ಏಕೆಂದರೆ ಎಲ್ಲಕ್ಕಿಂತ ಸ್ವಾಭಿಮಾನವೇ ಮುಖ್ಯ'' ಎಂದು ನೇರವಾಗಿ ಹೇಳುವ ಮೂಲಕ ಗೌರವ ಸಿಗದ ಕಡೆ ಇರಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಇದರೊಂದಿಗೆ ವಿರಾಟ್ ಕೊಹ್ಲಿಗೆ ತಂಡದಲ್ಲಿ ಸಿಗಬೇಕಾದ ಗೌರವ ಸಿಗುತ್ತಿರಲಿಲ್ಲ ಎಂಬುದು ಬಹಿರಂಗವಾಗಿದೆ. ಅಲ್ಲದೆ ಟೆಸ್ಟ್ ನಿವೃತ್ತಿಗೆ ಮ್ಯಾನೇಜ್ಮೆಂಟ್ ಹಾಗೂ ಕೋಚ್ ಕಡೆಯಿಂದ ಅವರ ಮೇಲೆ ಒತ್ತಡಗಳಿದ್ದವು ಎಂಬ ಎಂಬ ವಿಚಾರ ಕೂಡ ಮತ್ತೆ ಮುನ್ನಲೆಗೆ ಬಂದಿದೆ. ಇದಾಗ್ಯೂ ಕಿಂಗ್ ಕೊಹ್ಲಿ 2027ರ ಏಕದಿನ ವಿಶ್ವಕಪ್‌ನಲ್ಲಿ ಕಣಕ್ಕಿಳಿಯಲಿದ್ದಾರಾ ಎಂಬುದೇ ಪ್ರಶ್ನೆ.

**2027ರ ವಿಶ್ವಕಪ್ ಆಡ್ತಾರಾ**

ಪ್ರಸ್ತುತ ಭಾರತ ಏಕದಿನ ತಂಡದಲ್ಲಿ ತಮ್ಮ ಸ್ಥಾನದ ಬಗ್ಗೆ ಕೇಳಿಬರುತ್ತಿರುವ ಟೀಕೆಗಳಿಗೆ ಕೊಹ್ಲಿ ತೀಕ್ಷ್ಣವಾಗಿ ಉತ್ತರಿಸಿದ್ದಾರೆ. ''ನಾನು ನನ್ನ ವೃತ್ತಿಜೀವನದ ಅಂತಹ ಹಂತದಲ್ಲಿದ್ದೇನೆ, ಇಲ್ಲಿ ನಾನು ಯಾರಿಗೂ ನನ್ನ ಯೋಗ್ಯತೆ ಅಥವಾ ತಂಡಕ್ಕೆ ನನ್ನ ಮೌಲ್ಯ ಏನು ಎಂಬುದನ್ನು ಪದೇ ಪದೇ ಸಾಬೀತುಪಡಿಸುವ ಅಗತ್ಯವಿಲ್ಲ''.

''ನನಗೆ 2027ರ ವಿಶ್ವಕಪ್‌ನಲ್ಲಿ ಭಾರತವನ್ನು ಮುನ್ನಡೆಸುವ ಆಸೆಯಿದೆ. ಆದರೆ, ಅದಕ್ಕೆ ಒಂದು ಷರತ್ತಿದೆ. ಪ್ರತಿ ವಾರವೂ ನನ್ನ ಬ್ಯಾಟಿಂಗ್ ಶೈಲಿಯನ್ನು ಪ್ರಶ್ನಿಸುವ ಅಥವಾ ಹೊಗಳುವ ವಾತಾವರಣ ನನಗೆ ಬೇಡ. ತಂಡದ ಮ್ಯಾನೇಜ್‌ಮೆಂಟ್ ನನ್ನನ್ನು ಸಂಪೂರ್ಣವಾಗಿ ಗೌರವಿಸುತ್ತದೆ ಮತ್ತು ನನ್ನ ಅವಶ್ಯಕತೆ ಇದೆ ಎಂದು ಭಾವಿಸಿದರೆ ಮಾತ್ರ ನಾನು ಆಡುತ್ತೇನೆ'' ವಿರಾಟ್ ಕೊಹ್ಲಿ ಎಂದಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ವಿರಾಟ್ ಕೊಹ್ಲಿ ಅವರ ಈ ಮಾತುಗಳು ಕೇವಲ ಒಂದು ಸಂದರ್ಶನವಲ್ಲ, ಅದು ಒಬ್ಬ ದಿಗ್ಗಜ ಆಟಗಾರನ ಸ್ವಾಭಿಮಾನದ ಧ್ವನಿ. ಟೆಸ್ಟ್ ಕ್ರಿಕೆಟ್‌ನಿಂದ ದೂರ ಸರಿದರೂ, ಐಪಿಎಲ್ 2026 ರಲ್ಲಿ ತಮ್ಮ ಬ್ಯಾಟಿಂಗ್ ಮೂಲಕ ಟೀಕಾಕಾರರಿಗೆ ಮೈದಾನದಲ್ಲೇ ಉತ್ತರ ನೀಡುತ್ತಿದ್ದಾರೆ. ತಮ್ಮ ವೃತ್ತಿಜೀವನದ ಅಂತಿಮ ಹಂತದಲ್ಲಿರುವ ಕೊಹ್ಲಿಗೆ ಈಗ ರನ್ ಗಳಿಸುವುದಕ್ಕಿಂತ ತಂಡದಲ್ಲಿ ಸಿಗುವ ಗೌರವ ಮತ್ತು ನಂಬಿಕೆ ಮುಖ್ಯವಾಗಿದೆ. ಮ್ಯಾನೇಜ್‌ಮೆಂಟ್ ಇವರ ಈ ಷರತ್ತಿಗೆ ಗೌರವ ನೀಡಿದರೆ, 2027ರ ವಿಶ್ವಕಪ್‌ನಲ್ಲಿ 'ಕಿಂಗ್ ಕೊಹ್ಲಿ' ಮತ್ತೊಮ್ಮೆ ಭಾರತಕ್ಕೆ ಕಿರೀಟ ತೊಡಿಸುವುದರಲ್ಲಿ ಯಾವುದೇ ಸಂಶಯವಿಲ್ಲ.



# ಐಪಿಎಲ್ ಫೈನಲ್‌ಗೆ ಪಾಕ್ ಕ್ರಿಕೆಟ್ ಮಂಡಳಿ ಮುಖ್ಯಸ್ಥನಿಗೆ ಆಹ್ವಾನ!

ಬಿಸಿಸಿಐ ಮತ್ತು ಪಿಸಿಬಿ ನಡುವಿನ ಶೀತಲ ಸಮರಕ್ಕೆ ಸದ್ಯಕ್ಕಂತೂ ಕೊನೆ ಇಲ್ಲ ಅಂದುಕೊಂಡಿದ್ದವರಿಗೆ ಜಾಗತಿಕ ಕ್ರಿಕೆಟ್ ನಿಯಂತ್ರಣ ಮಂಡಳಿಗಳು ಶಾಕ್ ನೀಡಿವೆ. ಉಭಯ ದೇಶಗಳ ಕ್ರಿಕೆಟ್ ಸಂಬಂಧದ ಭವಿಷ್ಯವನ್ನೇ ಬದಲಿಸಬಲ್ಲ ಹೈ-ಪ್ರೊಫೈಲ್ ಬೆಳವಣಿಗೆಯೊಂದು ತೆರೆಮರೆಯಲ್ಲಿ ನಡೆದಿದೆ. ಅದು ಸಹ ಪಿಸಿಬಿ ಮುಖ್ಯಸ್ಥನಿಗೆ ಐಪಿಎಲ್ ಫೈನಲ್‌ನ ಆಹ್ವಾನ ನೀಡುವ ಮೂಲಕ ಎಂಬುದೇ ಅಚ್ಚರಿ! ಭಾರತ ಮತ್ತು ಪಾಕಿಸ್ತಾನ್ ನಡುವೆ ಕ್ರೀಡಾ ಸಂಬಂಧಗಳಲ್ಲಿ ದೀರ್ಘಕಾಲದ ಉದ್ವಿಗ್ನತೆ ಮುಂದುವರಿದಿದ್ದರೂ, ಒಂದು ಅಚ್ಚರಿಯ ಮತ್ತು ಪ್ರಮುಖ ಬೆಳವಣಿಗೆಯೊಂದು ನಡೆದಿದೆ. ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಅವರಿಗೆ ಭಾರತದಲ್ಲಿ ನಡೆಯಲಿರುವ ಐಪಿಎಲ್ 2026ರ ಫೈನಲ್ ಪಂದ್ಯ ಹಾಗೂ ಐಸಿಸಿ ಬೋರ್ಡ್ ಸಭೆಯಲ್ಲಿ ಭಾಗವಹಿಸಲು ಅಧಿಕೃತ ಆಹ್ವಾನ ಲಭಿಸಿದೆ ಎಂದು ವರದಿಯಾಗಿವೆ.



ರಾಜತಾಂತ್ರಿಕವಾಗಿ ಈ ಆಹ್ವಾನ ಏಕೆ ಮುಖ್ಯ

ಮೇ 30 ಮತ್ತು 31 ರಂದು ಭಾರತದ ಅಹಮದಾಬಾದ್‌ನಲ್ಲಿ ಅಂತರಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ತ್ರೈಮಾಸಿಕ ಸಭೆ ನಡೆಯಲಿದೆ. ಇದೇ ವೇಳೆ ಮೇ 31 ರಂದು ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣವಾದ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಐಪಿಎಲ್ 2026ರ ಹೈ-ವೋಲ್ಟೇಜ್ ಫೈನಲ್ ಪಂದ್ಯವೂ ಜರುಗಲಿದೆ. ಈ ಎರಡೂ ಐತಿಹಾಸಿಕ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಲು ಮೊಹ್ಸಿನ್ ನಖ್ವಿ ಅವರಿಗೆ ಆಮಂತ್ರಣ ನೀಡಲಾಗಿದೆ ಎಂದು ಪಾಕ್ ಚಾನೆಲ್ ಜಿಯೋ ನ್ಯೂಸ್ ವರದಿ ಮಾಡಿದೆ. ಮೊಹ್ಸಿನ್ ನಖ್ವಿ ಅವರು ಕೇವಲ ಪಿಸಿಬಿ ಅಧ್ಯಕ್ಷರಷ್ಟೇ ಅಲ್ಲದೆ, ಪಾಕಿಸ್ತಾನದ ಹಾಲಿ ಗೃಹ ಸಚಿವರೂ ಆಗಿರುವುದರಿಂದ ಅವರ ಭಾರತ ಪ್ರವಾಸ ರಾಜತಾಂತ್ರಿಕವಾಗಿ ಅತ್ಯಂತ ಸೂಕ್ಷ್ಮವಾಗಿದೆ.

ಮೂಲಗಳ ಪ್ರಕಾರ, ಅವರು ಭಾರತಕ್ಕೆ ಪ್ರಯಾಣ ಬೆಳೆಸಬೇಕೇ ಅಥವಾ ಬೇಡವೇ ಎಂಬ ಅಂತಿಮ ನಿರ್ಧಾರವನ್ನು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರೇ ತೆಗೆದುಕೊಳ್ಳಲಿದ್ದಾರೆ. ಸರ್ಕಾರದ ಅನುಮತಿ ಸಿಕ್ಕರೆ ಮಾತ್ರ ನಖ್ವಿ ಭಾರತಕ್ಕೆ ಆಗಮಿಸಲಿದ್ದಾರೆ. ಕಳೆದ ಹಲವು ವರ್ಷಗಳಿಂದ ಭಾರತ ಮತ್ತು ಪಾಕಿಸ್ತಾನ್ ನಡುವೆ ಯಾವುದೇ ದ್ವಿಪಕ್ಷೀಯ ಕ್ರಿಕೆಟ್ ಸರಣಿಗಳು ನಡೆಯುತ್ತಿಲ್ಲ. ಐಪಿಎಲ್‌ನಲ್ಲೂ ಪಾಕ್ ಆಟಗಾರರಿಗೆ ಅವಕಾಶವಿಲ್ಲ.

**ನಖ್ವಿ ಅವರ ಹೆಚ್ಚುವರಿ ಜವಾಬ್ದಾರಿ:** ಮೊಹ್ಸಿನ್ ನಖ್ವಿ ಅವರು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಐಸಿಸಿ ಸಭೆಯಲ್ಲಿ ಅವರ ಉಪಸ್ಥಿತಿ ಮುಖ್ಯ ಎನ್ನಲಾಗಿದೆ.

**ಕ್ರಿಕೆಟ್ ರಾಜತಾಂತ್ರಿಕತೆ:** ಈ ಆಹ್ವಾನವು ಉಭಯ ದೇಶಗಳ ನಡುವಿನ ಕ್ರೀಡಾ ಸಂಬಂಧಗಳ ದೃಷ್ಟಿಯಿಂದ ಸಣ್ಣ ಆಶಾಕಿರಣವಾಗಬಹುದು ಎಂದು ವಿಶ್ಲೇಷಕರು ಭಾವಿಸಿದ್ದಾರೆ. ಮೊಹ್ಸಿನ್ ನಖ್ವಿ ಮತ್ತು ಏಷ್ಯಾಕಪ್ ವಿವಾದವು ಭಾರತ ಹಾಗೂ ಪಾಕಿಸ್ತಾನ್ ಕ್ರಿಕೆಟ್ ಇತಿಹಾಸದಲ್ಲೇ ಅತ್ಯಂತ ಅತಿರೇಕದ ರಾಜತಾಂತ್ರಿಕ ಬಿಕ್ಕಟ್ಟಿಗೆ ಕಾರಣವಾಗಿತ್ತು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966